ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಡಿಸೆಂಬರ್ 14 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 237 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣ

ದರ್ಶನ್ ಗ್ಯಾಂಗ್‌ಗೆ ಜಾಮೀನು

●ಹೈಕೋರ್ಟ್ ಏಕಸದಸ್ಯ ಪೀಠದ ಆದೇಶ ●ಸರ್ಕಾರ ಮೇಲ್ಮನವಿಗೆ ನಿರ್ಧಾರ

ಬೆಂಗಳೂರು, ಡಿ.13(ಕೆಎಂಶಿ)– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ನಟ ದರ್ಶನ್, ಪವಿತ್ರ ಗೌಡ ಸೇರಿದಂತೆ ಏಳು ಮಂದಿಗೆ ರಾಜ್ಯ ಹೈಕೋರ್ಟ್ ಷರತ್ತು ಬದ್ಧ ಜಾಮೀನು ನೀಡಿದೆ.

ಹೈಕೋರ್ಟ್ ತೀರ್ಪು ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಹಸಿರು ನಿಶಾನೆ ತೋರಿದೆ. ದರ್ಶನ್ ಹಾಗೂ ಇತರರ ಜಾಮೀನು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿಶ್ವಜಿತ್ ಶೆಟ್ಟಿ ಅವರು, ಪವಿತ್ರಗೌಡ ಅಲ್ಲದೆ, ಪ್ರದೂಷ್, ಜಗದೀಶ್, ನಾಗರಾಜು, ಲಕ್ಷ್ಮಣ್ ಅವರಿಗೂ ಜಾಮೀನು ಮಂಜೂರು ಮಾಡಿದ್ದಾರೆ.

ಈಗಾಗಲೇ ನಾಲ್ಕು ಮಂದಿಗೆ ಜಾಮೀನು ದೊರೆತಿರುವ ಹಿನ್ನೆಲೆಯಲ್ಲಿ ಪ್ರಕರಣದ ಎಲ್ಲಾ 11 ಆರೋಪಿಗಳಿಗೂ ಜಾಮೀನು ದೊರೆತಂತಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸುದೀರ್ಘ ವಾದ–ಪ್ರತಿವಾದ ಆಲಿಸಿ, ಇದೇ 9ರಂದು ಕಾಯ್ದಿರಿಸಿದ್ದ ತೀರ್ಪನ್ನು ಏಕಸದಸ್ಯ ಪೀಠ ಇಂದು ಮಧ್ಯಾಹ್ನ ಪ್ರಕಟಿಸಿತು. ಎಲ್ಲಾ ಜಾಮೀನು ಅರ್ಜಿಗಳನ್ನು ಪುರಸ್ಕರಿಸಲಾಗಿದೆ, ಅವರುಗಳು ತಲಾ ಇಬ್ಬರ ಜಾಮೀನು ನೀಡಿ, ಪೀಠದ ವಿಸ್ತೃತ ಆದೇಶದಲ್ಲಿ ತಿಳಿಸಿರುವಂತೆ ಕೆಳಹಂತದ ■5ನೇ ಪುಟಕ್ಕೆ



ನಟ ದರ್ಶನ್



ಪವಿತ್ರಾಗೌಡ

ಶಿಕ್ಷೆ ಆಗುವ ನಂಬಿಕೆಯಿದೆ...

ಚಿತ್ರದುರ್ಗ: ನಟ ದರ್ಶನ್ ಮತ್ತು ಅವರ ಗ್ಯಾಂಗ್‌ನವರಿಗೆ ಜಾಮೀನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ರೇಣಕಾಸ್ವಾಮಿ ಅವರ ತಂದೆ ಕಾಶೀನಾಥಯ್ಯ ಚಿತ್ರದುರ್ಗದಲ್ಲಿ ಹೇಳಿಕೆ ನೀಡಿ, 'ನಮಗೆ ನ್ಯಾಯಾಂಗ ವ್ಯವಸ್ಥೆ ಮೇಲೆ ಸಂಪೂರ್ಣ ನಂಬಿಕೆ ಇದೆ. ಜಾಮೀನು ಮಂಜೂರು ಬಗ್ಗೆ ಮಾಧ್ಯಮಗಳಿಂದ ತಿಳಿದಿದೆ. ವಿಚಾರಣೆ ಬಳಿಕ ಸೂಕ್ತ ನ್ಯಾಯ ಸಿಗುವ ನಂಬಿಕೆಯಿದೆ. ತಾತ್ಕಾಲಿಕವಾಗಿ ಆರೋಪಿಗಳಿಗೆ ಜಾಮೀನು ಆಗಿರಬಹುದು. ಆದರೆ ■5ನೇ ಪುಟಕ್ಕೆ



ಕಾಶೀನಾಥಯ್ಯ

ಯಾರೇ ಕಾನೂನು ಕೈಗೆತ್ತಿಕೊಂಡರೂ ಸರ್ಕಾರ ಕಣ್ಮುಚ್ಚಿ ಕೂರಲು ಸಾಧ್ಯವಿಲ್ಲ

●ಸ್ವಾಮೀಜಿಯಾಗಲೀ, ಯಾರೇ ಆಗಲಿ, ಎಲ್ಲರಿಗೂ ಕಾನೂನು ಒಂದೇ ●ಪಂಚಮಸಾಲಿ ಸಮುದಾಯದವರ ಹೋರಾಟಕ್ಕೆ ಸಿಎಂ ಸಿದ್ದರಾಮಯ್ಯ ಖಡಕ್ ಪ್ರತಿಕ್ರಿಯೆ ●ಶಾಂತಿಯುತವಾಗಿ ಪ್ರತಿಭಟನೆ ನಡೆಸಲು ಎಲ್ಲರಿಗೂ ಅವಕಾಶವಿದೆ

ಬೆಂಗಳೂರು, ಡಿ.13(ಕೆಎಂಶಿ)– ಕಾನೂನು ಕೈಗೆ ತೆಗೆದುಕೊಂಡು ಸಾರ್ವಜನಿಕರಿಗೆ ತೊಂದರೆಯಾದರೆ ಸರ್ಕಾರ ಕಣ್ಣುಮುಚ್ಚಿಕೊಂಡು ಕೂರಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಪಂಚಮಸಾಲಿ ಸಮುದಾಯದವರು ಪ್ರವರ್ಗ 2ಎ ಅಡಿಯಲ್ಲಿ ಮೀಸಲಾತಿ ಕಲ್ಪಿಸುವಂತೆ ಕೇಳು ವುದಕ್ಕೆ, ಚಳವಳಿ ಮಾಡುವುದಕ್ಕೆ ನಮ್ಮ ತಕರಾರಿಲ್ಲ. ಆದರೆ, ಶಾಂತಿಯುತವಾಗಿ ಪ್ರತಿಭಟನೆ ಮಾಡಬೇಕು, ಕಾನೂನನ್ನು ಯಾರೂ ಕೈಗೆ ತೆಗೆದುಕೊಳ್ಳಬಾರದು ಎಂದರು. ಮುಖ್ಯಮಂತ್ರಿಗಳು ಹೃದಯ ಹೀನರು ಎಂಬ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿಕೆಗೆ ಪ್ರತಿಕ್ರಿಯಿಸಿ, ಈ ಬಗ್ಗೆ ಜನರು ತೀರ್ಮಾನ ಮಾಡುತ್ತಾರೆ ಎಂದರು.

ಸ್ವಾಮೀಜಿಯಾಗಲೀ, ಯಾರಾದರೂ ಆಗಿರಲೀ, ಎಲ್ಲರಿಗೂ ಕಾನೂನು ಒಂದೇ. ಸಂವಿಧಾನದ 14ನೇ ವಿಧಿ ಪ್ರಕಾರ ಕಾನೂನಿನ ಮುಂದೆ ಎಲ್ಲರೂ ಸಮಾನರು ಹಾಗೂ ಕಾನೂನಿನ ಸಮಾನ ರಕ್ಷಣೆ ಖಾತ್ರಿಪಡಿಸುತ್ತದೆ. ಪ್ರವರ್ಗ 2ಎ ಅಡಿಯಲ್ಲಿರುವ ಸಮುದಾಯಗಳು ಪಂಚಮಸಾಲಿ ಸಮುದಾಯವನ್ನು 2ಎಗೆ ಸೇರಿಸಲು ವಿರೋಧ ವ್ಯಕ್ತಪಡಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿ, ಅಭಿಪ್ರಾಯ ತಿಳಿಸಲು ಅವರಿಗೆ ಸ್ವಾತಂತ್ರ್ಯವಿದೆ, ಸ್ವಾಮೀಜಿಗಳಿಗೂ ಅಭಿಪ್ರಾಯ ತಿಳಿಸಲು ಸ್ವಾತಂತ್ರ್ಯವಿದೆ, ಅಂತಿಮವಾಗಿ ಸಂವಿಧಾನದ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ.



ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕುವ ವೇಳೆ ಪಂಚಮಸಾಲಿ ಸಮುದಾಯದ ಜನರ ಮೇಲೆ ಪೊಲೀಸರು ಕಲ್ಲು ಹೊಡೆದಿದ್ದಾರೆ ಎಂಬ ಬಿಜೆಪಿ ಆರೋಪಕ್ಕೆ, ಅವರು ಕಲ್ಲು ಹೊಡೆದಿರುವುದು, ಬ್ಯಾರಿಕೇಡ್ ತಳ್ಳಿ ಒಳಗೆ ನುಗ್ಗುವುದರ ಫೋಟೋಗಳನ್ನು ತೋರಿಸುತ್ತೇವೆ. ಸ್ವಾಮೀಜಿಗಳು ರಸ್ತೆಯಲ್ಲಿ ಏಕೆ ಕುಳಿತುಕೊಂಡಿದ್ದಾರೆ. ಪ್ರತಿಭಟನಾಕಾರರು ಕಲ್ಲು ತೂರದಿದ್ದರೆ 20ಕ್ಕೂ ಹೆಚ್ಚು ಪೊಲೀಸರಿಗೆ ಗಾಯ ಹೇಗಾಯಿತು. ಪೊಲೀಸರೇ ಕಲ್ಲು ಎಸೆದುಕೊಂಡಿದ್ದಾರೆಯೇ, ನಾನು ಹೇಳಿರುವುದಕ್ಕೆ ಸಾಕ್ಷಿಯಿದೆ ಎಂದರು.

ಮೀಸಲಾತಿಗೆ ಸಂಬಂಧಿಸಿದಂತೆ ಪಂಚಮಸಾಲಿ ಸಮಾಜದವರು ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮುಂದೆ ಹೋಗಬೇಕು. ಬಿಜೆಪಿ ಕಾಲದಲ್ಲಿ ಆಯೋಗದ ಅಧ್ಯಕ್ಷರಾಗಿದ್ದ ಜಯಪ್ರಕಾಶ್ ಹೆಗಡೆಯವರ ವರದಿಯಲ್ಲಿ ■5ನೇ ಪುಟಕ್ಕೆ

ಅಲ್ಲು ಅರ್ಜುನ್ ಬಂಧನ; ಹಿಂದೆಯೇ ಬಿಡುಗಡೆ!

ಹೈದರಾಬಾದ್, ಡಿ.13– 'ಪುಷ್ಪ–2: ದಿ ರೂಲ್' ಚಿತ್ರದ ಪ್ರದರ್ಶನದ ವೇಳೆ ಸಂಭವಿಸಿದ ಕಾಲ್ತುಳಿತ ಘಟನೆಗೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿರುವ ತೆಲುಗು ಸೂಪರ್‌ಸ್ಟಾರ್ ಅಲ್ಲು ಅರ್ಜುನ್‌ಗೆ ತೆಲಂಗಾಣ ಹೈಕೋರ್ಟ್ ಶುಕ್ರವಾರ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಡಿ.4ರಂದು ಹೈದರಾಬಾದ್‌ನ ಸಂಧ್ಯಾ ಥಿಯೇಟರ್‌ನಲ್ಲಿ ಪುಷ್ಪ 2 ಚಿತ್ರದ ಪ್ರದರ್ಶನದ ವೇಳೆ ಕಾಲ್ತುಳಿತ ಉಂಟಾಗಿ ಮಹಿಳೆಯೊಬ್ಬರು ಮೃತಪಟ್ಟು, ಆಕೆಯ ಮಗ ಗಂಭೀರವಾಗಿ ಗಾಯಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು ಹೈದರಾಬಾದ್ ಪೊಲೀಸರು ನಟ ಅಲ್ಲು ಅರ್ಜುನ್ ಅವರನ್ನು ಬಂಧಿಸಿದ್ದರು. ಬಳಿಕ ನಾಂಪಲ್ಲಿ ನ್ಯಾಯಾಲಯ ಅಲ್ಲು ಅರ್ಜುನ್ ಅವರಿಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿತ್ತು. ಇದೀಗ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿದೆ. ಇದರಿಂದ ಅಲ್ಲು ಅರ್ಜುನ್ 14 ದಿನಗಳ ಜೈಲು ■5ನೇ ಪುಟಕ್ಕೆ



ಜಾಮೀನು ಪಡೆದು ಹೊರ ಬರುತ್ತಿರುವ ಅಲ್ಲು ಅರ್ಜುನ್

ವಕ್ಫ್ ವಿವಾದ: ಚರ್ಚೆಗೆ ಅವಕಾಶ ನೀಡದ ಸ್ಪೀಕರ್; ವಿಧಾನಸಭೆಯಿಂದ ಬಿಜೆಪಿ ಶಾಸಕರ ಸಭಾತ್ಯಾಗ

ಬೆಳಗಾವಿ: ವಕ್ಫ್ ಆಸ್ತಿ ವಿವಾದ ಕುರಿತ ಚರ್ಚೆಗೆ ಸ್ಪೀಕರ್ ಯುಟಿ ಖಾದರ್ ಅವಕಾಶ ನೀಡುತ್ತಿಲ್ಲ ಎಂದು ಆರೋಪಿಸಿ ಬಿಜೆಪಿ ಶಾಸಕರು ಶುಕ್ರವಾರ ವಿಧಾನಸಭೆಯಿಂದ ಸಭಾತ್ಯಾಗ ನಡೆಸಿದರು.

ಬಿಜೆಪಿ ಶಾಸಕ ಎನ್. ಮುನಿರತ್ನ ವಿರುದ್ಧದ ಹನಿಟ್ರ್ಯಾಪ್ ಹಾಗೂ ಎದುರಾಳಿಗಳಿಗೆ ಹೆಚ್‌ಐವಿ ಸೋಂಕು ತಗುಲುವ ಇಂಜೆಕ್ಷನ್ ಆರೋಪ ಕುರಿತು ಸದನದಲ್ಲಿ ಚರ್ಚೆಗೆ ಕಾಂಗ್ರೆಸ್ ಶಾಸಕರು ಪಟ್ಟು ಹಿಡಿದಾಗ ವಿಪಕ್ಷ ನಾಯಕ ಆರ್.ಅಶೋಕ್ ನೇತೃತ್ವದ ಬಿಜೆಪಿ ಶಾಸಕರು ಸಭೆಯಿಂದ ನಿರ್ಗಮಿಸಿದರು. ಸಭಾತ್ಯಾಗದ ನಂತರ ಆರ್.ಅಶೋಕ್ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸುವರ್ಣ ವಿಧಾನಸೌಧದಲ್ಲಿ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದರು. ಸ್ಪೀಕರ್ ಒಂದು ಕಡೆಯವರಂತೆ ವರ್ತಿಸುತ್ತಿದ್ದಾರೆ. ವಿಧಾನಸಭೆಯಲ್ಲಿ ವಕ್ಫ್ ವಿಚಾರ ಕುರಿತ ಚರ್ಚೆಗೆ ಸೋಮವಾರವೇ ಅವರ ಬಳಿ ಮನವಿ ಮಾಡಿದ್ದೆ. ಸಾಮಾನ್ಯವಾಗಿ ಪ್ರಶ್ನೋತ್ತರ ಅವಧಿ ನಂತರ ಚರ್ಚೆಗೆ ಸಮಯವನ್ನು ನೀಡಲಾಗುತ್ತದೆ. ಉದ್ದೇಶಪೂರ್ವಕವಾಗಿ ರಾಜ್ಯ ಸರ್ಕಾರ ಚರ್ಚೆಗೆ ಅವಕಾಶ ಮಾಡಿಕೊಡುತ್ತಿಲ್ಲ ಎಂದು ಆರೋಪಿಸಿದರು. ■5ನೇ ಪುಟಕ್ಕೆ

ವಕ್ಫ್ ಆಸ್ತಿಯಿಂದ ಬಡವರು, ರೈತರ ಒಕ್ಕಲೆಬ್ಬಿಸುವುದಿಲ್ಲ

ಬೆಳಗಾವಿ: ವಕ್ಫ್ ಆಸ್ತಿಗಳಲ್ಲಿ ಮನೆ ಕಟ್ಟಿಕೊಂಡು ವಾಸಿಸುತ್ತಿರುವ ಬಡವರಿಗೆ ಆ ಸ್ವತ್ತುಗಳನ್ನು ನೀಡಲಾಗುವುದು. ರೈತರನ್ನೂ ವಕ್ಫ್ ಆಸ್ತಿಗಳಿಂದ ಒಕ್ಕಲೆಬ್ಬಿಸುವುದಿಲ್ಲ ಎಂದು ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವ ಬಿ.ಜೆಡ್.ಜಮೀರ್ ಅಹಮ್ಮದ್ ಖಾನ್ ವಿಧಾನಸಭೆಯಲ್ಲಿ ಶುಕ್ರವಾರ ಪ್ರಕಟಿಸಿದರು. ಬಡವರು, ರೈತರನ್ನು ಒಕ್ಕಲೆಬ್ಬಿಸುವುದಿಲ್ಲ. ಮಠ–ಮಂದಿರಗಳ ಸ್ವತ್ತನ್ನೂ ವಶಕ್ಕೆ ಪಡೆಯುವುದಿಲ್ಲ. ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಉನ್ನತಮಟ್ಟದ ಸಭೆ ನಡೆಸಿ ಈ ಕುರಿತು ನಿರ್ಧಾರ ಕೈಗೊಳ್ಳುತ್ತೇವೆ ಎಂದರು. ವಕ್ಫ್ ಆಸ್ತಿಗಳಲ್ಲಿರುವ ಎಲ್ಲ ಒತ್ತುವರಿಗಳನ್ನು ತೆರವುಗೊಳಿಸುವಂತೆ ಮುಖ್ಯಮಂತ್ರಿಯವರು ಸೂಚಿಸಿದ್ದಾರೆ ■5ನೇ ಪುಟಕ್ಕೆ



ಜಮೀರ್

ಮೈಸೂರು ಮಿತ್ರ

ಶನಿವಾರ 14 ಡಿಸೆಂಬರ್ 2024

ಶ್ರೀರಂಗಪಟ್ಟಣ ಶ್ರೀ ಮೂಡಲ ಬಾಗಿಲು ಆಂಜನೇಯ ಸ್ವಾಮಿ ದೇವಸ್ಥಾನ ಪುನರ್ ನಿರ್ಮಾಣ ಸಂಕಲ್ಪ

ಹಿಂದು ಜಾಗರಣ ವೇದಿಕೆಯಿಂದ ಡಿ.15ಕ್ಕೆ ಬೃಹತ್ ಸಮಾವೇಶ : ಸಂಕೀರ್ತನಾ ಯಾತ್ರೆ

ಮೈಸೂರು, ಡಿ.13(ಜಿಎ)– ಹಿಂದೂ ಜಾಗರಣ ವೇದಿಕೆ ವತಿಯಿಂದ ಡಿ.15 ರಂದು ಶ್ರೀರಂಗಪಟ್ಟಣದಲ್ಲಿ ಶ್ರೀ ಮೂಡಲು ಬಾಗಿಲು ಆಂಜನೇಯ ಸ್ವಾಮಿ ದೇವ ಸ್ಥಾನದ ಪುನರ್ ನಿರ್ಮಾಣ ಸಂಕಲ್ಪ ಮಾಲೆಯ ಬೃಹತ್ ಸಮಾವೇಶ ಮತ್ತು ಸಂಕೀರ್ತನ ಯಾತ್ರೆ ನಡೆಯಲಿದೆ ಎಂದು ವೇದಿಕೆಯ ಸಂಚಾಲಕ ಲೋಹಿತ್ ವಿ.ಅರಸ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಲವಾರು ವರ್ಷಗಳಿಂದ ಶ್ರೀರಂಗಪಟ್ಟಣದಲ್ಲಿ ಹಿಂದೂ ಜಾಗರಣ ವೇದಿಕೆ ವತಿಯಿಂದ ಶ್ರೀ ಹನುಮ ಮಾಲೆ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿದ್ದು, ಅದರಂತೆ ಮಾಲಾಧಾರಿಗಳು ಈಗಾಗಲೇ ಹನುಮ ಜಯಂತಿಯ 7 ದಿನಗಳ ಮುಂಚಿತವಾಗಿಯೇ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಗಳಲ್ಲಿ ಮಾಲೆ ಧರಿಸಿದ್ದಾರೆ ಎಂದರು.

ಈ ಹನುಮ ಮಾಲೆ ವ್ರತಾಚರಣೆಯು ಮೂಡಲ ಬಾಗಿಲು ಆಂಜನೇಯ ತನ್ನ ಮೂಲ ಸ್ಥಾನಕ್ಕೆ ಮರಳಬೇಕು ಎಂಬ ಉದ್ದೇಶದಿಂದ ಮಾಡಲಾಗಿದೆ. ಪ್ರಸ್ತುತ ಶ್ರೀರಂಗಪಟ್ಟಣದ ಕ್ಷಣಾಂಬಿಕೆ ಹಾಗೂ ಜ್ಯೋತಿರ್ಭೀಮೇಶ್ವರ ದೇವಸ್ಥಾನದ ಬಳಿ ಇರುವ ಪುಟ್ಟ ಸ್ಥಳದಲ್ಲಿ ಆಂಜನೇಯ ಸ್ವಾಮಿಯನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು. ಅಂದು ಬೆಳಗ್ಗೆ 10.30ಕ್ಕೆ ಶ್ರೀರಂಗಪಟ್ಟಣದ ನಿಮಿಷಾಂಬ ದೇವ ಸ್ಥಾನದ ಆವರಣದಲ್ಲಿ ಬೃಹತ್ ಸಮಾವೇಶ ಹಾಗೂ ಸಂಕೀರ್ತನ ಯಾತ್ರೆ ಏರ್ಪಡಿಸ ಲಾಗಿದೆ. ಎಲ್ಲಾ ಹನುಮ ಭಕ್ತರು ಶ್ರೀರಂಗ ಪಟ್ಟಣಕ್ಕೆ ಸಾಗಿ ಮೂಡಲ ಬಾಗಿಲು ಆಂಜನೇಯ ಸ್ವಾಮಿ ದರ್ಶನ ಪಡೆದು ನಂತರ ನಿಮಿಷಾಂಬ ದೇವಸ್ಥಾನದಲ್ಲಿ ಆಯೋಜಿಸಿರುವ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದ ನಂತರ ಮಾಲೆ ವಿಸರ್ಜನೆ ಮಾಡಿ, ತದನಂತರ ಸಂಕೀರ್ತನ ಯಾತ್ರೆಯಲ್ಲಿ ಏರ್ಪಡಿಸಿರುವ ಪ್ರಸಾದ ಸ್ವೀಕರಿಸಿ ತಮ್ಮ ತಮ್ಮ ಊರುಗಳಿಗೆ ಮರಳಲಿದ್ದಾರೆ ಎಂದರು.

ದೇಶದಲ್ಲಿ ನಡೆಯುತ್ತಿರುವ ಲವ್ ಜಿಹಾದ್, ಲ್ಯಾಂಡ್ ಜಿಹಾದ್ ರೀತಿಯಲ್ಲಿ ಹಿಂದೂ ಹಬ್ಬಗಳ ಮೇಲೆಯೂ ಜಿಹಾದ್ ಆರಂಭಿಸಿದ್ದು, ನಮ್ಮ ಈ ಸಮಾವೇಶ ಮತ್ತು ಸಂಕೀರ್ತನ ಯಾತೆ ವಿರೋಧಿಸಿ ಈಗಾಗಲೇ ಕೆಲ ಕೋಮುವಾದಿಗಳು ಸೆಕ್ಷನ್ 144 ಜಾರಿಗೊಳಿಸುವಂತೆ ಮನವಿ ಮಾಡಿದ್ದಾರೆ ಎಂದು ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಸಂಯೋಜಕ ರಾದ ರಂಗಸ್ವಾಮಿ, ಮಹೇಶ್ ಕಡಗದಾಳು, ಚಂದನ್, ಆನಂದ್ ಉಪಸ್ಥಿತರಿದ್ದರು.

ಕೆಆರ್‌ಎಸ್ ಪೊಲೀಸ್ ಠಾಣೆ ಬಳಿಯೇ ಬೇಕರಿ ಮಾಲೀಕನ ಕಗ್ಗೊಲೆ; ಹೋಟೆಲ್ ಮಾಲೀಕರ ಸಂಘ ಖಂಡನೆ



ನಾರಾಯಣಗೌಡ

ಮೈಸೂರು, ಡಿ.13– ಮಂಡ್ಯ ಜಿಲ್ಲೆ, ಕೆಆರ್‌ಎಸ್ ಪೊಲೀಸ್ ಠಾಣೆ ಬಳಿಯೇ ಬೇಕರಿ ಮಾಲೀಕನನ್ನು ರೌಡಿಗಳ ಗುಂಪು ಹತ್ಯೆ ಮಾಡಿ ರುವ ಘಟನೆಯನ್ನು ಮೈಸೂರು ಹೋಟೆಲ್ ಮಾಲೀಕರ ಸಂಘ ತೀವ್ರವಾಗಿ ಖಂಡಿಸಿದೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ, ಬೇಕರಿ ಮಾಲೀಕ ಚೇತನ್ ಹತ್ಯೆ, ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಸಾಕ್ಷಿ. ವ್ಯಾಪಾರಿಗಳಿಗೆ ಅದರಲ್ಲೂ ಆತಿಥ್ಯ ನೀಡುವ ಉದ್ಯಮಿಗಳಿಗೆ ರಕ್ಷಣೆಯೇ ಇಲ್ಲ ದಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಜೀವನೋಪಾಯಕ್ಕೆ ವಲಸೆ ಬಂದು ವ್ಯಾಪಾರದಲ್ಲಿ ತೊಡಗಿಸಿಕೊಂಡಿದ್ದೇ ತಪ್ಪಾಗಿಹೋಗಿದೆ. ಪೊಲೀಸ ರಿಂದ ಭದ್ರತೆ ಇಲ್ಲದಾಗಿದೆ. ಪೊಲೀಸರು ರೌಡಿಗಳ ಜೊತೆ ಪಾರ್ಟಿಯಲ್ಲಿ ಭಾಗವಹಿಸಿದ ಫೋಟೋಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡು ವುದು ಸಾಮಾನ್ಯವಾಗಿಬಿಟ್ಟಿದೆ. ಇದರಿಂದ ರೌಡಿಗಳಿಗೆ ಪೊಲೀಸರ ಭಯವೇ ಇಲ್ಲದಂತಾಗಿದೆ.

ಕೆಆರ್‌ಎಸ್ ಬೃಂದಾವನ ಗಾರ್ಡನ್ ನಲ್ಲಿ ಪ್ರವಾಸಿಗರಿಗೂ ರಕ್ಷಣೆ ಇಲ್ಲ. ರೌಡಿಗಳ ಉಪಟಳದಿಂದ ನೊಂದ ಅದೆಷ್ಟೋ ಪ್ರವಾಸಿಗರು ಭಯದಿಂದ ದೂರು ನೀಡದೆ ವಾಪಸ್ಸಾಗುತ್ತಾರೆ. ಇದೀಗ ಪೊಲೀಸ್ ಠಾಣೆ ಸನಿಹದಲ್ಲೇ ವ್ಯಾಪಾರಿಯ ಬರ್ಬರ ಹತ್ಯೆಯಾಗಿದೆ. ಇದಕ್ಕೆ ಪೊಲೀಸರ ವೈಫಲ್ಯವೇ ಕಾರಣ. ಈ ಘಟನೆಯನ್ನು ಸರ್ಕಾರ ಗಂಭೀರ ವಾಗಿ ಪರಿಗಣಿಸಿ, ಕೂಡಲೇ ಸಂಬಂಧ ಪಟ್ಟ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಅಮಾನತು ಮಾಡ ಬೇಕು. ಚೇತನ್ ಅವರ ಕುಟುಂಬ ದವರಿಗೆ ನ್ಯಾಯ ದೊರಕಿಸಿಕೊಡಬೇಕು. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ಹಾಗೂ ಗೃಹಸಚಿವರು ಕ್ರಮ ವಹಿಸಬೇಕು. ಮೃತರ ಕುಟುಂಬಕ್ಕೆ ನ್ಯಾಯ ಸಿಗುವವರೆಗೂ ಮೈಸೂರು ಹೋಟೆಲ್ ಮಾಲೀಕರ ಸಂಘ ಹೋರಾಟ ಮುಂದುವರೆಸಲಿದೆ ಎಂದು ಸಿ.ನಾರಾಯಣಗೌಡ ಎಚ್ಚರಿಸಿದ್ದಾರೆ.

ಮಹಿಳೆಯ ಆತ್ಮಹತ್ಯೆಗೆ ಕಾರಣನಾದ ವ್ಯಕ್ತಿಗೆ ಐದು ವರ್ಷ ಜೈಲು ಶಿಕ್ಷೆ

ಮೈಸೂರು, ಡಿ.13(ಎಸ್‌ಬಿಡಿ)– ಮಹಿಳೆಗೆ ಕಿರುಕುಳ ನೀಡಿ, ಆಕೆಯ ಆತ್ಮಹತ್ಯೆಗೆ ಕಾರಣ ನಾದ ವ್ಯಕ್ತಿಗೆ ಮೈಸೂರಿನ ಮೂರನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಐದು ವರ್ಷ ಜೈಲು ಶಿಕ್ಷೆ ವಿಧಿಸಿದೆ.

ತಿ.ನರಸೀಪುರ ತಾಲೂಕು ಕೇತಹಳ್ಳಿ ಗ್ರಾಮದ ಸಿದ್ದರಾಜುಗೆ ಶಿಕ್ಷೆ ವಿಧಿಸಲಾಗಿದೆ. ಈತನ ಕಿರುಕುಳದಿಂದ ಬೇಸತ್ತು ಎದುರು ಮನೆಯ ನಾಗಮ್ಮ ನೇಣು ಹಾಕಿಕೊಂಡು ಮೃತಪಟ್ಟಿದ್ದಾಗಿ ಪ್ರಕರಣ ದಾಖಲಾಗಿತ್ತು.

ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡಿ ಕೊಂಡಿದ್ದ ನಾಗಮ್ಮ ಅವರ ಪತಿ ಜವರೇ ಗೌಡ ತಿಂಗಳಿಗೊಮ್ಮೆ ಊರಿಗೆ ಬಂದು ಹೋಗುತ್ತಿದ್ದರು. ನಾಗಮ್ಮ ಪುತ್ರ ನೊಂದಿಗೆ ಗ್ರಾಮದಲ್ಲೇ ವಾಸವಿದ್ದರು. ಆದರೆ ಎದುರು ಮನೆಯ ಸಿದ್ದರಾಜು ಸಿಕ್ಕಾಗಲೆಲ್ಲಾ ನಾಗಮ್ಮ ಅವರೊಂದಿಗೆ ಅನುಚಿತವಾಗಿ ವರ್ತಿಸು ವುದು, ರೇಗಿಸುವುದು ಮಾಡುತ್ತಿದ್ದ. ಮನೆ ಯಲ್ಲಿ ನಾಗಮ್ಮ ಒಬ್ಬರೇ ಇದ್ದಾಗ ಬಾಗಿಲು ತಟ್ಟಿ ಕಿರುಕುಳ ನೀಡುತ್ತಿದ್ದ. ಈ ವಿಚಾರ ವಾಗಿ ಗ್ರಾಮದಲ್ಲಿ ನ್ಯಾಯಪಂಚಾಯ್ತಿ ನಡೆಸಿ, ಸಿದ್ದರಾಜುಗೆ ಬುದ್ಧಿವಾದ ಹೇಳಲಾಗಿತ್ತು.

ಪಂಚಾಯ್ತಿಯಲ್ಲಿ ಇನ್ನು ಮುಂದೆ ಹಾಗೆ ನಡೆದುಕೊಳ್ಳುವುದಿಲ್ಲ ಎಂದು ಮಾತು ನೀಡಿದ್ದ ಸಿದ್ದರಾಜು, ತನ್ನ ದುರ್ವತನೆಯನ್ನು ಮುಂದುವರೆಸಿದ್ದ. 2017ರ ಏಪ್ರಿಲ್ 6ರಂದು ಮನೆಯಲ್ಲಿ ನಾಗಮ್ಮ ಒಬ್ಬರೇ ಇರುವಾಗ ಅವರೊಂದಿಗೆ ಅನುಚಿತ ವಾಗಿ ನಡೆದುಕೊಂಡಿದ್ದ. ಅಲ್ಲದೆ ಸಿದ್ದರಾಜು ಪತ್ನಿಯೂ ಕೂಡ ಸಾರ್ವಜನಿಕವಾಗಿ ನಾಗಮ್ಮ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ದ್ದರು. ಇದರಿಂದ ಅವಮಾನ ತಾಳಲಾರದೆ ನಾಗಮ್ಮ ತಮ್ಮ ಮನೆಯೊಳಗೆ ನೇಣು ಹಾಕಿ ಕೊಂಡು ಆತ್ಮಹತ್ಯೆ ಮಾಡಿಕೊಂಡರು.

ಈ ಸಂಬಂಧ ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಅಂದಿನ ಸಬ್‌ಇನ್ಸ್‌ಪೆಕ್ಟರ್ ಎನ್.ಆನಂದ್ ಪ್ರಕರಣದ ತನಿಖೆ ನಡೆಸಿ, ಸಿದ್ದರಾಜು ಹಾಗೂ ಆತನ ಪತ್ನಿ ವಿರುದ್ಧ ನ್ಯಾಯಾಲಯಕ್ಕೆ ದೋಷಾ ರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ ಮೂರನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ಕೆ.ಭಾಗ್ಯ ಅವರು ಆರೋಪಿ ಸಿದ್ದರಾಜು ವಿರುದ್ಧದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆತನಿಗೆ 5 ವರ್ಷ ಜೈಲು ಶಿಕ್ಷೆ ಹಾಗೂ 50 ಸಾವಿರ ರೂ. ದಂಡ ವಿಧಿಸಿ, ದಂಡದ ಮೊತ್ತವನ್ನು ನಾಗಮ್ಮ ಅವರ ಪುತ್ರನಿಗೆ ನೀಡುವಂತೆ ಆದೇಶಿಸಿದ್ದಾರೆ. ಸರ್ಕಾರಿ ಅಭಿಯೋಜಕ ಟಿ.ಹೆಚ್.ಲೋಲಾಕ್ಷಿ ಸರ್ಕಾರದ ಪರವಾಗಿ ವಾದ ಮಂಡಿಸಿದ್ದರು.

ದಶಕದಿಂದ ಬಂದಾಗಿದ್ದ ಮಾರಮ್ಮನಿಗೆ ಮುಕ್ತಿ!



ದಶಕದ ಬಳಿಕ ಜಯಪುರ ಹೋಬಳಿ ಮಾರ್ಬಳ್ಳಿ ಗ್ರಾಮದ ಮಾರಮ್ಮ ದೇವಾಲಯ ತೆರೆಯಲಾಯಿತು.

ಮೈಸೂರು, ಡಿ.13– ವಿವಾದ ಸುಖಾಂತ್ಯ ವಾದ ಹಿನ್ನೆಲೆಯಲ್ಲಿ ದಶಕದಿಂದ ಮುಚ್ಚಿದ್ದ ದೇವಸ್ಥಾನದ ಬಾಗಿಲು ತೆರೆದು, ಪೂಜೆ ನೆರ ವೇರಿಸಿದ ಪ್ರಸಂಗ ಮೈಸೂರಿನಲ್ಲಿ ನಡೆದಿದೆ.

ಮೈಸೂರು ತಾಲೂಕು ಜಯಪುರ ಹೋಬಳಿ ಮಾರ್ಬಳ್ಳಿ ಗ್ರಾಮ ದೇವತೆ ಮಾರಮ್ಮ ದೇವಾಲಯದಲ್ಲಿ ದಶಕದ ನಂತರ ಶುಕ್ರವಾರ ಅಧಿಕಾರಿಗಳ ಸಮ್ಮುಖದಲ್ಲಿ ಪೂಜೆ ನೆರವೇರಿದ್ದು, ಇನ್ನು ಮುಂದೆ ಧಾರ್ಮಿಕ ಕೈಂಕರ್ಯಗಳು ಎಂದಿನಂತೆ ಮುಂದುವರೆಯಲಿವೆ.

ಸುಮಾರು 11 ವರ್ಷಗಳ ಹಿಂದೆ ಪರಿಶಿಷ್ಟ ಜಾತಿಯವರ ಪ್ರವೇಶಕ್ಕೆ ನಿರ್ಬಂಧ ಹೇರಿದ ಹಿನ್ನಲೆಯಲ್ಲಿ ಭಾರಿ ವಿವಾದ ಉಂಟಾಗಿ ಮಾರಮ್ಮ ದೇವ ಸ್ಥಾನದ ಬಾಗಿಲಿಗೆ ಬೀಗ ಹಾಕಲಾಗಿತ್ತು. ದೇವಾಲಯದ ಬಾಗಿಲು ತೆರೆಸುವ ನಿಟ್ಟಿನಲ್ಲಿ ಹಲವು ಸಂಧಾನ ಸಭೆಗಳನ್ನು ನಡೆಸ ಲಾಗಿತ್ತಾದರೂ ಗ್ರಾಮ ಸ್ತರಲ್ಲಿ ಒಮ್ಮತ ಮೂಡದ ಕಾರಣ ವಿಫಲವಾಗಿದ್ದವು.

ಆದರೆ ಇಂದು ತಹಸೀಲ್ದಾರ್ ಶಿವಕುಮಾರ್ ನೇತೃತ್ವದಲ್ಲಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ನಡೆಸಿದ ಶಾಂತಿ ಸಭೆ ಸಫಲವಾಗಿದೆ. ಗ್ರಾಮದ ಎಲ್ಲಾ ಕೋಮಿನ ಐವರು ಮುಖಂಡರೊಂದಿಗೆ ಸಭೆ ನಡೆಸಿ, ಮನವೊಲಿಸಲಾಯಿತು. ಸುದೀರ್ಘ ಚರ್ಚೆ ನಂತರ ಮಾರಮ್ಮ ದೇವಾಲಯ ಬಾಗಿಲು ಮತ್ತೆ ತೆರೆಯುವ ನಿರ್ಧಾರಕ್ಕೆ ಬರಲಾಯಿತು. ನಂತರದಲ್ಲಿ ಎಲ್ಲಾ ಸಮುದಾಯದ ಮುಖಂಡರು ಹಾಗೂ ತಹಸೀಲ್ದಾರ್ ಸಮ್ಮುಖದಲ್ಲಿ ದೇವಾ ಲಯದ ಬೀಗ ತೆರೆದು, ಗ್ರಾಮ ದೇವತೆಗೆ ವಿಶೇಷ ಪೂಜೆ ನೆರವೇರಿಸುವ ಮೂಲಕ ದಶಕದ ವಿವಾದಕ್ಕೆ ಅಂತ್ಯ ಹಾಡಲಾಯಿತು.

ಬಿ.ಪಿ.ಮಂಜುನಾಥ್‌ಗೆ 'ಗಾನ ಗಂಧರ್ವ' ಪ್ರಶಸ್ತಿ



ಮೈಸೂರು, ಡಿ.13– ಕನ್ನಡ ಸಾಹಿತ್ಯ ಕಲಾಕೂಟ ಮತ್ತು ಕಾವ್ಯ ಲೋಕ ಟ್ರಸ್ಟ್ ಸಹಯೋಗದಲ್ಲಿ ನಗರದ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ನಾಳೆ(ಡಿ.14) ಸಂಜೆ 5ಕ್ಕೆ ಗಾಯಕ ಬಿ.ಪಿ.ಮಂಜುನಾಥ್ ಅವರಿಗೆ 'ಗಾನ ಗಂಧರ್ವ' ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ.

ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಸಮಾರಂಭವನ್ನು ಉದ್ಘಾಟಿಸಲಿದ್ದು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಗಾಯಕ ಬಿ.ಪಿ.ಮಂಜು ನಾಥ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ವಕೀಲ ಹರೀಶ್ ಹೆಗಡೆ, ರೈತ ಮುಖಂಡ ಎಂ.ಬಿ.ಚೇತನ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕಾವ್ಯಲೋಕ ಟ್ರಸ್ಟ್ ಅಧ್ಯಕ್ಷ ಡಾ.ಹೆಚ್.ಬಿ.ರಾಜಶೇಖರ್ ಮತ್ತಿತರರು ಭಾಗವಹಿಸಲಿದ್ದಾರೆ.

ನಟನದಲ್ಲಿ ನಾಟಕ 'ಮಧುರ ಮಂಡೋದರಿ'



ಮೈಸೂರು: ಮೈಸೂರು ಹಾಗೂ ಸುತ್ತಮುತ್ತಲಿನ ರಂಗಾಸಕ್ತರಿಗಾಗಿ ನಟನವು ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ಡಿ.15ರಂದು ಸಂಜೆ 6.30ಕ್ಕೆ ನಟನ ರಂಗಶಾಲೆಯಲ್ಲಿ ರಂಗಬಂಡಿ ಮಳವಳ್ಳಿ ಪ್ರಸ್ತುತಪಡಿಸುವ ಏಕವ್ಯಕ್ತಿ ರಂಗಪ್ರಯೋಗ 'ಮಧುರ ಮಂಡೋದರಿ' ಪ್ರದರ್ಶನಗೊಳ್ಳಲಿದೆ. ನಾಟಕದ ರಚನೆ ಪ್ರಸನ್ನಕುಮಾರ್ ಕೆರಗೋಡು, ವಿನ್ಯಾಸ ಮತ್ತು ನಿರ್ದೇಶನ ಮಧು ಮಳವಳ್ಳಿ. ಮಾಹಿತಿಗೆ 7259537777 ಸಂಪರ್ಕಿಸಬಹುದು.

ಇಂದು ಶ್ರೀ ವೆಂಕಟಾರ್ಜುನ ಧ್ಯಾನ ಮಂದಿರದಲ್ಲಿ ದತ್ತ ಜಯಂತಿ

ಮೈಸೂರು,ಡಿ.13–ಮೈಸೂರಿನ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ ವತಿಯಿಂದ ಡಿ.14ರಂದು ಮೈಸೂರು–ಬನ್ನೂರು ರಸ್ತೆ ಹಾರೋಹಳ್ಳಿ ಗ್ರಾಮದ (ಮೆಲ್ಲಹಳ್ಳಿ ಹತ್ತಿರ)ಲ್ಲಿರುವ ಶ್ರೀ ವೆಂಕಟಾ ರ್ಜುನ ಧ್ಯಾನ ಮಂದಿರದಲ್ಲಿ ದತ್ತ ಜಯಂತಿ ಮಹೋತ್ಸವವನ್ನು ಏರ್ಪಡಿಸಲಾಗಿದೆ.

ಶ್ರೀ ವೆಂಕಟಾಚಲ ಅವಧೂತರ ಆಶೀ ರ್ವಾದ ಮತ್ತು ಶ್ರೀ ಅರ್ಜುನ ಅವ ಧೂತರ ಸಾನ್ನಿಧ್ಯದಲ್ಲಿ ಡಿ.13ರ ಶುಕ್ರವಾರ ಸಂಜೆ 7 ಗಂಟೆಗೆ ಕಳಸ ಸ್ಥಾಪನೆಯೊಂ ದಿಗೆ ಪೂಜಾ ಕಾರ್ಯಕ್ರಮಗಳು ಆರಂಭ ವಾಗಿದ್ದು, ಡಿ.14ರಂದು ಬೆಳಗ್ಗೆ 8 ಗಂಟೆಗೆ ಗಣಪತಿ ಹೋಮದೊಂದಿಗೆ ದತ್ತ ಜಯಂತಿ ಕಾರ್ಯಕ್ರಮಗಳು ಆರಂಭವಾಗಲಿವೆ. ತದನಂತರ ದತ್ತಾತ್ರೇಯ ಹೋಮ, ದಕ್ಷಿಣಮೂರ್ತಿ ಹೋಮ, ಶ್ರೀಧರ ಸ್ವಾಮಿ ಹೋಮ, ಶ್ರೀ ವೆಂಕಟಾಚಲ ಅವಧೂತರ ಹೋಮ, ಶ್ರೀ ಚಂದ್ರ ಶೇಖರ ಭಾರತಿ ಮಹಾಸ್ವಾಮಿಗಳ ಹೋಮ, ಸಾಯಿಬಾಬಾ ಹೋಮ, ರಾಘವೇಂದ್ರ ಸ್ವಾಮಿ ಹೋಮ, ಸದಾಶಿವ ಬ್ರಹ್ಮೇಂದ್ರ ಹೋಮ, ಚಾಮುಂಡೇಶ್ವರಿ ಹೋಮ, ತ್ರಿಪುರ ಸುಂದರಿ ಅಮ್ಮನವರ ಹೋಮ, ಕೃಷ್ಣನ ಹೋಮ, ವರಾಹ ಸ್ವಾಮಿ ಹೋಮಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಯಾದವಗಿರಿ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶ್ರೀ ಹನುಮದ್ ವ್ರತ ಆಚರಣೆ



ಮೈಸೂರಿನ ಯಾದವಗಿರಿ ಶ್ರೀ ಉತ್ತರಾದಿ ಮಠದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶುಕ್ರವಾರ ಶ್ರೀ ಹನುಮದ್ ವ್ರತ ಧಾರ್ಮಿಕ ಕಾರ್ಯಕ್ರಮ ನಡೆಯಿತು.

ಮೈಸೂರು, ಡಿ.13(ಬಿಎಲ್‌ಯು)– ಮೈಸೂರಿನ ಶ್ರೀ ಉತ್ತರಾದಿ ಮಠದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಇಂದು ಶ್ರೀ ಹನುಮದ್ ವ್ರತ ಧಾರ್ಮಿಕ ಕಾರ್ಯಕ್ರಮ ನಡೆಯಿತು.

ನಗರದ ಯಾದವಗಿರಿಯಲ್ಲಿರುವ ಪುರಾತನ ಶ್ರೀ ಆಂಜನೇಯಸ್ವಾಮಿ ದೇವ ಸ್ಥಾನದಲ್ಲಿ ನಡೆದ ಶ್ರೀ ಹನುಮದ್ ವ್ರತ ಕಾರ್ಯಕ್ರಮದಲ್ಲಿ ಶ್ರೀ ಜಯತೀರ್ಥ ವಿದ್ಯಾ ಪೀಠದ ಪ್ರಾಂಶುಪಾಲ ಡಾ.ಸತ್ಯಧ್ಯಾನ ಚಾರ್ಯ ಕಟ್ಟಿ ಸಾನಿಧ್ಯ ವಹಿಸಿದ್ದರು.

ಚೈತ್ರ ಮಾಸದಲ್ಲಿ ಹನುಮಾನ ಜಯಂತಿ ಆಚರಣೆ ಮಾಡುವಂತೆ ಮಾರ್ಗಶಿರ್ಷ ಮಾಸವಾದ ಇಂದು ಶ್ರೀ ಹನುಮದ್ ವ್ರತ ಆಯೋಜಿಸಲಾಗಿತ್ತು. ಇಂದು ಬೆಳಗ್ಗೆ ಸತ್ಯ ನಾರಾಯಣ ಪೂಜೆ ನಂತರ ಹನುಮ ದೇವರನ್ನು ವಿಶೇಷವಾಗಿ ಪೂಜಿಸಲಾಯಿತು. ತರುವಾಯ ಹನುಮ ದೇವರಿಗೆ ಕೆಂಪುದಾರ ಅರ್ಪಿಸಲಾಯಿತು.

ಈ ವೇಳೆ ಪವಮಾನ ಹೋಮ ನೆರ ವೇರಿಸಿ ಹನುಮ ದೇವರಿಗೆ ಜೇನುತುಪ್ಪದ ಅಭಿಷೇಕ ಮಾಡಲಾಯಿತು. ನಂತರ ಪ್ರವಚನ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು.

ಈ ಸಂದರ್ಭದಲ್ಲಿ ಹೆಚ್.ವಿ.ರಾಜೀವ್ ಸ್ನೇಹ ಬಳಗದ ಎಸ್.ಬಿ.ವಾಸುದೇವ ಮೂರ್ತಿ ಆರ್.ಕುಮಾರ್ ಆಯೋಜಿಸಿದ್ದ ಕಾರ್ಯ ಕ್ರಮದಲ್ಲಿ ಡಾ.ಸತ್ಯಧ್ಯಾನಚಾರ್ಯ ಕಟ್ಟಿ ಅವರು ಭಕ್ತರಿಗೆ ತುಳಸಿ ಗಿಡಗಳನ್ನು ವಿತರಿ ಸಿದರು. ನಂತರ ಕಾರ್ಯಕ್ರಮದಲ್ಲಿ ಭಾಗಿ ಯಾಗಿದ್ದ ಭಕ್ತರಿಗೆ ಅನ್ನ ಸಂತರ್ಪಣೆ ಪ್ರಸಾದ ವಿನಿಯೋಗ ಮಾಡಲಾಯಿತು. ಮೈಸೂರು ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಅನಿ ರುದ್ಧಾಚಾರ್ಯ ಪಾಂಡುರಂಗಿ ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಹಾಜರಿದ್ದರು.

ಇಂದು ಜೆಡಿಎಸ್ ಸದಸ್ಯತ್ವ ನೋಂದಣಿ; ಬೂತ್ ಸಮಿತಿ ಅಭಿಯಾನ

ಮೈಸೂರು, ಡಿ.13– ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಡಿ.14ರಂದು ಸಂಜೆ 4 ಗಂಟೆಗೆ ಪಕ್ಷದ ಸದಸ್ಯತ್ವ ನೋಂದಣಿ, ಬೂತ್ ಸಮಿತಿ ಅಭಿಯಾನ ಕಾರ್ಯಕ್ರಮವನ್ನು ಕ್ಷೇತ್ರದ ಅಧ್ಯಕ್ಷ ಪಿ. ಮಂಜುನಾಥ್ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ. ರಾಜ್ಯ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡ, ರಾಜ್ಯ ಕಾರ್ಯಾಧ್ಯಕ್ಷ ಸಾ.ರಾ. ಮಹೇಶ್, ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ವಿವೇಕ್ ಆಗಮಿಸಲಿದ್ದು, ಕಾರ್ಯಕ್ರಮವನ್ನು ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ ಉದ್ಘಾಟಿಸಲಿದ್ದಾರೆ.


ಜೆಡಿಎಸ್ ಮುಖಂಡರಾದ ಹೆಚ್.ಕೆ.ರಮೇಶ್, ಕೆ.ಉಮಾಶಂಕರ್, ಮಾಜಿ ಮೇಯರ್‌ಗಳಾದ ಆರ್.ಲಿಂಗಪ್ಪ, ಎಂ.ಜೆ.ರವಿಕುಮಾರ್, ರಾಜೇಶ್ವರಿ ಸೋಮು, ಶ್ರೀಮತಿ ಭಾಗ್ಯವತಿ, ನಗರ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಪ್ರೇಮಾ ಶಂಕರೇಗೌಡ, ನಗರ ಹಿಂದುಳಿದ ಘಟಕದ ಅಧ್ಯಕ್ಷ ಕುಮಾರ್, ನಗರ ಯುವ ಘಟಕದ ಅಧ್ಯಕ್ಷ ಲೋಕೇಶ್, ನಗರ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಜಫ್ರುಲ್ಲಾ ಖಾನ್, ಪಾಲಿಕೆ ಮಾಜಿ ಸದಸ್ಯರಾದ ಮಹದೇಶ್, ಜಯರಾಮಣ್ಣ, ಬಾಲು, ಶಿವಣ್ಣ, ವಸಂತಕುಮಾರಿ, ಲಕ್ಷ್ಮೀ ಶಿವಣ್ಣ, ಎಸ್.ಬಿ.ಎಂ.ಮಂಜು, ಭಾಗ್ಯ ಮಹದೇಶ್, ನಮ್ರತಾ ರಮೇಶ್, ರಮಣಿ, ಶ್ರೀಧರ್, ರಮೇಶ್ ಮತ್ತಿತರರು ಭಾಗವಹಿಸಲಿದ್ದಾರೆ.

ಎನ್.ಕೃಷ್ಣ ನಿಧನ



ಮೈಸೂರು: ಮೈಸೂರು ತಾಲೂಕು ಸಿಂಧುವಳ್ಳಿ ಗ್ರಾಮದ ಲೇಟ್ ನಂಜಯ್ಯ(ಬ್ಲಾಸ್ಟರ್) ಅವರ ಪುತ್ರ ಎನ್.ಕೃಷ್ಣ(47) ಇಂದು ನಿಧನ ರಾದರು. ಮೃತರು ಪತ್ನಿ ಮಂಜುಳಾ, ಪುತ್ರಿ ನಂದಿನಿ ಮತ್ತು ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ಅವರ ಜಮೀ ನಿನ ಬಳಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.12.2024 ಶನಿವಾರ, ಮಳೆ ನಕ್ಷತ್ರ: ಜ್ಯೇಷ್ಠ, 02.12.2024 ರಿಂದ 15.12.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ರೋಹಿಣಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ–ಅನುಶೋಧ– ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು : CSIR, CFTRI, Mysuru, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಜೀವನ ಜೋಪಾನ– ಹೆಚ್‌ಐವಿ–ಅಂದು ಇಂದು, ಪ್ರಾಯೋಜಕರು– ಕರ್ನಾಟಕ ರಾಜ್ಯ ಏಡ್ಸ್ ನಿಯಂತ್ರಣ ಮಂಡಳಿ, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಚಿತ್ರಗೀತೆ ಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಕೆ. ಎನ್. ಸುರೇಂದ್ರ ಮತ್ತು ಸಂಗಡಿಗರು –ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ: ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.35 ಆಯುಷ್ ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.40 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ –ಜಯಲಕ್ಷ್ಮೀಪುರಂನಲ್ಲಿರುವ ಸತ್ಯಸಾಯಿ ವಿದ್ಯಾ ಸಂಸ್ಥೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ–ಊರ ದೀಪ, ರಚನೆ–ಎಸ್. ಸಾಯಿಲಕ್ಷ್ಮಿ, ನಿರ್ಮಾಣ–ಉಮೇಶ್. ಎಸ್.ಎಸ್., 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ : ಕಿಸಾನ್ ವಾಣಿ– ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ರೇಷ್ಮೆ ಆಧಾರಿತ ಸಮಗ್ರ ಕೃಷಿ ಈ ಕುರಿತು ಕೆ. ಆರ್. ಪೇಟೆ ತಾಲೂಕು ಬೂಕನಕೆರೆ ಹೋಬಳಿ ಮಡುವಿನಕೋಡಿ ಗ್ರಾಮದ ಎ. ಜೆ. ಆದಿತ್ಯ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 8.15 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಮಹಾರಾಜಪುರಂ. ಎಸ್. ಗಣೇಶ ವಿಶ್ವನಾಥನ್ – ಗಾಯನ

■ **ಶ್ರೀ ಗೀತಾ ಪ್ರಚಾರಿಣೀ ಸಭಾ ಟ್ರಸ್ಟ್ :** ಶ್ರೀ ಗೀತಾ ಜಯಂತಿ ಮಹೋತ್ಸವ, ಬೆಳಗ್ಗೆ 7.30 ರಿಂದ ಸಾಮೂಹಿಕ ಭಗವದ್ಗೀತೆ ಪಾರಾಯಣ, ಬೆಳಗ್ಗೆ 8.30 ರಿಂದ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30 ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6 ರಿಂದ ಶ್ರೀ ವಿದ್ಯಾವಿಷ್ಣು ಸಭಾ ಟ್ರಸ್ಟ್ ಅವರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 7 ರಿಂದ ಬಿ.ಎನ್. ಮಾಧವಾಚಾರ್ ಅವರಿಂದ ಭಗವದ್ಗೀತೆ ಪ್ರವಚನ–6ನೇ ಅಧ್ಯಾಯ ಕುರಿತು ಪ್ರವಚನ, ಸ್ಥಳ: ಗೀತಾ ಮಂದಿರ, ಅಶೋಕ ರಸ್ತೆ.

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆ :** ವಾರ್ಷಿಕ ಕ್ರೀಡಾಕೂಟ, ಮುಖ್ಯ ಅತಿಥಿಗಳು : ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ಪಿ. ಶಿವರಾಜು, ಗೌರವ ಅತಿಥಿಗಳು : ಅಂತರರಾಷ್ಟ್ರೀಯ ಕ್ರೀಡಾಪಟು ಕು. ರೀನಾ ಜಾರ್ಜ್, ಅಧ್ಯಕ್ಷತೆ : ಸದ್ವಿದ್ಯಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ.ಎಸ್.ಕೆ. ನರಹರಿಬಾಬು, ಉಪಸ್ಥಿತರು : ಕಾರ್ಯದರ್ಶಿ ಎಂ.ಡಿ. ಗೋಪಿನಾಥ್, ಸ್ಥಳ: ಚಾಮುಂಡಿ ವಿಹಾರ ಕ್ರೀಡಾಂಗಣ, ಬೆಳಗ್ಗೆ 8.30 ರಿಂದ.

■ **ಮೈಸೂರಿನ ಅವಧೂತ ದತ್ತ ಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತಾತ್ರೇಯ ಜಯಂತಿ ಪ್ರಯುಕ್ತ ವಿವಿಧ ಧಾರ್ಮಿಕ ಕಾರ್ಯಕ್ರಮ, ಬೆಳಗ್ಗೆ 9 ಗಂಟೆಗೆ ಶ್ರೀ ಚಕ್ರಪೂಜಾ, ಶ್ರೀ ದತ್ತಾತ್ರೇಯ ಹೋಮದ ಪೂರ್ಣಾಹುತಿ. ಶ್ರೀ ಕಾಲಾಗ್ನಿ ಶಮನ ದತ್ತಾತ್ರೇಯ ಸ್ವಾಮಿಗೆ ಕ್ಷೀರಾಭಿಷೇಕ. ಬೆಳಗ್ಗೆ 10ಕ್ಕೆ ಅಖಿಲ ಭಾರತ ಜ್ಞಾನ ಬೋಧ ಸಭಾ ಸಮ್ಮೇಳನ. ಬೆಳಗ್ಗೆ 11 ಗಂಟೆಗೆ ಅನಘ ವ್ರತ, ಸಂಜೆ 5ಕ್ಕೆ ರಥೋತ್ಸವ ನಂತರ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ಕಾಯಿಲೆಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ವೆರಿಕೋಸ್ ವೇನ್ಸ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್ ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಸುಯೋಗ್ ಆಸ್ಪತ್ರೆ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ದಕ್ಷ ಪಿಯು ಕಾಲೇಜು:** ದಕ್ಷ ಆಪ್ಟಿಟ್ಯೂಡ್ ಟ್ಯಾಲೆಂಟ್ ಹಂಟ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ರಿಂದ.

■ **ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್ :** ಶಿಕ್ಷಣ–ಮಾನವತೆ–ಸಂಸ್ಕೃತಿ ಉಳಿಸುವ ಉದ್ದೇಶದಿಂದ ರಾಜ ನೈತಿಕ ಶಾಲೆ ಶಿಬಿರ, ಉದ್ಘಾಟನೆ : ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್, ಸ್ಥಳ: ನೃಪತುಂಗ ಶಾಲೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ರೈತ ಸಂಘ :** ಎಂ.ಎಸ್. ಅಶ್ವಥ್‌ನಾರಾಯಣ್ ರಾಜೇ ಅರಸ್ ಅವರಿಗೆ ಶ್ರದ್ಧಾಂಜಲಿ ಮತ್ತು ಜಿಲ್ಲಾ ಕಾರ್ಯಕರ್ತರ ಸಭೆ, ಸ್ಥಳ: ಕೃಷಿ ಮಾರುಕಟ್ಟೆ ಅಧ್ಯಯನ ಸಂಸ್ಥೆ, ಹುಣಸೂರು ರಸ್ತೆ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ :** ದುಂಡು ಮೇಜಿನ ಸಭೆ, ಉಪಸ್ಥಿತರು: ಕೆ.ಎಸ್. ಶಿವರಾಮು, ಎಂ. ಶಿವಣ್ಣ, ಬಿ. ಸುಬ್ರಹ್ಮಣ್ಯ, ಎನ್.ಆರ್. ನಾಗೇಶ್, ರವಿನಂದನ್, ಯೋಗೇಶ್ ಉಪ್ಪಾರ್, ಡಿ. ನಾಗಭೂಷಣ್, ದೇವಗಳ್ಳಿ ಸೋಮಶೇಖರ್, ಸ್ಥಳ: ಜಲದರ್ಶಿನಿ ಅತಿಥಿಗೃಹ, ಬೆಳಗ್ಗೆ 11.30ಕ್ಕೆ

■ **ಶ್ರೀ ಶ್ರೀ ನಾಗಾನಂದ ದತ್ತಾತ್ರೇಯ ಮಠ :** ಭಗವಾನ್ ಶ್ರೀ ದತ್ತಾತ್ರೇಯ ಸ್ವಾಮಿಯವರ 48ನೇ ವರ್ಷದ ಸಪ್ತಾಹ, ಕಳಶ ಸ್ಥಾಪನೆ, ಗಣಪತಿ ಪೂಜೆ, ವರುಣ ಪೂಜೆ, ಕಂಕಣ ಬಂಧನ, ಅಭಿಷೇಕ, ವಿಷ್ಣು ಸಹಸ್ರನಾಮ, ದತ್ತ ಸಹಸ್ರನಾಮ, ಶ್ರೀ ಗುರುಚರಿತ್ರೆ ಪಾರಾಯಣ, ಬೆಳಗ್ಗೆ 11 ರಿಂದ ಭಜನೆ, ಶ್ರೀ ದತ್ತಾತ್ರೇಯರ ಉತ್ಸವ, ಔದಂಬರ ಪೂಜೆ, 1.30ಕ್ಕೆ ಮಹಾಮಂಗಳಾರತಿ, ಶ್ರೀಯವರಿಂದ ಪ್ರವಚನ, ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಭಜನೆ, ರಾತ್ರಿ 8ಕ್ಕೆ ಪೂಜೆ ನಂತರ ಪ್ರಸಾದ ವಿನಿಯೋಗ, ಸ್ಥಳ : ಶ್ರೀ ನಾಗಾನಂದ ದತ್ತಾತ್ರೇಯ ಮಠ, ಬೆಲವತ್ತ ಗ್ರಾಮ.

■ **ಶ್ರೀ ಕ್ಷೇತ್ರ ಗೊಮ್ಮಟಗಿರಿ ಸೇವಾ ಸಮಿತಿ :** ಶ್ರೀಕ್ಷೇತ್ರ ಗೊಮ್ಮಟಗಿರಿ ಭಗವಾನ್ ಬಾಹುಬಲಿಸ್ವಾಮಿಯ 75ನೇ ಮಹಾಮಸ್ತಕಾಭಿಷೇಕ ಅಮೃತ ಮಹೋತ್ಸವ, ಜಾತ್ರಾ ಮಹೋತ್ಸವ, ಬೆಳಗ್ಗೆ 11ಕ್ಕೆ ಮಹಾ ಮಸ್ತಕಾಭಿಷೇಕ, ಅಮೃತ ಕುಟೀರ ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಯೋಜನಾ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್, ಮುಖ್ಯ ಅತಿಥಿಗಳು : ಕಂದಾಯ ಸಚಿವ ಕೃಷ್ಣಭೈರೇಗೌಡ, ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ, ವಿಧಾನ ಪರಿಷತ್ ಸದಸ್ಯರಾದ ಮಧು ಮಾದೇಗೌಡ, ಡಾ. ಡಿ. ತಿಮ್ಮಯ್ಯ, ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್, ರಾಜ್ಯ ಅಲ್ಪಸಂಖ್ಯಾತರ ಹಾಗೂ ವಕ್ಫ್ ಇಲಾಖೆ ಆಯುಕ್ತ ಮನೋಜ್ ಜೈನ್, ಸ್ಥಳ: ಶ್ರೀಕ್ಷೇತ್ರ ಗೊಮ್ಮಟಗಿರಿ, ಇಲವಾಲ.

■ **ಸಂಯೋಗ :** ಸಯೋಗ ಬಜಾರ್–2024 ಉದ್ಘಾಟನಾ ಕಾರ್ಯಕ್ರಮ, ಉದ್ಘಾಟನೆ : ರಾಜಮಾತೆ ಶ್ರೀಮತಿ ಪ್ರಮೋದಾದೇವಿ ಒಡೆಯರ್, ಸಯೋಗ ಮಾಲೀಕರಾದ ಶ್ರುತಿ ರಂಗ, ಉಪಸ್ಥಿತರು : ಆರ್. ಗುರು, ಎನ್.ಆರ್. ಗ್ರೂಪ್ ಛೇರ್ಮನ್, ರಂಗಸನ್ಸ್ ಮತ್ತು ನಿರ್ದೇಶಕ ಪವನ್ ರಂಗ, ಸ್ಥಳ: ಸಂಯೋಗ, 2775, 4ನೇ ಮುಖ್ಯ ರಸ್ತೆ, ವಿ.ವಿ. ಮೊಹಲ್ಲಾ, ಬೆಳಗ್ಗೆ 11.30 ರಿಂದ.

■ **ಮರಿಮಲ್ಲಪ್ಪ ಪ್ರೌಢಶಾಲೆ :** ಅಂತರ ಪ್ರೌಢಶಾಲಾ ಪ್ರಬಂಧ ಸ್ಪರ್ಧೆ ಹಾಗೂ ಚದುರಂಗ ಸ್ಪರ್ಧೆಗಳ ಬಹುಮಾನ ವಿತರಣೆ, ಜ್ಯೋತಿ ಹಸ್ತ ಪತ್ರಿಕೆ ಬಿಡುಗಡೆ ಸಮಾರಂಭ, ಅಧ್ಯಕ್ಷತೆ : ಸಂಸ್ಥೆ ಕಾರ್ಯದರ್ಶಿ ಪ್ರೊ. ಕೆ.ಎಸ್. ಪಂಚಾಕ್ಷರಸ್ವಾಮಿ, ಉಪಸ್ಥಿತರು: ಶಶಿಧರ್ ಡೋಂಗ್ರೆ, ಮುಖ್ಯೋಪಾಧ್ಯಾಯಿನಿ ಶ್ರೀಮತಿ ಎಸ್. ಮಮತ, ಶೈಕ್ಷಣಿಕಾಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ, ಸ್ಥಳ: ಗ್ಯಾಲರಿ ಹಾಲ್, ಮಧ್ಯಾಹ್ನ 2ಕ್ಕೆ.

■ **ಜೆಡಿಎಸ್ ಕಚೇರಿ :** ಜೆಡಿಎಸ್ ಪಕ್ಷದ ಸದಸ್ಯತ್ವ ನೋಂದಣಿ, ಬೂತ್ ಸಮಿತಿ ಅಭಿಯಾನ ಕಾರ್ಯಕ್ರಮ, ಅಧ್ಯಕ್ಷತೆ : ಚಾಮರಾಜ ಕ್ಷೇತ್ರದ ಅಧ್ಯಕ್ಷ ಪಿ.ಮಂಜುನಾಥ್, ಉದ್ಘಾಟನೆ : ನಗರಾಧ್ಯಕ್ಷ ಕೆ.ಟಿ. ಚೆಲುವೇಗೌಡ, ಉಪಸ್ಥಿತರು: ರಾಜ್ಯ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ, ರಾಜ್ಯ ಕಾರ್ಯಾಧ್ಯಕ್ಷ ಸಾ.ರಾ. ಮಹೇಶ್, ಶಾಸಕಾಂಗ ಪಕ್ಷದ ನಾಯಕ ಸುರೇಶ್ ಬಾಬು, ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ವಿವೇಕಾನಂದ, ಜೆಡಿಎಸ್ ಮುಖಂಡರಾದ ಹೆಚ್.ಕೆ. ರಮೇಶ್, ಕೆ. ಉಮಾಶಂಕರ್, ಮಾಜಿ ಮೇಯರ್‌ಗಳಾದ ಆರ್. ಲಿಂಗಪ್ಪ, ಎಂ.ಜೆ. ರವಿಕುಮಾರ್, ಶ್ರೀಮತಿ ರಾಜೇಶ್ವರಿ ಸೋಮು, ಶ್ರೀಮತಿ ಭಾಗ್ಯವತಿ, ನಗರ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಪ್ರೇಮಾ ಶಂಕರೇಗೌಡ, ಇತರರು. ಸ್ಥಳ: ಜೆಡಿಎಸ್ ಕಚೇರಿ, ಶೇಷಾದ್ರಿ ಅಯ್ಯರ್ ರಸ್ತೆ, ಸಂಜೆ 4ಕ್ಕೆ.

■ **ಸುರುಚಿ ರಂಗಮನೆ:** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು: ಶಿಕ್ಷಣ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಶ್ರೀಕಂಠೇಶ್, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 4.30ರಿಂದ 5.30ರವರೆಗೆ

■ **ಪಿಜಿಎಲ್ ಸಂಸ್ಮರಣಾ ವೇದಿಕೆ :** ಗಾನಕಲಾಭೂಷಣ ಪಿ.ಜಿ. ಲಕ್ಷ್ಮೀನಾರಾಯಣ್ ಅವರ ಸಂಸ್ಮರಣಾರ್ಥ ಸಂಗೀತ ಕಾರ್ಯಕ್ರಮ, ವಿದ್ವಾನ್ ಅಮಿತ್ ನಾಡಿಗ್ ಅವರಿಂದ ವೇಣುವಾದನ, ವಿದ್ವಾನ್ ವೈಭವ್ ರಮಣಿ – ಪಿಟೀಲು, ವಿದ್ವಾನ್ ಎ. ರಾಧೇಶ್–ಮೃದಂಗ, ವಿದ್ವಾನ್ ಶ್ರೀನಿಧಿ ಕೌಂಡಿನ್ಯ–ಘಟಂ, ಸ್ಥಳ: ಶ್ರೀ ವಾಸುದೇವಾಚಾರ್ಯ ಭವನ, ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ಸ್ಪಿರಿಚ್ಯುಲೈಸಿಂಗ್ ಎವರಿಡೇ ಲೈಫ್ ಕುರಿತು ಉಪನ್ಯಾಸ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಹರಿ ವಿದ್ಯಾಲಯ, ರಂಗಭೂಮಿ ಟ್ರಸ್ಟ್, ಕೊಡಗು :** ಸತ್ಯವನ್ನೇ ಹೇಳುತ್ತೇನೆ ನಾಟಕ ಪ್ರದರ್ಶನ, ಸ್ಥಳ: ಹರಿ ವಿದ್ಯಾಲಯ, ಬೋಗಾದಿ, ಸಂಜೆ 6ಕ್ಕೆ.

■ **ಗಾನಭಾರತೀ :** ದಿವಂಗತ ಬಿ.ವಿ. ಶ್ರೀನಿವಾಸ ರಾಘವನ್ ಮತ್ತು ಶ್ರೀಮತಿ ಲಲಿತಾ ರಾಘವನ್ ಸಂಸ್ಮರಣಾ ಕಾರ್ಯಕ್ರಮ, ವಿದುಷಿ ಡಾ. ಆರ್.ಎನ್. ಶ್ರೀಲತಾ ಅವರಿಂದ ಗಾಯನ, ವಿದುಷಿ ವೀಣಾ ಸುರೇಶ್–ಪಿಟೀಲು, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ವಿಕ್ರಂ ಭಾರದ್ವಾಜ್–ಮೋರ್ಚಿಂಗ್, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್ :** ಹನುಮ ಜಯಂತಿ, ಬೆಳಗ್ಗೆ ಶ್ರೀ ಸ್ವಾಮಿಯವರಿಗೆ ವಿಶೇಷ ಪೂಜೆ, ಅಲಂಕಾರ, ಸಂಜೆ 6.30ಕ್ಕೆ ಶ್ರೀಕೃಷ್ಣ ಭಜನಾ ಮಂಡಳಿಯಿಂದ ಭಜನೆ, ಸ್ಥಳ: ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನ ಟ್ರಸ್ಟ್, ಬನ್ನಿಮಂಟಪ 'ಸಿ' ಬಡಾವಣೆ, ಹನುಮಂತನಗರ.

■ **ಕಲಾ ಸುರುಚಿ, ಕುತೂಹಲಿ–ಕನ್ನಡ ಮತ್ತು ದಿ ಅಕಾಡೆಮಿ ಟ್ರಸ್ಟ್ :** ಸೈನ್ಸ್ ಸಂಜೆ ಕಾರ್ಯಕ್ರಮ, ವಿಜ್ಞಾನ ಲೇಖಕ, ಅಂಕಣಕಾರ ಟಿ.ಜಿ.ಶ್ರೀನಿಧಿ 'ಡೇಟಾ ಕಥೆಗಳು' ವಿಷಯ ಕುರಿತು ಕನ್ನಡದಲ್ಲಿ ಭಾಷಣ, ಸ್ಥಳ: ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6.30ರಿಂದ 7.30ರವರೆಗೆ

■ **ಕೌಟಿಲ್ಯ ವಿದ್ಯಾಲಯ :** ಬೆಳಗ್ಗೆ 9ಕ್ಕೆ ಕೌಟಿಲ್ಯ ಸಾಂಸ್ಕೃತಿಕ ಪರ್ವ, ವಾರ್ಷಿಕೋತ್ಸವ, ಕಿರಿಯರ ಕೀರ್ತಿಗೆ ಹಿರಿಯರ ಸ್ಫೂರ್ತಿ ಸಂಭ್ರಮಾಚರಣೆ, ಮುಖ್ಯ ಅತಿಥಿಗಳು : ಆದಾಯ ತೆರಿಗೆ ಇಲಾಖೆ ಜಂಟಿ ಆಯುಕ್ತ ಕಲ್ಪಲತಾ ರಾಜನ್, ಗೌರವ ಅತಿಥಿಗಳು : ಶ್ರೀ ರಾಮಕೃಷ್ಣ ವಿದ್ಯಾಶಾಲಾ ಸಿಬ್ಬಂದಿ ಎಸ್.ಎಸ್. ರಮೇಶ್, ಅಧ್ಯಕ್ಷತೆ : ಕೌಟಿಲ್ಯ ವಿದ್ಯಾಲಯ ಅಧ್ಯಕ್ಷ ಟಿ. ಬಾಬು; ಮಧ್ಯಾಹ್ನ 2.20ಕ್ಕೆ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಲೋಕಾಯುಕ್ತ ಎಸ್ಪಿ ಜೋಶಿ ಶ್ರೀನಾಥ್ ಮಹದೇವ್, ಜೆಎಸ್‌ಎಸ್ ಉನ್ನತ ಶಿಕ್ಷಣ ಅಕಾಡೆಮಿ ಕುಲಸಚಿವ ಡಾ. ಬಿ. ಮಂಜುನಾಥ್, ನಗರ ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಶರೀಫ್, ಅಧ್ಯಕ್ಷತೆ : ಕೌಟಿಲ್ಯ ವಿದ್ಯಾಲಯ ಅಧ್ಯಕ್ಷ ಟಿ. ಬಾಬು, ಸ್ಥಳ: ಕರಾಮುವಿವಿ ಘಟಿಕೋತ್ಸವ ಭವನ.

■ **ಕನ್ನಡ ಸಾಹಿತ್ಯ ಕಲಾಕೂಟ, ಕಾವ್ಯಲೋಕ ಟ್ರಸ್ಟ್ :** ಗಾಯಕ ಬಿ.ಪಿ. ಮಂಜುನಾಥ್ ಅವರಿಗೆ ಗಾನ ಗಂಧರ್ವ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ ; ಮಾಜಿ ಶಾಸಕ ತೋಂಟದಾರ್ಯ, ಅಧ್ಯಕ್ಷತೆ : ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಶಸ್ತಿ ಪುರಸ್ಕೃತರು : ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ. ಮಂಜುನಾಥ್, ಪ್ರಶಸ್ತಿ ಪ್ರದಾನ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳು : ವಕೀಲ ಹರೀಶ್ ಹೆಗಡೆ, ರೈತ ಮುಖಂಡ ಎಂ.ಬಿ.ಚೇತನ, ಪ್ರಾಸ್ತಾವಿಕ ನುಡಿ: ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ಕಾವ್ಯಲೋಕ ಟ್ರಸ್ಟ್ ಅಧ್ಯಕ್ಷ ಡಾ. ಹೆಚ್.ಬಿ. ರಾಜಶೇಖರ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಇನ್ನೋಟಿವ್ :** ಕೆರೆಮನೆ ಶಿವಾನಂದ ಹೆಗಡೆ ನಿರ್ದೇಶನದಲ್ಲಿ ಯುನೆಸ್ಕೋ ಮಾನ್ಯತೆ ಪಡೆದಿರುವ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ, ಕೆರೆಮನೆ ಪ್ರಸ್ತುತ ಯಕ್ಷ ಸಂಭ್ರಮ–2024, ಉದ್ಘಾಟನೆ: ಉದ್ಯಮಿ ಜಿ.ಎಂ. ಹೆಗಡೆ, ಮುಖ್ಯ ಅತಿಥಿಗಳು : ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಅಧ್ಯಕ್ಷತೆ : ಇನ್ನೋವೇಟಿವ್ ಅಧ್ಯಕ್ಷ ಜಿ.ಎಸ್. ಭಟ್ಟ, ಉಪಸ್ಥಿತರು : ವಿಹೆಚ್‌ಪಿ ಉಪಾಧ್ಯಕ್ಷ ಜಗದೀಶ್ ಹೆಬ್ಬಾರ್, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಸಂಜೆ 6ಕ್ಕೆ

ಮೈಸೂರು ಮಿತ್ರ

ಶನಿವಾರ 14 ಡಿಸೆಂಬರ್ 2024

ಲೋಕಸಭೆಯಲ್ಲಿ ಪ್ರಿಯಾಂಕಾ ವಾದ್ರಾ ಚೊಚ್ಚಲ ಭಾಷಣ

ನೆಹರೂ ಬಿಡಿ, ನೀವೇನು ಮಾಡಿದ್ದೀರೀ; ಮೋದಿ ವಿರುದ್ಧ ವಾಗ್ದಾಳಿ



ನವದೆಹಲಿ: ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ಲೋಕಸಭೆಯಲ್ಲಿ ಮೊದಲ ಭಾಷಣ ಮಾಡಿದ್ದು ಭಾರತವು ಸಾವಿರಾರು ವರ್ಷಗಳ ಸಂವಾದ ಮತ್ತು ಚರ್ಚೆಯ ಸಂಪ್ರದಾಯವನ್ನು ಹೊಂದಿರುವ ದೇಶವಾಗಿದೆ. ಚರ್ಚೆ ಮತ್ತು ಸಂವಾದಗಳು ನಮ್ಮ ಸಂಸ್ಕೃತಿಯಲ್ಲಿ ಆಳವಾದ ಬೇರುಗಳನ್ನು ಹೊಂದಿವೆ. ಇದು ವಿವಿಧ ಧರ್ಮಗಳು ಮತ್ತು ಸಮಾಜಗಳಲ್ಲಿಯೂ ಗೋಚರಿಸುತ್ತದೆ. ಈ ಸಂಪ್ರದಾಯದಿಂದ ಪ್ರೇರಿತರಾಗಿ, ಅಹಿಂಸೆ ಮತ್ತು ಸತ್ಯದ ಆಧಾರದ ಮೇಲೆ ನಮ್ಮ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾಯಿತು. ಈ ಆಂದೋಲನವು ಪ್ರಜಾಸತ್ತಾತ್ಮಕವಾಗಿತ್ತು. ಇದರಲ್ಲಿ ಪ್ರತಿಯೊಂದು ವಿಭಾಗವೂ ಭಾಗವಹಿಸಿತು. ನಮ್ಮ ಸಂವಿಧಾನದ ರೂಪವನ್ನು ಪಡೆದ ಈ ಹೋರಾಟದಿಂದ ಸಾಮೂಹಿಕ ಧ್ವನಿ ಹೊರಹೊಮ್ಮಿತು. ಈ ಸಂವಿಧಾನವು ಕೇವಲ ದಾಖಲೆಯಲ್ಲ, ಆದರೆ ಇದು ನ್ಯಾಯ, ಅಭಿವ್ಯಕ್ತಿ ಮತ್ತು ಆಶಯಗಳ ದೀಪವಾಗಿದೆ ಎಂದರು.

ವಾಸ್ತವವಾಗಿ, ಲೋಕಸಭೆಯಲ್ಲಿ ಸಂವಿಧಾನದ ಮೇಲಿನ ಚರ್ಚೆಯ ಸಂದರ್ಭದಲ್ಲಿ, ಪ್ರಿಯಾಂಕಾ ಗಾಂಧಿ ಅವರು ಸಂವಿಧಾನವು ನಮ್ಮ ದೇಶವಾಸಿಗಳಿಗೆ ರಕ್ಷಣಾತ್ಮಕ ಗುರಾಣಿಯಾಗಿದೆ ಎಂದು ಹೇಳಿದರು. ಇದು ನ್ಯಾಯ, ಏಕತೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುತ್ತದೆ. ಆದರೆ ಆಡಳಿತ ಪಕ್ಷವು ಕಳೆದ 10 ವರ್ಷಗಳಲ್ಲಿ ಈ ರಕ್ಷಣಾ ಕವಚವನ್ನು ಮುರಿಯಲು ಪ್ರಯತ್ನಿಸಿದೆ. ಲ್ಯಾಟರಲ್ ಎಂಟ್ರಿ ಮತ್ತು ಖಾಸಗೀಕರಣದ ಮೂಲಕ ಮೀಸಲಾತಿಯನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಆರೋಪಿಸಿದರು. ಚುನಾವಣಾ ಫಲಿತಾಂಶ ಬೇರೆಯಾಗಿದ್ದರೆ ಬಹುಶಃ ಸಂವಿಧಾನ ಬದಲಿಸುವ ಕೆಲಸ ಶುರುವಾಗುತ್ತಿತ್ತು ಎಂದು ಸಾರ್ವಜನಿಕರು ಅದನ್ನು ತಡೆದರು ಎಂದರು.

ಈಗಿನ ಸರ್ಕಾರ ಹಿಂದಿನದನ್ನು ಚರ್ಚಿಸುತ್ತದೆ. ಆದರೆ ವರ್ತಮಾನದ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತದೆ ಎಂದು ಪ್ರಿಯಾಂಕಾ ಹೇಳಿದರು. ನಿರುದ್ಯೋಗ, ಹಣದುಬ್ಬರದಂತಹ ಸಮಸ್ಯೆಗಳನ್ನು ಸರಕಾರ ಬಗೆಹರಿಸುತ್ತಿಲ್ಲ ಎಂದು ಆರೋಪಿಸಿದರು. ರೈತರು, ಕೂಲಿಕಾರರು, ಬಡ ವರ್ಗದವರು ಇನ್ನೂ ಸಂಕಷ್ಟದಲ್ಲಿದ್ದಾರೆ. ಕೃಷಿ ಕಾನೂನುಗಳನ್ನು ಗುರಿಯಾಗಿಟ್ಟುಕೊಂಡು, ದೊಡ್ಡ ಕೈಗಾರಿಕೋದ್ಯಮಿಗಳ ಲಾಭಕ್ಕಾಗಿ ಇವುಗಳನ್ನು ಮಾಡಲಾಗಿದೆ ಎಂದು ಹೇಳಿದರು. ಹಿಮಾಚಲದ ಸೇಬು ರೈತರು ಮತ್ತು ವಯನಾಡ್‌ನಿಂದ ಲಲಿತ್‌ಪುರದವರೆಗಿನ ರೈತರು ಇಂದು ತಮ್ಮ ಸಮಸ್ಯೆಗಳೊಂದಿಗೆ ಹೋರಾಡುತ್ತಿದ್ದಾರೆ.

ಜಾತಿ ಗಣತಿಯು ಅಗತ್ಯವನ್ನು ಪ್ರಿಯಾಂಕಾ ಗಾಂಧಿ ಒತ್ತಿ ಹೇಳಿದರು. ಈ ಬೇಡಿಕೆಯನ್ನು ಪ್ರತಿಪಕ್ಷಗಳು ನಿರಂತರವಾಗಿ ಎತ್ತುತ್ತಿದ್ದರೂ ಆಡಳಿತ ಪಕ್ಷ ಗಂಭೀರವಾಗಿ ಪರಿಗಣಿಸಿಲ್ಲ ಎಂದರು. ಚುನಾವಣೆಯ ಒತ್ತಡದಲ್ಲಿ ಇದನ್ನು ಚರ್ಚಿಗೆ ತಂದರು, ಆದರೆ ಅದರ ಬಗ್ಗೆ ಅವರ ಗಂಭೀರತೆಯ ಕೊರತೆ ಸ್ಪಷ್ಟವಾಗಿ ಗೋಚರಿಸುತ್ತದೆ. ಜಾತಿ ಗಣತಿಯು ಸಮಾಜದ ನೈಜ ಸ್ಥಿತಿಯನ್ನು ಬಹಿರಂಗಪಡಿಸುತ್ತದೆ. ಇದು ಸಾಮಾಜಿಕ ಮತ್ತು ಆರ್ಥಿಕ ನ್ಯಾಯಕ್ಕೆ ಅವಶ್ಯಕವಾಗಿದೆ.

ಈ ಹಿಂದೆ ಸಂಸತ್ತು ಕಾರ್ಯನಿರ್ವಹಿಸುತ್ತಿದ್ದಾಗ ಹಣದುಬ್ಬರ ಮತ್ತು ನಿರುದ್ಯೋಗದಂತಹ ವಿಷಯಗಳ ಬಗ್ಗೆ ಸರ್ಕಾರವು ಚರ್ಚಿಸುತ್ತದೆ ಎಂದು ಸಾರ್ವಜನಿಕರು ನಿರೀಕ್ಷಿಸಿದ್ದರು ಎಂದು ಅವರು ಹೇಳಿದರು. ಆದರೆ ಈಗ ಜನರ ವಿಶ್ವಾಸ ಕಡಿಮೆಯಾಗಿದೆ. ಮಹಿಳಾ ಮೀಸಲಾತಿ ಮಸೂದೆಯ ಬಗ್ಗೆ ಪ್ರಶ್ನೆಗಳನ್ನು ಎತ್ತಿರುವ ಪ್ರಿಯಾಂಕಾ, ಅದನ್ನು ಜಾರಿಗೆ ತರಲು ಇಷ್ಟು ಸಮಯ ಏಕೆ ತೆಗೆದುಕೊಳ್ಳುತ್ತದೆ ಎಂದು ಕೇಳಿದರು. ಮಹಿಳೆಯರ ಮಸೂದೆಯ ತಮ್ಮ ಶಕ್ತಿ ಸಾಬೀತು ಪಡಿಸಿದ್ದು, ಅವರಿಲ್ಲದೆ ಸರಕಾರ ರಚನೆ ಸಾಧ್ಯವಿಲ್ಲ ಎಂಬುದನ್ನು ಇಂದು ಸರಕಾರ ಗುರುತಿಸಬೇಕಿದೆ ಎಂದರು. ಈ ಮಸೂದೆಯನ್ನು ಶೀಘ್ರದಲ್ಲೇ ಜಾರಿಗೊಳಿಸುವುದರಿಂದ ಮಹಿಳೆಯರ ಹಕ್ಕುಗಳನ್ನು ಗೌರವಿಸಲಾಗುವುದು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹಾಸ್ಟೆಲ್ ಸಮಸ್ಯೆ ಬಗೆಹರಿಸಿ

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ



ಬೆಳಗಾವಿ, ಡಿ.13–ಮೈಸೂರಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹಾಸ್ಟೆಲ್‌ಗಳಿಗೆ ಬೇಡಿಕೆ ಹೆಚ್ಚಾಗಿದ್ದು 100 ಮಕ್ಕಳಿರುವ ಜಾಗದಲ್ಲಿ ಇನ್ನೂರು ಮೂನ್ನೂರು ಮಕ್ಕಳಿದ್ದು ತೊಂದರೆಯಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸಮಾಜ ಕಲ್ಯಾಣ ಸಚಿವ ಡಾ. ಹೆಚ್. ಸಿ.ಮಹದೇವಪ್ಪರ ಗಮನ ಸೆಳೆದರು.

ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಚುಕ್ಕೆ ಗುರುತಿನ ಪ್ರಶ್ನೆ ಮೇಲೆ ಮಾತನಾಡಿದ ಅವರು ಹಾಸ್ಟೆಲ್‌ಗಳಿಗೆ ಸಿಎ ನಿವೇಶನ ಮಂಜೂರಾಗಿದ್ದರೂ ಇಲಾಖೆಯವರು ಪಡೆದುಕೊಂಡಿಲ್ಲ. ಕಾಲೇಜು ವಿದ್ಯಾರ್ಥಿಗಳಿಗೆ ಸರಿಯಾಗಿ ಸ್ಕಾಲರ್‌ಶಿಪ್ ಕೊಡುತ್ತಿಲ್ಲ ಎಂದು ಕ್ರಿಮಿನಲ್ ಕೇಸ್ ದಾಖಲಾಗಿದೆ. ಹಾಸ್ಟೆಲ್ ವಿದ್ಯಾರ್ಥಿನಿಯರಿಗೆ ಸ್ಯಾನಿಟರಿ ನ್ಯಾಪ್‌ಕಿನ್ ಇಲ್ಲದೆ ಕಾಲೇಜಿಗೆ ಬರುತ್ತಿಲ್ಲ. ಆಶ್ರಮ ಶಾಲೆಗಳಲ್ಲಿ ಮಕ್ಕಳಿಗೆ ನುರಿತ ಶಿಕ್ಷಕರಿಂದ ಗುಣಮಟ್ಟದ ಶಿಕ್ಷಣ ನೀಡಬೇಕು. ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಹಾಸ್ಟೆಲ್ ಗಳೆಷ್ಟು, 2024–25ನೇ ಸಾಲಿನಲ್ಲಿ ಸ್ವಂತ ಕಟ್ಟಡ ನಿರ್ಮಾಣಕ್ಕೆ ಎಷ್ಟು ಹಣ ಒದಗಿಸಲಾಗಿದೆ ಎಂದು ಪ್ರಶ್ನಿಸಿದರು.

ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ.ಮಹಾದೇವಪ್ಪ ಉತ್ತರಿಸಿ ಜಿಲ್ಲೆಯಲ್ಲಿ 85 ಹಾಸ್ಟೆಲ್‌ಗಳಿದ್ದು 8462 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. 70 ಸ್ವಂತ ಕಟ್ಟಡಗಳಿದ್ದು 15 ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. 2024–25 ನೇ ಸಾಲಿನಲ್ಲಿ ಸ್ವಂತ ಕಟ್ಟಡ ನಿರ್ಮಾಣಕ್ಕೆ 225 ಕೋಟಿ ರೂ. ಒದಗಿಸಲಾಗಿದ್ದು, 112.50 ಕೋಟಿ ವೆಚ್ಚವಾಗಿದೆ ಸ್ಕಾಲರ್‌ಶಿಪ್ ಸ್ಯಾನಿಟರಿ ನ್ಯಾಪ್‌ಕಿನ್ ಹಾಗೂ ಸ್ವಂತ ಕಟ್ಟಡದ ನಿರ್ಮಾಣ ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

ಪಾಲಿಕೆಯಿಂದ ಲಾಟರಿ ಮೂಲಕ

85 ಮಂದಿ ವೀಳ್ಯದೆಲೆ ಬೆಳೆಗಾರರಿಗೆ ತಲಾ 5 ಗುಂಟೆ ಭೂಮಿ ಮಂಜೂರು



ಮೈಸೂರು, ಡಿ. 13(ಆರ್‌ಕೆ)– ಸರ್ಕಾರ 85 ವೀಳ್ಯದೆಲೆ ಬೆಳೆಗಾರರಿಗೆ ಮಂಜೂರು ಮಾಡಿದ್ದ ಭೂಮಿಯನ್ನು ಲಾಟರಿ ಮೂಲಕ ಮೈಸೂರು ಮಹಾನಗರ ಪಾಲಿಕೆಯು ತಲಾ 5 ಗುಂಟೆ ಬ್ಲಾಕ್‌ಗಳನ್ನು ಇಂದು ಹಂಚಿಕೆ ಮಾಡಿತು.

ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅಧ್ಯಕ್ಷತೆಯಲ್ಲಿ ಪಾಲಿಕೆ ಹಳೇ ಕೌನ್ಸಿಲ್ ಸಭಾಂಗಣದಲ್ಲಿ 85 ಮಂದಿ ವೀಳ್ಯದೆಲೆ ಜಮೀನಿನ ಫಲಾನುಭವಿಗಳೇ ಲಾಟರಿ ಎತ್ತಿ ತಮಗೆ ಹಂಚಿಕೆಯಾದ ಜಮೀನಿನ ಬ್ಲಾಕ್‌ಗಳನ್ನು ಆಯ್ಕೆ ಮಾಡಿಕೊಂಡರು.

245 ವೀಳ್ಯದೆಲೆ ಬೆಳೆಗಾರರ ಪೈಕಿ ಸಮಂಜಸ ದಾಖಲೆಗಳನ್ನು ಒದಗಿಸಿದ್ದ 85 ಮಂದಿ ಫಲಾನುಭವಿಗಳಿಗೆ 2024ರ ಸೆಪ್ಟೆಂಬರ್ 29ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಯೆಜ್ ಫಾರಂನಲ್ಲಿ ತಲಾ 5 ಗುಂಟೆ ಜಮೀನಿನ ಮಂಜೂರಾತಿ ಪತ್ರ ವಿತರಿಸಿದ್ದರು.

ಅವರಿಗೆ ಪಾಲಿಕೆ ಆಯುಕ್ತ ಷರೀಫ್ ಅವರು, ಫಲಾನುಭವಿಗಳ ಸಮ್ಮುಖದಲ್ಲೇ ಲಾಟರಿ ಮೂಲಕ ಪಾರದರ್ಶಕವಾಗಿ ಮಂಜೂರಾತಿದಾರರಿಗೆ ಜಮೀನಿನ ಬ್ಲಾಕ್ ಸಂಖ್ಯೆಗಳನ್ನು ಶಾಂತಿಯುತವಾಗಿ ಆಯ್ಕೆ ಮಾಡಿದರು. ಮುಂದಿನ ದಿನಗಳಲ್ಲಿ ಅವರಿಗೆ ಸದರಿ ಜಮೀನಿನ ಹಕ್ಕು ಪತ್ರ, ಖಾತಾ–ಕಂದಾಯ ಪತ್ರ ನೀಡಲಾಗುವುದು ಎಂದು ಪಾಲಿಕೆ ಆಯುಕ್ತರು ತಿಳಿಸಿದರು.

ಇದರೊಂದಿಗೆ ಸುಮಾರು 40 ವರ್ಷಗಳ ವಿವಾದ ಇತ್ಯರ್ಥ ವಾದಂತಾಗಿದ್ದು, ವೀಳ್ಯದೆಲೆ ಬೆಳೆಗಾರರು ತಮಗೆ ಮಂಜೂರಾಗಿರುವ ಬ್ಲಾಕ್ ಸಂಖ್ಯೆಯ ಜಮೀನಿನ ಸ್ವಾಧೀನದಲ್ಲಿದ್ದು, ವೀಳ್ಯದೆಲೆ ಬೆಳೆಯಬಹುದು ಎಂದು ಷರೀಫ್ ತಿಳಿಸಿದರು.

ಪಾಲಿಕೆ ಉಪ ಆಯುಕ್ತ (ಕಂದಾಯ) ಸೋಮಶೇಖರ್, ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗರಾಜ್, ವಲಯಾಧಿಕಾರಿಗಳು, ಅಭಿವೃದ್ಧಿ ಅಧಿಕಾರಿಗಳು ಈ ಸಂದರ್ಭ ಭಾಗವಹಿಸಿದ್ದರು.

ಕನ್ನಡದಲ್ಲೇ ತೀರ್ಪು ಪ್ರಕಟಿಸಿದ ಹೈಕೋರ್ಟ್ ನ್ಯಾ.ಕೃಷ್ಣ ದೀಕ್ಷಿತ್!



ನವೆಂಬರ್ ಬಂತೆಂದರೆ ಎಲ್ಲರೂ ಕನ್ನಡ ಕನ್ನಡ ಎನ್ನುತ್ತಾರೆ. ನವೆಂಬರ್ ಮುಗಿಯುತ್ತಿದ್ದಂತೆ ಬಹುತೇಕರ ಕನ್ನಡ ಪ್ರೇಮ ಕಡಿಮೆಯಾಗುತ್ತದೆ. ಕನ್ನಡ ಭಾಷೆಯನ್ನು ಉಳಿಸುವ ಬೆಳೆಸುವ ಘೋಷಣೆಗಳು, ಭಾಷಣಗಳು ಸರ್ವೇ ಸಾಮಾನ್ಯ ಆದರೆ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು ಸದ್ದಿಲ್ಲದೆ ಕನ್ನಡದ ಸೇವೆಯನ್ನು ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಬೆಂಗಳೂರು, ಡಿ.13– ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು ಕನ್ನಡ ಭಾಷೆಯಲ್ಲೇ ತೀರ್ಪು ಪ್ರಕಟಿಸಿದ್ದಾರೆ. ಈ ಹಿಂದೆ ನ್ಯಾಯಮೂರ್ತಿ ಅರಳಿ ನಾಗರಾಜ್ ಅವರು ಮೊಟ್ಟ ಮೊದಲ ಬಾರಿಗೆ ಕನ್ನಡದಲ್ಲಿ ತೀರ್ಪು ಪ್ರಕಟಿಸಿ, ಇತಿಹಾಸ ಸೃಷ್ಟಿಸಿದ್ದರು.

ಇಂದು ತೀರ್ಪು ಪ್ರಕಟಿಸುವುದಕ್ಕೂ ಮುನ್ನ ನ್ಯಾ.ದೀಕ್ಷಿತ್, 'ನಮ್ಮ ಎಲ್ಲ ತೀರ್ಪುಗಳನ್ನು ಇಂಗ್ಲಿಷ್‌ನಲ್ಲಿ ನೀಡುತ್ತಿದ್ದೇವೆ. ಅದು ಜನಸಾಮಾನ್ಯರಿಗೆ ಅರ್ಥವಾಗು ವುದು ಹೇಗೆ ಎಂಬ ಪ್ರಶ್ನೆ ಕಾಡುತ್ತಿದೆ. ಇಂಗ್ಲೆಂಡ್ ದೇಶದಲ್ಲಿ 1730ರವರೆಗೆ ನ್ಯಾಯಾಲಯಗಳ ಎಲ್ಲ ಪ್ರಕ್ರಿಯೆಗಳು ಮತ್ತು ತೀರ್ಪುಗಳು ಲ್ಯಾಟಿನ್ ಭಾಷೆಯಲ್ಲಿ ಇರುತ್ತಿತ್ತು. 1730ರಲ್ಲಿ ನ್ಯಾಯಾಂಗ ಪ್ರಕ್ರಿಯೆ ನಮ್ಮ ಭಾಷೆಯಲ್ಲಿಯೇ ಆಗಬೇಕು ಎಂದು ಶಾಸನ ಜಾರಿ ಮಾಡಿದರು. ಅಂದಿ ನಿಂದ ಇಲ್ಲಿಯವರೆಗೂ ಇಂಗ್ಲಿಷ್ ಭಾಷೆಯಲ್ಲಿಯೇ ನ್ಯಾಯಾಲಯದ ಪ್ರಕ್ರಿಯೆಗಳು ನಡೆಯುತ್ತಿವೆ' ಎಂದು ತಿಳಿಸಿದರು.

ನ್ಯಾಯಾಲಯದ ತೀರ್ಪಿನ ಮೂಲ ವಿಷಯಗಳು ಸಾಮಾನ್ಯ ಜನರಿಗೆ ತಿಳಿಯಬೇಕು. ಆದ್ದರಿಂದ ಕನ್ನಡ ಭಾಷೆಯಲ್ಲಿ ತೀರ್ಪು ನೀಡಬೇಕಾದ ಅನಿವಾರ್ಯತೆ ಇದೆ. ನಿನ್ನೆ (ಡಿ.11) ಭಾರತ ಭಾಷಾ ದಿವಸ. ಭಾಷೆಗಳಿಗೆ ಮಾನ್ಯತೆ ನೀಡುವ ದಿನ. ಆದ್ದರಿಂದ, ಇಂದು (ಡಿ.12) ಕನ್ನಡದಲ್ಲಿ ತೀರ್ಪು ನೀಡುತ್ತಿದ್ದೇವೆ ಎಂದರು.

ತೀರ್ಪು ಪ್ರಕಟಿಸಿದ ಬಳಿಕ ನ್ಯಾ.ದೀಕ್ಷಿತ್, ಕನ್ನಡದ ಅವಸಾನ ಆಗಬಾರದು ಎನ್ನುವುದಾದರೆ ಕನ್ನಡಕ್ಕೆ ಮಾನ್ಯತೆ ಸಿಗಬೇಕು. ಸಾಂವಿಧಾನಿಕ ಸಂಸ್ಥೆಗಳಲ್ಲಿಯೂ ಕನ್ನಡದಲ್ಲಿ ವ್ಯವಹಾರ ನಡೆಯಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ಎಲ್ಲರಿಗೂ ತಿಳಿಯಬೇಕೆನ್ನುವ ಉದ್ದೇಶದಿಂದ ಹಾಗೆ ಮಾಡಲಾಗಿದೆ. ಆದರೆ, ನಮ್ಮಲ್ಲಿ ಕೇಶವಾನಂದ ಭಾರತಿ ತೀರ್ಪು ನಮಗೇ ತಿಳಿಯುವುದಿಲ್ಲ. ನಿಮಗೆ (ವಕೀಲರನ್ನು ಕುರಿತು) ತಿಳಿಯಬಹುದು. ಆದೇಶದ ಸಕಾರಣಗಳನ್ನು ಒಳಗೊಂಡ ಭಾಗ ತಿಳಿಯಲಿ, ಬಿಡಲಿ. ಅಂತಿಮ ಭಾಗವನ್ನು ಕನ್ನಡದಲ್ಲಿ ನೀಡಬೇಕು. ಆಗ ದಾವೆದಾರರಿಗೆ ಅರ್ಥವಾಗುತ್ತದೆ ಎಂದರು.

ವಿಶೇಷವೆಂದರೆ, ತೀರ್ಪುಗಳನ್ನು ಕೃತಕ ಬುದ್ಧಿಮತ್ತೆ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ಬಳಕೆ ಮಾಡಿ ಇಂಗ್ಲಿಷ್ ನಿಂದ ಕನ್ನಡಕ್ಕೆ ಅನುವಾದ ಮಾಡುವುದಕ್ಕೆ ಸಂಬಂಧಿಸಿದ ಪ್ರಕ್ರಿಯೆಯನ್ನು ಕರ್ನಾಟಕ ಹೈಕೋರ್ಟ್‌ನಲ್ಲಿ ಈಚೆಗೆ ಆರಂಭಿಸಲಾಗಿದೆ. ಇದರ ಭಾಗವಾಗಿ ಹೈಕೋರ್ಟ್ ನ್ಯಾಯಮೂರ್ತಿಗಳಾದ ಕೃಷ್ಣ ಎಸ್.ದೀಕ್ಷಿತ್ ಮತ್ತು ಸಿ.ಎಂ. ಜೋಶಿ ನೇತೃತ್ವದಲ್ಲಿ ಕೃತಕ ಬುದ್ಧಿಮತ್ತೆ ಬಳಕೆ ಮಾಡಿ ನ್ಯಾಯಾಂಗ ದಾಖಲೆಗಳನ್ನು ಅನುವಾದ ಮಾಡುವ ಸಲಹಾ ಸಮಿತಿಯನ್ನು 2023ರ ಫೆಬ್ರವರಿಯಲ್ಲಿ ರಚಿಸಲಾಗಿದೆ.

ಕನ್ನಡದಲ್ಲಿ ನೀಡಿದ ತೀರ್ಪಿನ ವಿವರ: ತುಮಕೂರಿನ ಶಿರಾ ತಾಲೂಕಿನ ಪಟ್ಟನಾಯಕನಹಳ್ಳಿಯಲ್ಲಿರುವ ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಠದ ನಂಜಾವಧೂತ ಸ್ವಾಮೀಜಿ ಮತ್ತಿತರರು ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ಪುರಸ್ಕರಿಸಿದೆ. ಪ್ರಕರಣದಲ್ಲಿ ವಿವರಿಸಲಾದ ಕಾರಣಗಳಿಂದಾಗಿ ಈ ಮೇಲ್ಮನವಿಯನ್ನು ಪುರಸ್ಕರಿಸಲಾಗಿದೆ. ಈ ಆದೇಶವನ್ನು ಇಂಗ್ಲಿಷ್ ಮತ್ತು ಕನ್ನಡ ಭಾಷೆಯಲ್ಲಿ ಏಕಕಾಲಕ್ಕೆ ನ್ಯಾಯಪೀಠ ಪ್ರಕಟಿಸಿತು.

ಏಕಸದಸ್ಯ ನ್ಯಾಯಾಧೀಶರ ಪ್ರಶ್ನಿತ ತೀರ್ಪು ಮತ್ತು ಆದೇಶವನ್ನು ರದ್ದುಗೊಳಿಸಲಾಗಿದೆ. ಪ್ರತಿವಾದಿಗಳು ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಲಾಗಿದೆ. ಪರಿಣಾಮವಾಗಿ ಟಿಒಎಸ್ ಸಂಖ್ಯೆ 1/2023ರಲ್ಲಿ ಮೇಲ್ಮನವಿದಾರರ ದಾವೆಯನ್ನು ಪುನರುಜ್ಜೀವನಗೊಳಿಸಲಾಗಿದೆ. ಅದನ್ನು ಕಾನೂನು ರೀತ್ಯಾ ವಿಚಾರಣೆ ಮತ್ತು ವಿಲೇವಾರಿ ಮಾಡಬೇಕಾಗುತ್ತದೆ. ಯಾರೂ ವೆಚ್ಚವನ್ನು ಭರಿಸುವಂತಿಲ್ಲ ಎಂದು ಕೋರ್ಟ್ ಆದೇಶದಲ್ಲಿ ತಿಳಿಸಿದೆ.

> ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಮಹತ್ವದ ಹೆಜ್ಜೆ ಇಟ್ಟಿದ್ದಾರೆ. ಹೀಗಾಗಲೇ ಅವರು ನೀಡಿರುವ ಕೆಲವು ತೀರ್ಪುಗಳು ನಮ್ಮ ಕಲೆ ಸಂಸ್ಕೃತಿಯನ್ನು ನೆನಪಿಸುವ ತೀರ್ಪುಗಳಾಗಿದ್ದು, ಇದೀಗ ಕನ್ನಡದಲ್ಲೇ ತೀರ್ಪು ನೀಡಿರುವುದು ಅವರ ಮೇಲಿನ ಗೌರವವನ್ನು ಇಮ್ಮಡಿಗೊಳಿಸಿದೆ. ಆಡು ಮುಟ್ಟದ ಸೊಪ್ಪಿಲ್ಲ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್‌ರಿಗೆ ತಿಳಿಯದ ಯಾವುದೇ ವಿಚಾರಗಳಿಲ್ಲ ಅನ್ನೋದು ಮತ್ತೊಮ್ಮೆ ಸಾಬೀತಾಗಿದೆ. ಕನ್ನಡಾಂಬೆಯ ಹೆಮ್ಮೆಯ ಪುತ್ರ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್‌ರಿಗೆ ಹೃದಯ ಪೂರ್ವಕ ಕೃತಜ್ಞತೆಗಳು.
>
> – ಲಾ ಗೈಡ್ ಬಳಗ

ನಮ್ಮ ಕುಟುಂಬ ತೇಜೋವಧೆ ಮಾಡಿದ ವಿಶ್ವನಾಥ್‌ಗೆ ಶಾಪ ತಟ್ಟದೆ ಇರದು

ಹುಣಸೂರು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಹಿಡಿಶಾಪ



ಮೈಸೂರು, ಡಿ.13(ಎಸ್‌ಬಿಡಿ)– ಸರಿಯಾದ ಮಾಹಿತಿ ತಿಳಿಯದೇ ನಮ್ಮ ಕುಟುಂಬವನ್ನು ತೇಜೋವಧೆ ಮಾಡಿರುವ ವಿಶ್ವನಾಥ್‌ಗೆ ಶಾಪ ತಟ್ಟದೆ ಇರುವುದಿಲ್ಲ ಎಂದು ಹುಣಸೂರು ಮಾಜಿ ಶಾಸಕ ಹೆಚ್.ಪಿ. ಮಂಜುನಾಥ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.


ನಗರದ ಸರಸ್ವತಿಪುರಂನಲ್ಲಿರುವ ತಮ್ಮ ಕಚೇರಿಯಲ್ಲಿ ಶುಕ್ರವಾರ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಅವರು ಒಂದೆರಡು ಖಾಸಗಿ ವಾಹಿನಿಗಳಿಗೆ ಅತ್ಯಂತ ಬಾಲಿಶವಾದ ಹೇಳಿಕೆ ನೀಡಿದ್ದಾರೆ. ಮುತ್ತೈದೆಯಾಗಿರುವ ನನ್ನ ತಾಯಿಯನ್ನೂ ನಿಂದಿಸುವ ಮಾತುಗಳನ್ನಾಡಿದ್ದಾರೆ. ಇದರ ಪ್ರತಿಫಲವನ್ನು ಅವರು ಅನುಭವಿಸುತ್ತಾರೆ. ನಾಲಿಗೆ ಅವರ ವ್ಯಕ್ತಿತ್ವ ತಿಳಿಸುತ್ತದೆ. ಈ ಮಟ್ಟಕ್ಕೆ ಇಳಿದ ಮೇಲೆ ನಾನು ಬಗ್ಗುವ ಪ್ರಶ್ನೆಯೇ ಇಲ್ಲ ಎಂದು ಕಿಡಿಕಾರಿದರು.

ಹುಣಸೂರಿನಲ್ಲಿ ನಮ್ಮ ಸಹೋದರ ಸ್ಪೋರ್ಟ್ಸ್ ಅಕಾಡೆಮಿ ನಿರ್ಮಿಸುವ ಉದ್ದೇಶ ಹೊಂದಿದ್ದು ಅದಕ್ಕೆ ಪೂರಕವಾಗಿ ಈಜುಕೊಳ ನಿರ್ಮಾಣಕ್ಕೆ ಬಾಡಿಗೆ ರೂಪದಲ್ಲಿ ಹುಣಸೂರು ಕಾಫಿ ಕ್ಯೂರಿಂಗ್ ಸಂಸ್ಥೆಯಿಂದ ಮುಕ್ಕಾಲು ಎಕರೆಯಷ್ಟು ಜಾಗ ಪಡೆದಿದ್ದಾರೆ. ಆ ಜಾಗವನ್ನೇನು ಖರೀದಿ ಮಾಡಿಲ್ಲ. ಹೀಗಿರುವಾಗ ಈ ಜಮೀನು ಬಿ–ಖರಾಬು, ಎ–ಖರಾಬು ವಿಚಾರ ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಹೀಗಿದ್ದರೂ ಸಂಪೂರ್ಣ ಮಾಹಿತಿ ಅರಿಯದೆ, ಯಾರೋ ಹೇಳಿದ್ದನ್ನು ಕೇಳಿಕೊಂಡು ಮಾತನಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಏನೂ ಮಾಹಿತಿ ಇಲ್ಲದಿದ್ದರೂ 'ಏಯ್ ಮಂಜುನಾಥ ನೀನು ಮಾಲೀಕನಲ್ಲ' ಎಂದು ಸಿನಿಮಾ ಡೈಲಾಗ್ ಹೊಡೆದಿದ್ದಾರೆ. ರಾಜಕಾರಣದಲ್ಲಿ ಕುನ್ನಿ, ಬಚ್ಚಾ ಎಂದಿದ್ದಾರೆ. ಹೌದು ನಿಮ್ಮ ಅನುಭವದ ಮುಂದೆ ನಾನಿನ್ನೂ ಬಚ್ಚಾ. ಹಾಗಾಗಿ ನಿಮ್ಮ ಈ ಮಾತಿನಿಂದ ನನಗೇನು ಅವಮಾನವಾಗುವುದಿಲ್ಲ. ಆದರೆ ನಾನು ನಾಲಿಗೆ ತಪ್ಪಿ ನಿಮ್ಮನ್ನು ಲುಚ್ಚಾ ಎಂದರೆ ನಿಮ್ಮ ಮರ್ಯಾದೆ ಏನಾಗುತ್ತದೆ. ಆದರೆ ನಾನು ಹಾಗೆನ್ನುವುದಿಲ್ಲ. ಹಿರಿಯ ರಾಜಕಾರಣಿಯಾದವರು ಪಕ್ವವಾಗಿರಬೇಕು. ಆದರೆ, ನೀವು ಕೊಳೆತು ಹೋಗಿದ್ದೀರಾ ಎಂದರು.

ಸತ್ಯಸತ್ಯಾತೆ ತಿಳಿದುಕೊಂಡು ಮಾತನಾಡಬೇಕು. ಏಳು ತಲೆಮಾರಿನಿಂದ ನಮ್ಮ ಕುಟುಂಬಕ್ಕೆ ಒಂದೇ ಒಂದು ಕಳಂಕ ಇಲ್ಲ. ನೀವು ಹುಣಸೂರಿನಲ್ಲಿ ಏಳು ತಿಂಗಳ ಕಾಲ ಶಾಸಕರಾಗಿದ್ದಾಗ ಏನೆಲ್ಲಾ ಅನಾಹುತ ಮಾಡಿದ್ದೀರಿ ಎಂದು ಪ್ರತ್ಯೇಕವಾಗಿ ಸರ್ವೆ ಮಾಡಿಸಿ ಮಾಹಿತಿ ತಿಳಿದುಕೊಳ್ಳಿ. ಡಿ.ದೇವರಾಜ ಅರಸು ಬಗ್ಗೆ ಬೂಟಾಟಿಕೆಯ ಮಾತ ನ್ನಾಡುವುದು ಬೇಡ. ಕೆ.ಎನ್.ರಾಜಣ್ಣ ನವರು ಆಗಾಗ್ಗೆ ಅರಸು ಅವರ ಸಮಾಧಿಗೆ ನಮಸ್ಕರಿಸಿ ಹೋಗು ತ್ತಾರೆ. ಇವರಂತಹ ಎಷ್ಟೋ ಮಂದಿ ಅರಸು ಅವರ ಬಗ್ಗೆ ನಿಜವಾದ ಭಕ್ತಿ–ಗೌರವ ಹೊಂದಿ ದ್ದಾರೆ. ಬಚ್ಚಲು ಬಾಯಿಯಂತೆ ಮಾತನಾಡದೆ ಸುಮ್ಮನಿದ್ದರೆ ಒಳ್ಳೆಯದು. ನೀವು ಹೇಳಿದ್ದ ನ್ನೆಲ್ಲ ಕೇಳಿಕೊಂಡು ಕೂರಲ್ಲ. ನಿಮ್ಮ ಮಾತುಗಳಿಗೆ ನಮ್ಮಿಂದಲೂ ತಕ್ಕ ಉತ್ತರ ಬರಲಿದೆ ಎಂದು ಎಚ್ಚರಿಸಿದರು.

ಹುಣಸೂರು ಕ್ಷೇತ್ರದಲ್ಲಿ 750 ಮತದಾರರು ಇಲ್ಲದೆ ಇದ್ದರೂ ಮೂರು ಬಾರಿ ಗೆದ್ದು ಬರಲು ಕ್ಷೇತ್ರದ ಮತದಾರರು ನನ್ನ ಮೇಲೆ ಇಟ್ಟಿರುವ ಪ್ರೀತಿ, ವಿಶ್ವಾಸ ಕಾರಣ. ನಾನೇನು ಕೆಲಸ ಮಾಡಿದ್ದೇನೆಂದು ಜನರಿಗೆ ಗೊತ್ತಿದೆ. ನನ್ನನ್ನು ಸೋಲಿಸಿದ ಮತದಾರರು ನಿಮ್ಮನ್ನೂ 55 ಸಾವಿರ ಮತಗಳ ಅಂತರದಿಂದ ಸೋಲಿಸಿದ್ದಾರೆ ಎನ್ನುವುದನ್ನು ಮರೆಯ ಬೇಡಿ. ನನಗೆ ಟಿಕೆಟ್ ನೀಡಲು ನೀವು ಮತ್ತು ಶ್ರೀನಿವಾಸ ಪ್ರಸಾದ್ ಅವರು ಶಿಫಾರಸ್ಸು ಮಾಡಿದ್ದನ್ನು ಒಪ್ಪಿಕೊಳ್ಳುತ್ತೇನೆ. ನಂತರದಲ್ಲಿ ನಾನು ನೀವು ಸ್ಪರ್ಧಿಸಿದ್ದ ಎರಡು ಚುನಾವಣೆಗಳಲ್ಲಿ ಕೆಲಸ ಮಾಡಿ, ಋಣ ತೀರಿಸಿದ್ದೇನೆ. ನನಗೆ ಟಿಕೆಟ್ ಕೊಟ್ಟಿದ್ದು ಆಸ್ಕರ್ ಫರ್ನಾಂಡೀಸ್ ಹಾಗೂ ಮಲ್ಲಿಕಾರ್ಜುನ ಖರ್ಗೆಯವರು. ಗೆಲ್ಲುವಂತೆ ನೋಡಿಕೊಂಡಿದ್ದು ಸಿದ್ದರಾಮಯ್ಯ ಅವರು ಎನ್ನುವುದನ್ನು ಎಲ್ಲಾ ವೇದಿಕೆಗಳಲ್ಲೂ ಹೇಳಿದ್ದೇನೆ ಎಂದು ತಿಳಿಸಿದರು.



ಇಂದು ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯಿಂದ ದುಂಡು ಮೇಜಿನ ಸಭೆ

ಮೈಸೂರು, ಡಿ.13–ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ಪ್ರವರ್ಗ–2ಎಗೆ ಸೇರಿಸದಂತೆ ಒತ್ತಾಯಿಸಿ ಹಾಗೂ ಸಿಎಂ ಸಿದ್ದರಾಮಯ್ಯ ಅವರನ್ನು ಅವಹೇಳನ ಮಾಡಿರುವ ಶ್ರೀ ಜಯಮೃತ್ಯುಂಜಯ ಸ್ವಾಮಿಗಳ ಹೇಳಿಕೆ ಖಂಡಿಸಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ವತಿಯಿಂದ ನಾಳೆ (ಡಿ.14) ಬೆಳಗ್ಗೆ 11.30ಕ್ಕೆ ದುಂಡು ಮೇಜಿನ ಸಭೆ ಏರ್ಪಡಿಸಲಾಗಿದೆ.

ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಜಲದರ್ಶಿನಿ ಅತಿಥಿ ಗೃಹದ ಹೊಸ ಕಟ್ಟಡದಲ್ಲಿ ನಡೆಯಲಿರುವ ಸಭೆಯಲ್ಲಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಡಿ.ಸುಬ್ರಹ್ಮಣ್ಯ, ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷ ರವಿನಂದನ್, ಜಿಲ್ಲಾ ಉಪ್ಪಾರರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಕುರುಬರ ಸಂಘದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ದಸಂಸ ರಾಜ್ಯ ಸಂಚಾಲಕ ದೇವಗಳ್ಳಿ ಸೋಮಶೇಖರ್, ಸಂವಿಧಾನ ಸಂರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಜಿಲ್ಲಾ ವಿಶ್ವಕರ್ಮ ಬಡಗಿಗಳ ಸಂಘದ ಅಧ್ಯಕ್ಷ ಮೋಗಣ್ಣಾಚಾರ್, ಮಾಜಿ ಕಾರ್ಪೊರೇಟರ್‌ಗಳಾದ ಎಂ.ಶಿವಣ್ಣ ಜೆ.ಗೋಪಿ, ಸವಿತಾ ಸಮಾಜದ ಮುಖಂಡ ಎನ್.ಆರ್.ನಾಗೇಶ್, ಅತೀ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಡಿ.ನಾಗಭೂಷಣ್, ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪ ನಾಯಕ, ರೆಸ್ಪಾನ್ಸಿಬಲ್ ಸಿಟಿಜನ್ ವಾಯ್ಸ್ ರಾಜ್ಯಾಧ್ಯಕ್ಷ ಎಫ್.ಎಂ.ಖಲೀಂ, ರಾಜ್ಯ ಹಿಂದುಳಿದ ವರ್ಗಗಳ ಅಲೆಮಾರಿ ಬುಡಕಟ್ಟು ಸಮುದಾಯಗಳ ವೇದಿಕೆ ಅಧ್ಯಕ್ಷ ಆರ್. ರಂಗಪ್ಪ ಹಿಂದುಳಿದ ವರ್ಗಗಳ ಮುಖಂಡ ಲೋಕೇಶ್ ಕುಮಾರ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವೈವಾಹಿಕ ಸುಖಬೋಗದಿಂದ ಪತಿಯ ವಂಚಿಸುವುದು ಕ್ರೌರ್ಯ

ಪತಿಯಿಂದ ದೂರವಿದ್ದ ಪತ್ನಿಗೆ ವಿಚ್ಛೇದನ ಮಂಜೂರು ಮಾಡಿದ ಹೈಕೋರ್ಟ್

ಬೆಂಗಳೂರು, ಡಿ.13– ಪತಿಯಿಂದ ಸುಮಾರು 8 ವರ್ಷಗಳ ಕಾಲ ದೂರವಿದ್ದು, ವೈವಾಹಿಕ ಸುಖಭೋಗಗಳಿಂದ ಆತನನ್ನು ವಂಚಿಸುವುದು ಕ್ರೌರ್ಯಕ್ಕೆ ಸಮಾನವಾದದ್ದು ಎಂದು ಅಭಿಪ್ರಾಯ ಪಟ್ಟಿರುವ ಹೈಕೋರ್ಟ್, ಪತಿಯಿಂದ ದೂರ ಉಳಿದಿದ್ದ ಪತ್ನಿಗೆ ವಿಚ್ಛೇದನ ಮಂಜೂರು ಮಾಡಿತು.


ಬೆಂಗಳೂರಿನ ಹೆಸರಘಟ್ಟ ರಸ್ತೆಯ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ನ್ಯಾಯಮೂರ್ತಿ ಉಮೇಶ್ ಎಂ. ಅಡಿಗ ಒಳಗೊಂಡ ನ್ಯಾಯಪೀಠ, ಪತ್ನಿಯೂ ತನ್ನ ಪತಿ ಮತ್ತು ಮನೆ ತೊರೆದಿರುವ ಆಧಾರದಲ್ಲಿ ವಿಚ್ಛೇದನ ಮಂಜೂರು ಮಾಡುತ್ತಿರುವುದಾಗಿ ಆದೇಶದಲ್ಲಿ ತಿಳಿಸಿದೆ.

ಅರ್ಜಿದಾರರ ಪತ್ನಿ ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತಿದ್ದು, ತಮ್ಮ ಆಕ್ಷೇಪಣೆ ಸಲ್ಲಿಸಲು ನ್ಯಾಯಾಲಯದ ಮುಂದೆ ಬಂದಿಲ್ಲ. ಹೀಗಾಗಿ ಅವರಿಗೆ ಶಾಶ್ವತ ಜೀವನಾಂಶ ನೀಡಬೇಕಾದ ಅನಿವಾರ್ಯ ಎದುರಾಗುವುದಿಲ್ಲ. ಜೊತೆಗೆ, ಅರ್ಜಿದಾರರು ತನ್ನ ಇಬ್ಬರ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ಸಿದ್ಧರಿದ್ದು, ನ್ಯಾಯಾಲಯ ನಿರ್ಧರಿಸಿದ ಮೊತ್ತವನ್ನು ಠೇವಣಿ ಇಡುವುದಾಗಿ ಒಪ್ಪಿಕೊಂಡಿದ್ದಾರೆ. ಅದೇ ಮೊತ್ತವನ್ನು ಪತ್ನಿಯ ಜೀವನಾಂಶ ಮತ್ತು ಮಕ್ಕಳ ಶಿಕ್ಷಣಕ್ಕಾಗಿ ಬಳಸಬಹುದಾಗಿದೆ. ಹೀಗಾಗಿ ಇಬ್ಬರು ಮಕ್ಕಳ ಹೆಸರಿನಲ್ಲಿ ತಲಾ 10 ಲಕ್ಷ ರೂ. ಗಳನ್ನು ಕೌಟುಂಬಿಕ ನ್ಯಾಯಾಲಯದಲ್ಲಿ ಠೇವಣಿ ಇಡಬೇಕು ಎಂದು ಸೂಚನೆ ನೀಡಿದೆ. ಈ ಮೊತ್ತ ಮಕ್ಕಳು ಪ್ರೌಢಾವಸ್ಥೆಗೆ ತಲುಪಿದ ಬಳಿಕ ಪಡೆದುಕೊಳ್ಳಬಹುದಾಗಿದೆ ಎಂದು ಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ: ಅರ್ಜಿದಾರ ಮತ್ತು ಪ್ರತಿವಾದಿ(ಪತ್ನಿ) ಉಡುಪಿಯಲ್ಲಿ 2004ರ ಮೇ 2 ರಂದು ವಿವಾಹವಾಗಿದ್ದರು. ಬಳಿಕ ಬೆಂಗಳೂರಿನಲ್ಲಿ ನೆಲೆಸಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದರು. ಇದಾದ ನಂತರ ಪತ್ನಿ ತನ್ನ ಸಂಬಂಧಿಕರು ಹಾಗೂ ಸ್ನೇಹಿತರೊಂದಿಗೆ ಸದಾ ಫೋನಿನಲ್ಲಿ ಮಾತನಾಡುತ್ತಿದ್ದರು. ಈ ಸಂಬಂಧ ಹಲವು ಬಾರಿ ತಿಳಿಸಿದರೂ ಅವರ ಸರಿಪಡಿಸಿಕೊಂಡಿರಲಿಲ್ಲ. ಆದರೆ, 2016 ರ ಮಾ.28 ರಂದು ಇದ್ದಕ್ಕಿದಂತೆ ಪತಿಗೆ ತಿಳಿಸದೆ ಮನೆ ತೊರೆದಿದ್ದರು.

ಮನೆಗೆ ಹಿಂದಿರುಗುವಂತೆ ಸಾಕಷ್ಟು ಬಾರಿ ಪ್ರಯತ್ನ ಮಾಡಿದರೂ ಅವರು ಹಿಂದಿರುಗಿರಲಿಲ್ಲ. ಹೀಗಾಗಿ ವಿಚ್ಛೇದನ ಕೋರಿ ಉಡುಪಿಯ ಕೌಟುಂಬಿಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಕೌಟುಂಬಿಕ ನ್ಯಾಯಾಲಯ ಅರ್ಜಿ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಪತಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಹಣದ ಆಸೆಗೆ 19.89 ಲಕ್ಷ ರೂ. ಕಳೆದುಕೊಂಡ ಮಹಿಳೆ



ಮೈಸೂರು, ಡಿ. 13(ಆರ್‌ಕೆ)– ಮನೆ ಯಲ್ಲಿದ್ದುಕೊಂಡೇ ಹೆಚ್ಚು ಹಣ ಸಂಪಾದಿಸಬಹುದೆಂಬ ಆಮಿಷವೊಡ್ಡಿದ ಆನ್‌ಲೈನ್ ವಂಚಕರು ಮೈಸೂರಿನ ಮಹಿಳೆಯೊಬ್ಬರಿಂದ 19.89 ಲಕ್ಷ ರೂ. ಪೀಕಿರುವ ಪ್ರಸಂಗ ಬೆಳಕಿಗೆ ಬಂದಿದೆ.

ಮೈಸೂರಿನ ರಾಜೀವ್‌ನಗರದ ನಿವಾಸಿ, 'ವರ್ಕ್ ಫ್ರಮ್ ಹೋಂ' ಆಪ್‌ನಲ್ಲಿ ಬಂದ ಮೆಸೇಜ್ ನೋಡಿ ಹಂತ–ಹಂತವಾಗಿ 19,89,723 ರೂ. ಹಣವನ್ನು ಹೂಡಿದ್ದಾರೆ. ದಿನಕ್ಕೆ 3ರಿಂದ 4 ಸಾವಿರ ರೂ. ಹಣ ಸಂಪಾದಿಸಬಹುದೆಂದು ಆಸೆ ಹುಟ್ಟಿಸಿದ ವಂಚಕರು ಆನ್‌ಲೈನ್‌ನಲ್ಲಿ ಮಹಿಳೆಯಿಂದ ಹಣ ವರ್ಗಾಯಿಸಿಕೊಂಡಿದ್ದಾರೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ನಕ್ಕರೆ ಅದೇ ಸ್ವರ್ಗ

ರಂಗ : ನನಗೆ ಮುಂದೆ ಹುಟ್ಟೋ ಮಗನಿಗೆ 'ಐ ಲವ್ ಯೂ' ಅಂತ ಹೆಸರು ಇಡಬೇಕು ಅಂತ ಅಂದ್ಕೋಂಡಿದ್ದೀನಿ.

ನಿಂಗ : ಏಕೆ?

ರಂಗ : ಏಕೆಂದರೆ ನನಗಂತೂ ಯಾವ ಹುಡುಗೀರು 'ಐ ಲವ್ ಯೂ' ಅಂತ ಹೇಳಿಲ್ಲ. ಅವನಿಗಾದ್ರೂ ಹೇಳ್ಲಿ ಅಂತ...

ಮೈಸೂರು ಮಿತ್ರ

ಶನಿವಾರ, 14 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಪ್ರೇಮ ಬೆಂಕಿಯು ಎಲ್ಲವನ್ನೂ ಪವಿತ್ರವಾಗಿಸುತ್ತದೆ.

– ಡಾ.ರಾಧಾಕೃಷ್ಣನ್

ವೇದ ಸುಳ್ಳಾದರೂ { ಭಾವಿಸಿದರೆ ಬಳಗ,
ಗಾದೆ ಸುಳ್ಳಾಗದು { ಕೂಡಿಸಿದರೆ ಕಾಸು.

ನಿಮ್ಮ ಪತ್ರಗಳು

ಮಹಿಳಾ ಸಂಘಗಳಿಗೆ ಕಡಿವಾಣ ಹಾಕಿ

ಮಾನ್ಯರೆ,

ಇತ್ತೀಚೆಗೆ ಹಲವು ಮಹಿಳಾ ಸಂಘಗಳು ಎಲ್ಲಾ ಮಹಿಳೆಯರಿಗೂ ಕಡಿಮೆ ಬಡ್ಡಿ ರೂಪದಲ್ಲಿ ಹಣವನ್ನು ಸಾಲವಾಗಿ ನೀಡುತ್ತಾ ಬಂದಿರುವುದು ಸರಿಯಷ್ಟೆ. ಆದರೆ ರೈತ ಮಹಿಳೆಯರಿಗೆ ಅವರು ಕಟ್ಟುವ ಸಾಮರ್ಥ್ಯಕ್ಕಿಂತಲೂ ಹೆಚ್ಚು ಹಣವನ್ನು ನೀಡಿ ಅವರನ್ನು ಸಾಲದ ಕೂಪಕ್ಕೆ ತಳ್ಳುತ್ತಿರುವುದು ನಿಜಕ್ಕೂ ವಿಷಾದನೀಯ. ಅಲ್ಲದೆ ಸಾಲ ವಸೂಲಿಗಾರರಿಂದ ಕಿರುಕುಳ ಅನುಭವಿಸಿ ಕೆಲವು ಕಡೆ ಪ್ರಾಣ ಕಳೆದುಕೊಂಡಿರುವುದು ಅಲ್ಲದೆ ಕೆಲವು ಕಡೆ ಅನ್ಯಮಾರ್ಗವಿಲ್ಲದೆ ಅಡ್ಡದಾರಿಯಿಂದ ಹಣ ಸಂಪಾದನೆಗಿಳಿದಿರುವುದು ಉಂಟು. ದಯಮಾಡಿ ಸಂಬಂಧಪಟ್ಟವರು ಇದೆಲ್ಲದಕ್ಕೂ ಕಡಿವಾಣ ಹಾಕಬೇಕು. ಅಲ್ಲದೆ, ಮಹಿಳಾ ಸಂಘಗಳಿಗೆ ರೈತ ಮಹಿಳೆಯರ ಕುಟುಂಬದ ಒಟ್ಟಾರೆ ದುಡಿಯುವ ಸಾಮರ್ಥ್ಯಕ್ಕನುಗುಣವಾಗಿ ಸಾಲವನ್ನು ನೀಡುವಂತೆ ನಿರ್ದೇಶನ ನೀಡಬೇಕೆಂದು ಸಂಬಂಧಪಟ್ಟವರಲ್ಲಿ ಕಳಕಳಿಯ ಮನವಿ.

–ವೇದಾಶಂಕರ್, ಮೈಸೂರು.

ಕನ್ನಡದಲ್ಲಿ ತೀರ್ಪು ಈ ಹಿಂದೆಯೇ ಬಂದಿದೆ!


ಮಾನ್ಯರೆ,

ಕರ್ನಾಟಕದ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರು ಸಿವಿಲ್ ಪ್ರಕರಣವೊಂದರಲ್ಲಿ ಇತ್ತೀಚೆಗೆ ನೀಡಿದ ಕನ್ನಡದ ತೀರ್ಪೇ ಪ್ರಥಮವೆಂದು ಮಾಧ್ಯಮಗಳು ಬಿಂಬಿಸುತ್ತಿರುವುದು ವಿಷಾದನೀಯ ಸುದ್ದಿಯಾಗಿದೆ.

ಈ ಹಿಂದೆಯೂ ಕನ್ನಡದಲ್ಲಿ ತೀರ್ಪುಗಳು ಬಂದಿದ್ದು, ನನಗೆ ನೆನಪಿರುವಂತೆ ಕರ್ನಾಟಕದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ಅರಳಿ ನಾಗರಾಜ್ ಅವರೂ ಕನ್ನಡದಲ್ಲಿ ತೀರ್ಪು ಬರೆದಿದ್ದಾರೆನ್ನುವುದು ವಾಸ್ತವ. 2003ರಲ್ಲೇ ಕರ್ನಾಟಕದ ಎಲ್ಲ ನ್ಯಾಯಾಲಯಗಳಲ್ಲೂ ಕನ್ನಡವನ್ನು ವ್ಯಾಪಕವಾಗಿ ಬಳಸಬೇಕೆಂಬ ಆದೇಶವನ್ನು ಕರ್ನಾಟಕದ ಉಚ್ಚ ನ್ಯಾಯಾಲಯ ಹೊರಡಿಸಿತ್ತೆಂಬುವುದು ಗಮನಾರ್ಹ.

–ಕೊ.ಸು.ನರಸಿಂಹ ಮೂರ್ತಿ, ಕನ್ನಡ ಕ್ರಿಯಾ ಸಮಿತಿ, ಮೈಸೂರು.

ದೇವನೂರ ಮಹಾದೇವ ಅವರಿಗೆ ವೈಕಂ ಪ್ರಶಸ್ತಿ ಸ್ವಾಗತಾರ್ಹ



ಮಾನ್ಯರೇ

ಕೇರಳದ ವೈಕಂ ಹೋರಾಟದ ನೆನಪಿನಲ್ಲಿ ತಮಿಳುನಾಡು ಸರ್ಕಾರ ನೀಡುವ 2024ರ ಚೊಚ್ಚಲು ವೈಕಂ ಪ್ರಶಸ್ತಿಯನ್ನು ಕರ್ನಾಟಕದ ಹೆಸರಾಂತ ಸಾಹಿತಿಗಳಾದ ದೇವನೂರು ಮಹಾದೇವ ಅವರಿಗೆ ಪ್ರದಾನ ಮಾಡಿರುವುದು ಸ್ವಾಗತಾರ್ಹ.

ಕೇರಳದಲ್ಲಿ ಅಸ್ಪೃಶ್ಯತೆ ವೈಕಂ ಸತ್ಯಾಗ್ರಹ ಹೋರಾಟ ನಡೆದಿತ್ತು ಆ ಹೋರಾಟದಲ್ಲಿ ಪೆರಿಯ ರಾಮಸ್ವಾಮಿಯವರು ಕೂಡ ಭಾಗಿಯಾಗಿದ್ದರು. ನೂರು ವರ್ಷಗಳ ತರುವಾಯ ಯಾವ ದೇವಸ್ಥಾನ ಪ್ರವೇಶಕ್ಕಾಗಿ ಹೋರಾಟ ನಡೆದಿತ್ತೋ ಅದರ ಪಕ್ಕದಲ್ಲಿ ವೈಕಂ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆದಿದೆ. ಈ ಪ್ರಶಸ್ತಿ ದಮನಿತ ವರ್ಗಗಳ ಕಲ್ಯಾಣಕ್ಕಾಗಿ ಶ್ರಮಿಸಿದ ವ್ಯಕ್ತಿಗಳಿಗೆ ನೀಡುವ ಪ್ರಶಸ್ತಿಯಾಗಿದೆ. ಕೇರಳ ವೈಕಂನಲ್ಲಿ ತಮಿಳುನಾಡಿನ ಸರ್ಕಾರ ಘೋಷಣೆ ಮಾಡಿದ ಪ್ರಶಸ್ತಿಯನ್ನು ಕರ್ನಾಟಕದ ಹಿರಿಯ ಸಾಹಿತಿ ದೇವನೂರ ಮಹದೇವರಿಗೆ ನೀಡಿ ಮೂರು ರಾಜ್ಯಗಳ ತ್ರಿವೇಣಿ ಸಂಗಮವಾಗಿದೆ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ ಮೈಸೂರು

ಕನ್ನಡ ಹಬ್ಬದಲ್ಲಿ ಊಟದ ಕಾದಾಟಕ್ಕೆ ಬ್ರೇಕ್ ಬೀಳಲಿ

ಮಾನ್ಯರೆ,

ಕನ್ನಡ ಸಾಹಿತ್ಯ ಸಮ್ಮೇಳನ ಎಂದರೆ ಕನ್ನಡಿಗರಲ್ಲಿ ಹಿಂದೆಲ್ಲಾ ಎಲ್ಲಿಲ್ಲದ ಸಂಭ್ರಮ ಮನೆ ಮಾಡುತ್ತಿತ್ತು. ಇಡೀ ತಿಂಗಳು ಪೂರ್ತಿ ಸಡಗರ, ಉತ್ಸಾಹದಿಂದ ಕನ್ನಡ ಪ್ರೇಮಿಗಳು ಸಿದ್ಧತೆಗಳಲ್ಲಿ ಭಾಗವಹಿಸುತ್ತಿದ್ದರು. ರಾಜ್ಯದ ಮೂಲೆ ಮೂಲೆಗಳಿಂದ ಸಾಹಿತ್ಯಾಸಕ್ತರು ಪುಸ್ತಕದ ಜೋಳಿಗೆ ಹೊತ್ತು ಜ್ಞಾನ ಸಂಪಾದನೆ ಮಾಡುವ ಹಂಬಲದೊಂದಿಗೆ ಬರುತ್ತಿದ್ದರು. ಇಂದು ಕನ್ನಡ ಸಾಹಿತ್ಯ ಸಮ್ಮೇಳನದ ಮುಖ್ಯ ಧ್ಯೇಯೋದ್ದೇಶಗಳನ್ನೆ ಮರೆತಿರುವ ನಾವುಗಳು ಸಸ್ಯಾಹಾರ ಬೇಡ, ಮಾಂಸಾಹಾರ ಬೇಕು. ನಾವು ಮನೆಗೊಂದು ಕೋಳಿ ಸಂಗ್ರಹಿಸುತ್ತೇವೆ ಎಂದು ಬಹಿರಂಗವಾಗಿ ಕಾದಾಡುವ ಮೂಲಕ ಊಟವನ್ನೇ ಪ್ರಧಾನ ವಿಷಯವನ್ನಾಗಿ ಚರ್ಚಿಸುತ್ತಿದ್ದೇವೆ. ಸರ್ಕಾರ ಈ ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸಿ ಸಮಸ್ಯೆ ಇತ್ಯರ್ಥಪಡಿಸಲು ಆಗ್ರಹಿಸುತ್ತೇನೆ. ಕೊನೆ ಪಕ್ಷ ಸಸ್ಯಹಾರಿಗಳಿಗೆ ಪ್ರತ್ಯೇಕ ಸ್ಥಳ ನಿಗದಿಪಡಿಸಿ, ಮಾಂಸಾಹಾರಿಗಳಿಗೆ ಪ್ರತ್ಯೇಕ ಸ್ಥಳ ಗುರುತಿಸಬೇಕಿದೆ. ಊಟದ ಕಾದಾಟಕ್ಕೆ ಬ್ರೇಕ್ ಹಾಕಿ ಕನ್ನಡಿಗರು ಅನುಭವಿಸುತ್ತಿರುವ ನೋವುಗಳು, ಗಡಿ ಜನರ ಕಷ್ಟಗಳು, ಕನ್ನಡಕ್ಕೆ ಎದುರಾಗಿರುವ ತೊಡಕುಗಳಿಗೆ ಪರಿಹಾರ ಕಂಡುಕೊಳ್ಳಬೇಕಿದೆ. ಕನ್ನಡದ ಅಸ್ಮಿತೆ ಉಳಿಸೋಣಾ. ಜಗದಗಲಕ್ಕೆ ಕನ್ನಡದ ಕಂಪನ್ನು ಚೆಲ್ಲೋಣಾ ಊಟದ ಚಿಂತೆ ನಿಲ್ಲಿಸೋಣ.

–ಮಧುರಾಜ್ ಮಳಲವಾಡಿ, ಜಯನಗರ, ಮಳಲವಾಡಿ, ಮೈಸೂರು

ಪಾರಂಪರಿಕ ಕಟ್ಟಡಗಳ ಪುನರ್ ನಿರ್ಮಾಣದ ನಿರ್ಧಾರ ಸ್ವಾಗತಾರ್ಹ



ಮಾನ್ಯರೆ,

ಪಾರಂಪರಿಕ ನಗರಿ ಮೈಸೂರಿನಲ್ಲಿ ಸುಮಾರು 140 ವರ್ಷಗಳ ಇತಿಹಾಸ ಹೊಂದಿರುವ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಹಾಗೂ ದೇವರಾಜ ಮಾರುಕಟ್ಟೆ ಶಿಥಿಲಗೊಂಡು ಕುಸಿಯುವ ಪರಿಸ್ಥಿತಿಯಲ್ಲಿವೆ. 2016ರಲ್ಲಿ ದೇವರಾಜ ಮಾರುಕಟ್ಟೆಯ ಕಮಾನು ಕುಸಿದಿತ್ತು. 2012ರಲ್ಲಿ ಲ್ಯಾನ್ಸ್‌ಡೌನ್ ಕಟ್ಟಡದ ಒಂದು ಮಳಿಗೆ ಕುಸಿದಿತ್ತು. ನಾಲ್ವರು ಬಲಿಯಾಗಿದ್ದರು. ನಾವು ನಮ್ಮ ಪಾರಂಪರಿಕ ಕಟ್ಟಡಗಳನ್ನು ಕಳೆದುಕೊಳ್ಳುತ್ತೇವೆ ಎನ್ನುವಷ್ಟರಲ್ಲೇ ಸರ್ಕಾರ ನಮಗೆ ಒಂದು ಒಳ್ಳೆಯ ಸುದ್ದಿ ನೀಡಿದೆ. ಹೌದು, ಮೈಸೂರು ನಗರದ ಪ್ರಸಿದ್ಧ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡವನ್ನು ಪುನರ್ ನಿರ್ಮಾಣ ಮಾಡಲು ನಿರ್ಧರಿಸಿದೆ. ಶಿಥಿಲಾವಸ್ಥೆಯಲ್ಲಿರುವ ಕಟ್ಟಡವನ್ನು ಅದೇ ಶೈಲಿ ಹಾಗೂ ವಿನ್ಯಾಸದೊಂದಿಗೆ ಪುನರ್ ನಿರ್ಮಾಣ ಮಾಡಲು ಸರ್ಕಾರ ಮುಂದಾಗಿರುವುದು ಮೈಸೂರಿನ ಜನತೆಗೆ ಸಂತಸ ತಂದಿದೆ. ಈ ನಿರ್ಧಾರವನ್ನು ತೆಗೆದುಕೊಂಡಿದ್ದಕ್ಕಾಗಿ ಮೈಸೂರು ಮಹಾನಗರ ಪಾಲಿಕೆ ಮತ್ತು ನಗರದ ಉಸ್ತುವಾರಿಗಳಿಗೆ ಧನ್ಯವಾದಗಳು.

–ಮಹಾಂತೇಶ ಬಸಪ್ಪ, ಬಳ್ಳೂರುಹುಂಡಿ ಗ್ರಾಮ, ನಂಜನಗೂಡು ತಾ.

ಎಸ್.ಎಂ.ಕೃಷ್ಣ ಅಂದರೆ ಸಹನೆ ಸಂಯಮ ಸಜ್ಜನಿಕೆ



"ಅವರ ಅಚ್ಚುಕಟ್ಟಾದ ಧಿರಿಸು, ಸ್ವಚ್ಛವಾದ ಮಾತುಗಳೂ ಕೂಡ ಅನೇಕ ಕೊಳಕು ಮಂಡಲಗಳ ಟೀಕೆಗೆ ಗ್ರಾಸವಾಗಿದ್ದವು. 'ಬಡವರನ್ನು ನೋಡೋದಿಲ್ಲ. ಹತ್ತಿರ ಸೇರಿಸೋದಿಲ್ಲ' ಎಂಬುದು ಅವರ ಕೊಂಕಾಗಿತ್ತು. ಕೃಷ್ಣರ ಉಡುಪು ಮಾತ್ರ ಟಿಪ್ ಟಾಪ್ ಆದರೆ ನಡವಳಿಕೆ, ಸಾಮಾನ್ಯರೊಡನೆ ಬೆರೆಯುವಿಕೆ ಅತ್ಯಂತ ಸಹಜವಾಗಿತ್ತು. ತಮಿಳು ಭಾಷೆಯ ಕಾರ್ಪೊರೇಟರೊಬ್ಬರ ಕುರಿತಂತೆ ಸಂಸ್ಮರಣ ಕಾರ್ಯಕ್ರಮವಿತ್ತು. ಬಹಳ ವರ್ಷದ ಹಿಂದೆಯೇ ತೀರಿಕೊಂಡಿದ್ದ ಆ ವ್ಯಕ್ತಿ ಜನಮಾನಸದಿಂದ ಎಂದೋ ಮಾಸಿ ಹೋಗಿದ್ದರು. ಸಭೆಗೆ ಸಿದ್ಧತೆ ನಡೆಯುತ್ತಿದೆ. ಅಲ್ಲಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಪ್ರತ್ಯಕ್ಷ! ಅವರಿಗೆ ಯಾರೂ ಆಹ್ವಾನ ಪತ್ರವನ್ನೂ ಕೊಟ್ಟಿರಲಿಲ್ಲ. ಹಳೇ ತಲೆಮಾರಿನ ಯಾರೋ ಕಾರ್ಪೊರೇಟರ್ ಸ್ಮರಣ ಸಭೆಗೆ ಅನಿರೀಕ್ಷಿತ ಪ್ರೇಕ್ಷಕನಾಗಿ ಬಂದಿದ್ದರು. ಸಂಘಟಕರಿಗೋ ಆಶ್ಚರ್ಯಾಘಾತ. ಆಹ್ವಾನವೇ ಇಲ್ಲದೆ ರಾಜ್ಯದ ಮುಖ್ಯಮಂತ್ರಿ ಆಗಮಿಸಿದ್ದಾರೆ. ವೇದಿಕೆಗೆ ಬರಬೇಕೆಂದು ವಿನಂತಿಸಿದರು.



ಜೆ.ಬಿ.ರಂಗಸ್ವಾಮಿ
ವಿಶ್ರಾಂತ ಪೊಲೀಸ್ ಅಧಿಕಾರಿ, ಮೈಸೂರು

1993

ಇನ್ನೇನು ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗೇ ಬಿಡ್ತಾರೆ ಎಂಬ ಸುದ್ದಿ ದಟ್ಟವಾಗಿತ್ತು ಅವರೂ, ತಾವೇ ಮುಖ್ಯಮಂತ್ರಿ ಎಂದು ಖಚಿತ ಪಡಿಸಿಕೊಂಡ ಮೇಲೆ ಮನೆ ದೇವರಿಗೆ ಪೂಜೆ ಮಾಡಿಸಿಕೊಂಡು ಬರಲು ಮಲೆ ಮಹದೇಶ್ವರ ಬೆಟ್ಟಕ್ಕೆ ಹೋಗಿದ್ದರು. ದೇವರ ಆಶೀರ್ವಾದ ಪಡೆದು ಬರುವುದರೊಳಗೆ ಆಘಾತ ಕಾದಿತ್ತು. ದಿಲ್ಲಿ ಹೈಕಮಾಂಡ್ ಕಳುಹಿಸಿದ ಲಕೋಟೆಯಲ್ಲಿ ಕೃಷ್ಣರ ಬದಲಿಗೆ ವೀರಪ್ಪ ಮೊಯ್ಲಿಯವರ ಹೆಸರು ಇತ್ತು. ಕೃಷ್ಣರಿಗೆ ಉಪ ಮುಖ್ಯಮಂತ್ರಿ ಪಟ್ಟ!

ಸ್ಪೀಕರ್ ಆಗಿದ್ದ ಕೃಷ್ಣರಿಗೆ ಮುಖ್ಯಮಂತ್ರಿಯಾಗುವ ಎಲ್ಲ ಅರ್ಹತೆಗಳೂ ಕೊಂಚ ಹೆಚ್ಚೇ ಇದ್ದವು. ಉನ್ನತ ವಿದ್ಯೆ, ನಿಷ್ಕಳಂಕ ವ್ಯಕ್ತಿತ್ವ, ಕೇಂದ್ರ ಮತ್ತು ರಾಜ್ಯಗಳಲ್ಲಿ ನಾನಾ ಉನ್ನತ ಹುದ್ದೆಗಳನ್ನು ನಿರ್ವಹಿಸಿದ್ದ ಅನುಭವವಿತ್ತು. ಮುಖ್ಯವಾಗಿ ಅತ್ಯಂತ ಪ್ರಬಲ ಕೋಮಿನ ಹಿನ್ನೆಲೆ ಬೇರೆ. ಅವರಿಗಲ್ಲದೆ ಮುಖ್ಯಮಂತ್ರಿ ಹುದ್ದೆ ಮತ್ತಾರಿಗೆ ಕೊಟ್ಟಾರು? ಕುಸ್ತಿಗೆ ನಿಲ್ಲುವ ಮೊದಲೇ ಚಿತ್ ಆಗಿಬಿಟ್ಟಿದ್ದ ಸನ್ನಿವೇಶ. ಎಸ್.ಎಂ.ಕೃಷ್ಣ ಒಪ್ಪದೆ ಬಲವಾದ ಪ್ರತಿರೋಧ ಒಡ್ಡುತ್ತಾರೆಂದು ಎಲ್ಲರೂ ನಿರೀಕ್ಷಿಸಿದ್ದರು. ಬಂಡಾಯ ವಿರಲಿ ಅಸಮಾಧಾನದ ಚಿಕ್ಕ ಕೊಂಕನ್ನೂ ಕೃಷ್ಣ ಆಡಲಿಲ್ಲ. ಹಿಂದುಳಿದ ವರ್ಗದವರಿಗೆ ಮುಖ್ಯಮಂತ್ರಿ ಪಟ್ಟವೆಂದು ಹೈಕಮಾಂಡ್ ನಿರ್ಧರಿಸಿತ್ತು. ಮೌನವಾಗಿ ಉಪ ಮುಖ್ಯಮಂತ್ರಿ ಹುದ್ದೆ ಸ್ವೀಕರಿಸಿದರು.

ಆ ದಿನ ಸಂಜೆ ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ನೂತನ ಉಪ ಮುಖ್ಯಮಂತ್ರಿಗಳು (DCM) ಭೇಟಿ ನೀಡುತ್ತಾರೆಂಬ ಮೆಸೇಜ್ ಬಂದಿತು. ವಿದ್ಯಾರಣ್ಯಪುರಂ ಠಾಣೆಯ ಇನ್ಸ್‌ಪೆಕ್ಟರಾಗಿದ್ದ ನಾನು ಸಿಬ್ಬಂದಿಯೊಂದಿಗೆ ಹೋಗಿ ಬಂದೋಬಸ್ತ್ ಮಾಡುತ್ತ ನಿಂತೆ. ಆರೂವರೆ ಗಂಟೆಗೆ ಬರಬೇಕಿದ್ದ ಡಿಸಿಎಂ ಏಳೂ ಕಾಲು ಗಂಟೆಗೆ ಬಂದರು. ಅಷ್ಟರಲ್ಲಾಗಲೇ ಸ್ವಾಮೀಜಿಗಳು ಭಜನೆಗೆ ಕುಳಿತಿದ್ದರು. ಭಜನೆ ಮಧ್ಯೆ ಹೋಗುವುದಾದರೂ ಹೇಗೆ? ಹೊರ ಸ್ವಾಗತ ಕಛೇರಿಯಲ್ಲಿ ಡಿಸಿಎಂ ತಮ್ಮ ಪತ್ನಿಯೊಂದಿಗೆ ಕಾಯುತ್ತಾ ಕುಳಿತರು. ಪತ್ರಕರ್ತರ ದಂಡೇ ಅಲ್ಲಿ ನೆರೆಯಿತು.

"ಮುಖ್ಯಮಂತ್ರಿಯಾಗಲು ತಮಗಿಂತ ಅರ್ಹ ಅಭ್ಯರ್ಥಿ ಕಾಂಗ್ರೆಸ್ಸಿನಲ್ಲಿ ಮತ್ತೊಬ್ಬರಿಲ್ಲ. ಅಲ್ಲದೇ ತಾವೇ ಸೀನಿಯರ್. ಮೊದಲಿಂದಲೂ ತಾವೇ ಮುಖ್ಯಮಂತ್ರಿ ಎಂದು ಹೇಳಲಾಗಿತ್ತು. ಈಗ ನೋಡಿದರೆ ದಿಢೀರ್ ಬದಲಾವಣೆ ಏಕೆ ಸರ್? ನಿಮ್ಮನ್ನು ಪರಿಗಣಿಸದೇ ಇರಲು ಏನು ಕಾರಣ?" ಪತ್ರಕರ್ತರ ಕೆಣಕುವ ಪ್ರಶ್ನೆ.

ಪಂಚೆ ಶಲ್ಯದ ಪೂಜಾ ಉಡುಪಿನಲ್ಲಿದ್ದ ಹೊಸ ಡಿಸಿಎಂ ಏನು ಹೇಳುತ್ತಾರೆಂದು ನನಗೂ ಕುತೂಹಲ. ಮಾತಿಗಿಂತಲೂ ಅವರ ಮುಖವನ್ನೇ ಗಮನಿಸುತ್ತಾ ನಿಂತೆ. **"ಅದು ಹೈಕಮಾಂಡ್ ನಿರ್ಧಾರ. ಈ ಸನ್ನಿವೇಶದಲ್ಲಿ ಯಾರನ್ನು ಆಯ್ಕೆ ಮಾಡಬೇಕೋ ಅವರನ್ನು ಮಾಡಿದ್ದಾರೆ. ರಾಜಕಾರಣದಲ್ಲಿ ಸಹನೆ ಮತ್ತು ಸಂಯಮ ಬಹಳ ಮುಖ್ಯ. ಗುಣ ಮತ್ತು ಅರ್ಹತೆ ಇದ್ದರೆ ಯಾವತ್ತಿದ್ದರೂ ಯೋಗ್ಯ ಸ್ಥಾನ ಸಿಕ್ಕೇ ಸಿಗುತ್ತೆ. ನನಗೆ ಕಾಯುವ ತಾಳ್ಮೆ ಇದೆ"** ಎಂದರು ಎಸ್.ಎಂ.ಕೃಷ್ಣ.

ಸ್ವಾಮೀಜಿಯವರ ಭಜನೆ ಮುಗಿಯಲು ಇನ್ನೂ ಕಾಲುಗಂಟೆ ಇತ್ತು. "ಅಲ್ಲಿ ಹೋಗಿ ನಾವು ಕೂರಬಹುದಾ... ತಪ್ಪಾಗುತ್ತಾ," ಮಠದವರನ್ನು ಕೇಳಿದರು.

ಅವರು "ಇದು ಸಾಮೂಹಿಕ ಭಜನೆ. ದಿನಾ ಏಳು ಗಂಟೆಯಿಂದ ರಾತ್ರಿ ಎಂಟು ಗಂಟೆಯವರೆಗೆ ಸ್ವಾಮೀಜಿಯವರೇ ಹಾಡುತ್ತಾರೆ. ತಾವೂ ಹೋಗಿ ಕುಳಿತುಕೊಳ್ಳಬಹುದು" ಎಂದರು.

ಪತ್ನಿ ಶ್ರೀಮತಿ ಪ್ರೇಮಾ ಅವರೊಂದಿಗೆ ಜನಸಾಮಾನ್ಯರ ನಡುವೆ ಚಕ್ಕಮಕ್ಕಳ ಹಾಕಿಕೊಂಡು ಡಿಸಿಎಂ ಕುಳಿತರು. ನಂತರ ಸ್ವಾಮೀಜಿಯವರಿಂದ ಅಲ್ಲೇ ಪ್ರಸಾದ ಸ್ವೀಕರಿಸಿ ಹೊರ ನಡೆದರು.

ಅವರ ತೂಕದ ಮಾತು, ಸರಳ ನಡವಳಿಕೆ ಮತ್ತು ಸಜ್ಜನಿಕೆ ಈಗಲೂ ಮರೆಯದ ನೆನಪು.

* * *

2001

ಪಿರಿಯಾಪಟ್ಟಣದಲ್ಲಿ ಬೃಹತ್ ಸಾರ್ವಜನಿಕ ಸಭೆ. ಕಿಕ್ಕಿರಿದ ಸಭೆಯನ್ನುದ್ದೇಶಿಸಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಮಾತಾಡಿದರು. "ನನ್ನನ್ನು ಅನೇಕರು ಸಿಂಗಪೂರ್ ಮಂತ್ರಿ, ಹೈಟೆಕ್ ಮುಖ್ಯಮಂತ್ರಿ. ರೈತರನ್ನು, ಬಡವರನ್ನು ನೋಡೋದಿಲ್ಲ ಎಂದೆಲ್ಲಾ ಮಾತಾಡಿಕೊಂಡು ಸಂತೋಷಪಡ್ತಾರೆ. ಹಳ್ಳಿ ಮತ್ತು ನಗರಗಳಿಗೆ ಸಮಾನ ಅನುಕೂಲತೆ ಮಾಡಿಕೊಡುವುದೇ ನಮ್ಮ ಸರ್ಕಾರದ ಆದ್ಯ ಕರ್ತವ್ಯ. ಹಳ್ಳಿಗಳ ಅಭಿವೃದ್ಧಿಗೇ ನಮ್ಮ ಸರ್ಕಾರದ ಆದ್ಯತೆ ಇರೋದು. ಯಾವ ಸರ್ಕಾರ ಕೃಷಿ ವಲಯವನ್ನು ಮರೆಯುತ್ತೋ ಆವತ್ತೇ ದೇಶದ ಅಧಃಪತನವಾದಂತೆ. ನಿಮ್ಮ ಪಿರಿಯಾಪಟ್ಟಣ ವಾಣಿಜ್ಯ ಬೆಳೆ ತಂಬಾಕಿಗೆ ಹೆಸರುವಾಸಿ. ಇಲ್ಲಿಯ ತಂಬಾಕನ್ನು 555, Rothman ಮುಂತಾದ ಸಿಗರೇಟು ಕಂಪನಿಗಳು ಬಳಸುತ್ತಿವೆ. ತಂಬಾಕಿಗಿಂತ ಹೆಚ್ಚು ಲಾಭ ತರುವ ಶ್ರೀಗಂಧ ಮತ್ತು ತೇಗದ ಮರಗಳನ್ನು ರೈತರೇ ಬೆಳೆಯುವ ಯೋಜನೆ ಜಾರಿಗೆ ತಂದಿದ್ದೇವೆ. ಮಹಿಳೆಯರು ಸ್ವಾವಲಂಬಿಯಾಗುವಂತೆ ಸ್ತ್ರೀಶಕ್ತಿ ಯೋಜನೆ, ಶಾಲಾ ಮಕ್ಕಳಿಗೆ ಬಿಸಿಯೂಟದ ಯೋಜನೆ ತಂದಿದ್ದೇವೆ..." ವಿವರಿಸಿದರು.

ಬೆಂಗಳೂರನ್ನು ಸಿಂಗಪೂರ್ ಮಾಡುವ ಅವರ ಕನಸು ಒಂದು ರೀತಿಯಲ್ಲಿ ನನಸಾಗಿದೆ. ದೇವೇ ಗೌಡರು, ಜೆ.ಎಚ್.ಪಟೇಲರ ಕಾಲದಲ್ಲಿ ಆರಂಭ ಗೊಂಡಿದ್ದ ಐಟಿ ಬಿಟಿ, ಮೆಟ್ರೋಗಳನ್ನು ಮುಂದಿನ ಲೆವೆಲ್‌ಗೆ ಕೊಂಡೊಯ್ದು ಐಟಿ ಹಬ್‌ನ್ನಾಗಿ ಬೆಳೆಸಿದವರು ಎಸ್.ಎಂ.ಕೃಷ್ಣ ಎಂಬುದು ನಿರ್ವಿವಾದ. ಕರ್ನಾಟಕವನ್ನು ಕಟ್ಟಿದ ಆಧುನಿಕ ಶಿಲ್ಪಿ.

* * *

ಅವರ ಅಚ್ಚುಕಟ್ಟಾದ ಧಿರಿಸು, ಸ್ವಚ್ಛವಾದ ಮಾತುಗಳೂ ಕೂಡ ಅನೇಕ ಕೊಳಕು ಮಂಡಲಗಳ ಟೀಕೆಗೆ ಗ್ರಾಸವಾಗಿದ್ದವು. 'ಬಡವರನ್ನು ನೋಡೋದಿಲ್ಲ. ಹತ್ತಿರ ಸೇರಿಸೋದಿಲ್ಲ' ಎಂಬುದು ಅವರ ಕೊಂಕಾಗಿತ್ತು. ಕೃಷ್ಣರ ಉಡುಪು ಮಾತ್ರ ಟಿಪ್ ಟಾಪ್ ಆದರೆ ನಡವಳಿಕೆ, ಸಾಮಾನ್ಯರೊಡನೆ ಬೆರೆಯುವಿಕೆ ಅತ್ಯಂತ ಸಹಜವಾಗಿತ್ತು. ತಮಿಳು ಭಾಷೆಯ ಕಾರ್ಪೊರೇಟರೊಬ್ಬರ ಕುರಿತಂತೆ ಸಂಸ್ಮರಣ ಕಾರ್ಯಕ್ರಮವಿತ್ತು. ಬಹಳ ವರ್ಷದ ಹಿಂದೆಯೇ ತೀರಿಕೊಂಡಿದ್ದ ಆ ವ್ಯಕ್ತಿ ಜನಮಾನಸದಿಂದ ಎಂದೋ ಮಾಸಿ ಹೋಗಿದ್ದರು. ಸಭೆಗೆ ಸಿದ್ಧತೆ ನಡೆಯುತ್ತಿದೆ. ಅಲ್ಲಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಪ್ರತ್ಯಕ್ಷ! ಅವರಿಗೆ ಯಾರೂ ಆಹ್ವಾನ ಪತ್ರವನ್ನೂ ಕೊಟ್ಟಿರಲಿಲ್ಲ. ಹಳೇ ತಲೆಮಾರಿನ ಯಾರೋ ಕಾರ್ಪೊರೇಟರ್ ಸ್ಮರಣ ಸಭೆಗೆ ಅನಿರೀಕ್ಷಿತ ಪ್ರೇಕ್ಷಕನಾಗಿ ಬಂದಿದ್ದರು. ಸಂಘಟಕರಿಗೋ ಆಶ್ಚರ್ಯಾಘಾತ. ಆಹ್ವಾನವೇ ಇಲ್ಲದೆ ರಾಜ್ಯದ ಮುಖ್ಯಮಂತ್ರಿ ಆಗಮಿಸಿದ್ದಾರೆ. ವೇದಿಕೆಗೆ ಬರಬೇಕೆಂದು ವಿನಂತಿಸಿದರು.

"ಪತ್ರಿಕೆಗಳಲ್ಲಿ ಈ ಕಾರ್ಯಕ್ರಮದ ಬಗ್ಗೆ ಓದಿದೆ. ಶ್ರೀ...ರವರೆಂದರೆ ನನಗೆ ಚಿಕ್ಕಂದಿನಿಂದಲೂ ಅಭಿಮಾನ, ಗೌರವ. ಸಭಾಕಾರ್ಯ ಮುಂದುವರೆಸಿ. ಭಾಷಣ ಕೇಳಿಕೊಂಡು ಹೋಗ್ತೇನೆ" ಎಂದು ಪ್ರೇಕ್ಷಕರಾಗಿ ಕುಳಿತರು. ಅವರ ಸುತ್ತ ಯಾವ ವಂದಿಮಾಗಧರೂ ಇರಲಿಲ್ಲ.

ತಮ್ಮ ಪ್ರೀತಿಯ ವಿದ್ಯಾರ್ಥಿ ಭವನ ಮುಂತಾದ ಹೊಟೆಲ್‌ಗಳಿಗೆ ಕುಟುಂಬದವರೊಂದಿಗೆ ಹೋಗುವುದು ಅವರ ಅಭ್ಯಾಸ. ಆಡಂಬರ, ಅಟ್ಟಹಾಸ ತೋರ್ಪಡಿಸದೆ ಸಾಮಾನ್ಯರಲ್ಲಿ ಸಾಮಾನ್ಯನಂತಿರುವುದು ಅವರ ಸಹಜ ಗುಣ.

* * *

ಬಿಜೆಪಿ ಅಧ್ಯಕ್ಷರಾಗಿದ್ದ ಸದಾನಂದಗೌಡರಿಗೆ ಬೆಳಿಗ್ಗೆಯೇ ಫೋನು. ಆ ಕಡೆಯಿಂದ ಕೃಷ್ಣ ಮಾತಾಡುತ್ತಿದ್ದರು. "ನಿನ್ನೆಯ ಕೋಲಾರದ ಸಭೆಯಲ್ಲಿ ನಿಮ್ಮ ಬಗ್ಗೆ ನಾನು ಕೇವಲವಾಗಿ ಮಾತಾಡಿದೆನೆಂದು ಪತ್ರಿಕೆಗಳಲ್ಲಿ ಬಂದಿದೆ. ನಾನು ಮಾತಾಡಿದ್ದು ಹಾಗಲ್ಲ. ದಯವಿಟ್ಟು ಕ್ಷಮಿಸಿ, ತಮಗೆ ಒಂದು ಪತ್ರವನ್ನೂ ಈ ಕುರಿತಂತೆ ಕಳಿಸಿದ್ದೇನೆ"

ಗೌಡರು ಕಕ್ಕಾಬಿಕ್ಕಿ ಯಾರ ಬಗ್ಗೆ ಕೃಷ್ಣ ಕ್ಷಮೆ ಕೇಳುತ್ತಿದ್ದಾರೆಂದು ಗೊತ್ತಾಗಲೊಲ್ಲದು.

"ನಾನೂ ಪತ್ರಿಕೆಗಳನ್ನು ನೋಡಿದೆ. ಆ ರೀತಿಯಲ್ಲೇನೂ ತಾವು ಮಾತಾಡಿಲ್ಲವಲ್ಲಾ ಸಾರ್"

"ಹಲ್ಲು ಕಿಸಿದುಕೊಂಡು ಮಾತಾಡಿದರೆ ಆಗೊಲ್ಲ ಎಂದು ನಾನು ಟೀಕಿಸಿದೆ ಎಂದೆಲ್ಲಾ ಬಂದಿದೆ. ಗಂಭೀರವಾದ ವಿಷಯಕ್ಕೂ ಹಲ್ಲು ತೋರಿಸಿದರೆ ಸರಿಯಲ್ಲ ಅಂತ ಹೇಳಿದ್ದೆ".

"ಛೇ ಛೇ ನಾನದನ್ನು ಟೀಕೆ ಎಂದು ಭಾವಿಸುವುದೇ ಇಲ್ಲ. ಹಲ್ಲು ಕಾಣುವಂತೆ ಮಾತಾಡುವುದು ನನ್ನ ಅಭ್ಯಾಸವಲ್ಲವೇ?. ಅದು ಲೋಕಕ್ಕೇ ಗೊತ್ತು. ಖಂಡಿತ ಬೇಸರ ಮಾಡಿಕೊಂಡಿಲ್ಲ. ತಮ್ಮಂಥ ಹಿರಿಯರು ಕ್ಷಮೆ ಕೇಳಬಾರದು" ಎಂದರು ಸದಾನಂದಗೌಡರು.

* * *

2004

ಬೆಂಗಳೂರಿನ ನ್ಯಾಷನಲ್ ಕಾಲೇಜು ಆವರಣದಲ್ಲಿ ಹಾಸ್ಯೋತ್ಸವ ಕಾರ್ಯಕ್ರಮ. ಸಾಹಿತಿ ಅ.ರಾ.ಮಿತ್ರರದ್ದೇ ಸಾರಥ್ಯ. ಕೃಷ್ಣೇಗೌಡರು, ಪ್ರಾಣೇಶ್ , ರಿಚರ್ಡ್ ಲೂಯಿಸ್, ಮೈಸೂರು ಆನಂದ್ ಮುಂತಾದವರ ಭರ್ಜರಿ ಹಾಸ್ಯದ ಬ್ಯಾಟಿಂಗ್. ನಗೆ ಕಾರ್ಯಕ್ರಮದಲ್ಲಿ ಇದ್ದಕ್ಕಿದ್ದಂತೆ ಕಲರವ. ನೋಡಿದರೆ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಸಪತ್ನೀಕರಾಗಿ ಆಗಮಿಸಿದ್ದಾರೆ. ಸಭಿಕರಿಂದ ತುಂಬಿ ಹೋಗಿದ್ದ ಸಭೆಯಲ್ಲಿ ಮುಖ್ಯಮಂತ್ರಿಗಳಿಗಾಗಿ ಸೀಟು ಹುಡುಕುವ ಗಲಿಬಿಲಿ ಶುರುವಾಯಿತು. ಕೂತಿದ್ದ ಯಾರಿಗೂ ಎದ್ದು ಸೀಟು ಬಿಟ್ಟುಕೊಡುವ ಮನಸ್ಸಿಲ್ಲ.

ಉಸ್ತುವಾರಿಯಲ್ಲಿದ್ದ ನಗೆಸಾಹಿತಿ ಅಣಕು ರಾಮನಾಥ್ ಪೇಚಾಡುತ್ತಿದ್ದರು. ನಮಗೆ ಸೀಟು ಮಾಡಿ ಕೊಟ್ಟಿದ್ದವರೂ ಅವರೇ. ಎಲ್ಲಿಂದಲೋ ಎರಡು ಪ್ಲಾಸ್ಟಿಕ್ ಚೇರುಗಳನ್ನು ತರಿಸಿ ಷಾಮಿಯಾನದ ತುದಿಗೆ ಹಾಕಿಸಿದರು.

ಆವತ್ತೋ ರಣರಣ ಬಿಸಿಲು. ಕೃಷ್ಣ ದಂಪತಿಗಳು ಕುಳಿತು ಹಾಸ್ಯ ರಸಧಾರೆಯಲ್ಲಿ ಮಿಂದು ಆನಂದಿಸಿದರು. ನಾನು ಹಾಸ್ಯಲೋಕದ ಮೃತ್ಯುಂಜಯ ಅವರೊಂದಿಗೆ ಅಲ್ಲೇ ಹತ್ತಾರು ಸೀಟುಗಳಾಚೆ ಕುಳಿತಿದ್ದೆ.

ಮುಖ್ಯಮಂತ್ರಿಗಳು ತಮ್ಮ ಸಿಬ್ಬಂದಿ ವಂದಿಮಾಗಧರು ಹತ್ತಿರ ಬಾರದಂತೆ ನೋಡಿಕೊಂಡಿದ್ದರು. ಕೊನೆಕೊನೆಗೆ ಬಿಸಿಲ ಝಳ ತಡೆಯದೆ ನಿಶ್ಶಬ್ದವಾಗಿ ನಿರ್ಗಮಿಸಿದರು. ಅವರ ಸರಳತೆ ಘನತೆಯ ನಡವಳಿಕೆಯನ್ನು ನಾವು ಗೆಳೆಯರು ಮೆಚ್ಚುತ್ತಾ ಕುಳಿತಿದ್ದೆವು. ನಮ್ಮ ಸಂತೋಷ ಬಹುಕಾಲ ಉಳಿಯಲಿಲ್ಲ.

ಕಾರ್ಯಕ್ರಮ ನಿರ್ವಹಣೆ ಮಾಡುತ್ತಾ ವಿರಾಜಮಾನರಾಗಿದ್ದ ಅರಾ.ಮಿತ್ರರ ಸಲ್ಲದ ಮಾತುಗಳನ್ನು ಕೇಳಿ ಅನೇಕರು ಅಸಹ್ಯಪಟ್ಟುಕೊಂಡರು. ಆ ಮಾತುಗಳ ಆವಶ್ಯಕತೆಯೇ ಆಗ ಇರಲಿಲ್ಲ. ತಮ್ಮದೇನೋ ಒಳವಿಕಾರವನ್ನು ಹೊರ ಹಾಕಿದಂತಿತ್ತು

"ಇಂತಹ ಸಭೆಗಳಿಗೆ ರಾಜಕಾರಣಿಗಳು ಕರೆಯದಿದ್ದರೂ ಬಂದು ಬಿಡುತ್ತಾರೆ. ಈಗ ಆ ದುರ್ಗಂಧ ಹೋಗಿದ್ದೇ ಒಳ್ಳೆಯದಾಯಿತು ಎಂಬಂತೆ ಚಟಾಕಿ ಹಾರಿಸಿದರು. ಅದು ಯಾವ ರೀತಿಯಲ್ಲೂ ಹಾಸ್ಯವೆನಿಸದ ಮಾತು. ಅಭಿರುಚಿಹೀನ ಅಪಹಾಸ್ಯ ಅಸಲಿಗೆ ಆ ಮಾತುಗಳೇ ಬೇಕಿರಲಿಲ್ಲ".

ಸಭೆಗೆ ಗೊಂದಲವಾಗದಂತೆ ಎಸ್‌ಎಂಕೆ ಬಂದಿದ್ದರು; ತಮ್ಮಿಂದ ಗದ್ದಲವಾಗದಂತೆ ನಿರ್ಗಮಿಸಿದ್ದರು. ಅವರ ಸ್ಥಾನಮಾನದ ಯಾವ ಡೋಲೂ ಕೇಳಿಸದಂತೆ ನಡೆದುಕೊಂಡಿದ್ದರು. ಮೆಚ್ಚಬೇಕಾದ ನಡವಳಿಕೆ ಇದಲ್ಲವೇ?

ಪುಢಾರಿಗಳು, ಪೊಲೀಸರು ಎಂದರೆ ಸಾಕು. ಕೆಲವರಿಗೆ ವಿನಾಕಾರಣ ಪಿತ್ತ ಕೆರಳಿ ಏನೇನೋ ಮಾತಾಡಿ ಬಿಡುತ್ತಾರೆ. ಇದೂ ಅದೇ ಬಗೆಯದು. ಆದರೆ ಕೃಷ್ಣ ದಂಪತಿಗಳು ಈ ದುಷ್ಟ ಟೀಕೆಗೆ ಯಾವುದೇ ರೀತಿಯಲ್ಲೂ ಅರ್ಹರಾಗಿರಲಿಲ್ಲ.

ಮೈಸೂರಲ್ಲಿ ಮಂಡಲದ ಹಾವುಗಳ ವ್ಯಾಪಕ ಹಾವಳಿ

ಹೆಬ್ಬಾವು ಎಂದು ತಿಳಿದು, ಹಿಡಿಯುವ ಸಾಹಸ ಮಾಡಬೇಡಿ: ಉರಗ ತಜ್ಞ ಸ್ನೇಕ್ ಶ್ಯಾಮ್ ಎಚ್ಚರಿಕೆ

ಇದು ಹಾವುಗಳ ಮಿಲನಮಾಸ; ಮಂಡಲದ ಹಾವುಗಳು 60 ರಿಂದ 120 ಮರಿಗೆ ಜನ್ಮ ನೀಡುತ್ತವೆ; ಈ ಹಾವು ಕಚ್ಚಿದರೆ ಹಿಮೋಟಾಕ್ಸಿನ್;ತಕ್ಷಣ ಚಿಕಿತ್ಸೆ ಪಡೆದರೆ ಗುಣಮುಖ

ಮೈಸೂರು, ಡಿ.13(ಬಿಎಲ್‌ಯು)– ಹಾವುಗಳ ಮಿಲನಮಾಸವಾಗಿರುವ ಹಿನ್ನೆಲೆ ಮೈಸೂರಿನಲ್ಲಿ ಜನರು ಜಾಗರೂಕರಾಗಿರಬೇಕು ಎಂದು ಉರಗತಜ್ಞ ಸ್ನೇಕ್ ಶ್ಯಾಮ್ ಎಚ್ಚರಿಸಿದ್ದಾರೆ.

ಮಂಡಲದ ಹಾವನ್ನು ಕೆಲವರು ಹೆಬ್ಬಾವು ಎಂದು ತಪ್ಪಾಗಿ ಅರ್ಥೈಸಿಕೊಂಡು ಅದನ್ನು ಹಿಡಿಯಲು ಹೋಗಿ ಪ್ರಾಣಕ್ಕೆ ಕುತ್ತು ತಂದುಕೊಂಡಿರುವ ಬಹಳಷ್ಟು ಉದಾಹರಣೆಗಳಿವೆ. ಮೈಸೂರು ನಗರದ ಸುತ್ತಮುತ್ತ ಎರಡು ತಿಂಗಳಲ್ಲಿ ಬಹಳಷ್ಟು ಜನರು ಮಂಡಲದ ಹಾವಿನ ಕಡಿತಕ್ಕೆ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಳೆದ ಎರಡು ತಿಂಗಳ ಅವಧಿಯಲ್ಲಿ 30ಕ್ಕೂ ಹೆಚ್ಚು ಮಂಡಲದ ಹಾವುಗಳನ್ನು ರಕ್ಷಣೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಹಾವುಗಳ ಬಗ್ಗೆ ಎಚ್ಚರಿಕೆಯಿಂದ ಇರುವಂತೆ ಸಲಹೆ ನೀಡಿದ್ದಾರೆ.

ಕಾರು ಹತ್ತುವಾಗ, ಇಳಿಯುವಾಗ, ಚಪ್ಪಲಿ ಅಥವಾ ಶೂ ಹಾಕಿಕೊಳ್ಳುವಾಗ, ಸಂಜೆ ವೇಳೆ ಮಕ್ಕಳು ಆಟವಾಡುವಾಗ ಅತ್ಯಂತ ಜಾಗರೂಕತೆಯಿಂದ ಇರಬೇಕು ಎಂದು ಸ್ನೇಕ್ ಶ್ಯಾಮ್ ಎಚ್ಚರಿಸಿದ್ದಾರೆ.

ಹಾವುಗಳ ಕಡಿತದಿಂದ ದೇಹಕ್ಕೆ ಎರಡು ರೀತಿಯ ಪರಿಣಾಮವಾಗುತ್ತದೆ. ನಾಗರಹಾವು ಸೇರಿದಂತೆ ಇತರೆ ಹಾವು ಕಚ್ಚಿದಾಗ ನ್ಯೂರೋಟಾಕ್ಸಿನ್ ಪರಿಣಾಮ ಎದುರಿಸಬೇಕಾಗುತ್ತದೆ. ಹಾವಿನ ವಿಷ ನೇರವಾಗಿ ನರಗಳ ಮೂಲಕ ದೇಹವನ್ನು ಆವರಿಸುತ್ತದೆ. ಮಂಡಲದ ಹಾವು ಕಚ್ಚಿದಾಗ ಹಿಮೋ ಟಾಕ್ಸಿನ್‌ಗೆ ಒಳಗಾಗಬೇಕಾಗುತ್ತದೆ. ಅಂದರೆ ಮಂಡಲದ ಹಾವಿನ ವಿಷ ರಕ್ತದ ಮೂಲಕ ತ್ವರಿತವಾಗಿ ದೇಹವನ್ನು ವ್ಯಾಪಿಸುತ್ತದೆ. ಇದರಿಂದ ಕಿಡ್ನಿ ವೈಫಲ್ಯ ಸೇರಿದಂತೆ ಹಲವು ರೀತಿಯ ದೈಹಿಕ ಹಾನಿಯಾಗುತ್ತದೆ. ಆದರೆ, ತಕ್ಷಣವೇ ಚಿಕಿತ್ಸೆ ಪಡೆದರೆ ಗುಣಮುಖರಾಗಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ. ಮಂಡಲದ ಹಾವು ಒಂದು ಬಾರಿ ಮರಿ ಹಾಕಿದರೆ ಅದರ ಸಂಖ್ಯೆ 60 ರಿಂದ 120ಕ್ಕೂ ಹೆಚ್ಚಿರುತ್ತದೆ. ಆದ ಕಾರಣ ಹಾವುಗಳ ಮಿಲನಮಾಸವಾದ ಈ ಸಂದರ್ಭದಲ್ಲಿ ಮಂಡಲದ ಹಾವುಗಳ ಸಂಖ್ಯೆ ಹೆಚ್ಚಾಗಿದೆ ಎಂದು ಹೇಳಿದ್ದಾರೆ. – **ಸ್ನೇಕ್ ಶ್ಯಾಮ್**– 9980557797



ಸ್ನೇಕ್ ಶ್ಯಾಮ್ ಮಂಡಲದ ಹಾವು ಹಿಡಿದಿರುವುದು.

ಹಾವು ಕಡಿತಕ್ಕೊಳಗಾದವರಿಗೆ ಪ್ರತ್ಯೇಕ ವಾರ್ಡ್ ವ್ಯವಸ್ಥೆ

ಇತ್ತೀಚಿಗೆ ಹಾವು ಕಡಿತಕ್ಕೊಳಗಾದವರ ಸಂಖ್ಯೆ ಹೆಚ್ಚಾಗುತ್ತಿರುವ ಕಾರಣ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಐದು ಹಾಸಿಗೆಗಳ ಪ್ರತ್ಯೇಕ ವಾರ್ಡ್ ತೆರೆಯಬೇಕು ಎಂದು ಉರಗ ತಜ್ಞ ಸ್ನೇಕ್ ಶ್ಯಾಮ್ ಸರ್ಕಾರವನ್ನು ಆಗ್ರಹಿಸಿದ್ದಾರೆ. ಭಾರತದಲ್ಲಿ ಒಂದು ವರ್ಷಕ್ಕೆ ಒಂದೂವರೆ ಲಕ್ಷ ಜನರು ಹಾವು ಕಡಿತಕ್ಕೊಳಗಾಗುತ್ತಾರೆ. ಇದರಲ್ಲಿ 60 ಸಾವಿರ ಜನರು ಸಾವನ್ನಪ್ಪುತ್ತಾರೆ. ಮೈಸೂರಿನಲ್ಲಿ ಕೂಡ ಹಾವು ಕಡಿತಕ್ಕೊಳಗಾದವರ ಸಂಖ್ಯೆ ಹೆಚ್ಚಾಗುತ್ತಿದೆ. ಆದ ಕಾರಣ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಪ್ರತ್ಯೇಕ ವಾರ್ಡ್ ತೆರೆಯಬೇಕು ಎಂದು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಲಿಖಿತ ಮನವಿ ಸಲ್ಲಿಸಿದ್ದೆ. ಆದರೆ ಈ ಬಗ್ಗೆ ಅವರಿಂದ ಯಾವುದೇ ಕ್ರಮವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ರೈತರು ಹಾಗೂ ಕೂಲಿ ಕಾರ್ಮಿಕರು ಹೆಚ್ಚಾಗಿ ಹಾವಿನ ಕಡಿತಕ್ಕೊಳಗಾಗುತ್ತಾರೆ. ಈ ಹಿನ್ನೆಲೆಯಲ್ಲಿ ಎಚ್ಚರಿಕೆಯಿಂದ ಇರುವುದು ಅತ್ಯವಶ್ಯ. ರೈತರು ಹೊಲ, ಗದ್ದೆಗಳಿಗೆ ಹೋಗುವಾಗ ಗಮ್ ಬೂಟ್‌ಗಳನ್ನು ಬಳಸಬೇಕು. ಚಪ್ಪಲಿ ಹಾಗೂ ಶೂಗಳನ್ನು ಮನೆಯ ಹೊರಗೆ ಇಡುವ ಬದಲು ಒಳಗೆ ಬಿಡುವುದು ಉತ್ತಮ ಎಂದು ಸ್ನೇಕ್ ಶ್ಯಾಮ್ ಸಲಹೆ ನೀಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ರಾಜ್ಯಸಭೆ ಸಭಾಪತಿ ಧಂಖರ್ ವಿರುದ್ಧ ಅವಿಶ್ವಾಸ ಜಟಾಪಟಿ; ಕಲಾಪ ಡಿ.16ಕ್ಕೆ ಮುಂದೂಡಿಕೆ

ನವದೆಹಲಿ: ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್ ವಿರುದ್ಧದ ಅವಿಶ್ವಾಸ ನಿರ್ಣಯದ ಕುರಿತು ಆಡಳಿತ ಮತ್ತು ಪ್ರತಿಪಕ್ಷಗಳ ಸದಸ್ಯರ ನಡುವೆ ತೀವ್ರ ವಾಗ್ವಾದದ ನಂತರ ರಾಜ್ಯಸಭೆ ಕಲಾಪವನ್ನು ಡಿಸೆಂಬರ್ 16ಕ್ಕೆ ಮುಂದೂಡಲಾಯಿತು.

ಇಂದು ಬೆಳಗ್ಗೆ ಸದನ ಕಲಾಪಕ್ಕೆ ಸೇರುತ್ತಿದ್ದಂತೆ ಪ್ರತಿಪಕ್ಷ ಸದಸ್ಯರು ಪ್ರಸ್ತಾವನೆಯ ಮೇಲೆ ಚರ್ಚೆಗೆ ಒತ್ತಾಯಿಸುತ್ತಿದ್ದಂತೆ ಕೋಲಾಹಲ ಉಂಟಾಯಿತು, ಆಡಳಿತ ಪಕ್ಷ ಸದಸ್ಯರು ಆಕ್ಷೇಪ ಎತ್ತಿದರು. ಈ ವೇಳೆ ತೀವ್ರ ಗದ್ದಲ, ಕೋಲಾಹಲ ಉಂಟಾಗಿ ಕಲಾಪ ಮುಂದೂಡಿಕೆಗೆ ಕಾರಣವಾಯಿತು. 'ಅತ್ಯಂತ ಪಕ್ಷಪಾತಿ' ಎಂದು ಆರೋಪಿಸಿ ರಾಜ್ಯಸಭಾಧ್ಯಕ್ಷ ಜಗದೀಪ್ ಧಂಖರ್ ಅವರನ್ನು ಪದಚ್ಯುತಗೊಳಿಸುವಂತೆ ಕೋರಿ ಅವಿಶ್ವಾಸ ನಿರ್ಣಯದ ನೋಟಿಸ್‌ನ್ನು ಕಾಂಗ್ರೆಸ್ ನೇತೃತ್ವದಲ್ಲಿ ವಿರೋಧ ಪಕ್ಷಗಳು ಮಂಡಿಸಿದವು. ಗದ್ದಲದ ನಡುವೆಯೇ ಕಾಂಗ್ರೆಸ್ ಅಧ್ಯಕ್ಷ ಹಾಗೂ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾತನಾಡಲು ಧನಕರ್ ಅವಕಾಶ ನೀಡಿದರು. ಆಡಳಿತ ಪಕ್ಷದ ಸದಸ್ಯರಿಗೆ ಮಾತನಾಡಲು ಹೆಚ್ಚಿನ ಸಮಯಾವಕಾಶ ನೀಡುವ ಮೂಲಕ ಸಭಾಪತಿಗಳು ಒಲವು ತೋರುತ್ತಿದ್ದಾರೆ, ಈ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ಅಗೌರವ ತೋರಿಸುತ್ತಿದ್ದಾರೆ ಎಂದು ಖರ್ಗೆ ಆರೋಪಿಸಿದರು.

ಒಂದನೇ ಪುಟದಿಂದ

ದರ್ಶನ್ ಗ್ಯಾಂಗ್‌ಗೆ ಜಾಮೀನು

ನ್ಯಾಯಾಲಯದ ಷರತ್ತುಗಳನ್ನು ಪೂರೈಸಬೇಕು ಎಂದಿದೆ. ದರ್ಶನ್ ಪರ ವಾದ ಮಂಡಿಸಿದ ಹಿರಿಯ ನ್ಯಾಯ ವಾದಿ ಸಿ.ವಿ.ನಾಗೇಶ್, ಈ ಕೊಲೆಯಲ್ಲಿ ನಮ್ಮ ಕಕ್ಷಿದಾರ ದರ್ಶನ್ ಪಾತ್ರ ಇಲ್ಲ, ಪೊಲೀಸರು ಕೆಲವು ಉತ್ಪ್ರೇಕ್ಷಿತ ಆರೋಪ ಗಳನ್ನು ಮಾಡಿದ್ದಾರೆ ಎಂದು ವಾದ ಮಂಡಿಸಿ, ಜಾಮೀನು ನೀಡುವಂತೆ ಪೀಠಕ್ಕೆ ಮನವಿ ಮಾಡಿದ್ದರು. ಪವಿತ್ರ ಗೌಡ ಪರ ವಾದ ಮಂಡಿಸಿದ್ದ ಸಬಾಸ್ಟಿಯನ್ ಹಾಗೂ ಶಿಲ್ಪ, ಆಕೆ ಒಬ್ಬ ಮಹಿಳೆ ಎಂಬುದರ ಜೊತೆಗೆ ಪ್ರಕರಣದಲ್ಲಿ ಅವರ ಪಾತ್ರ ಇಲ್ಲ, ಅಪಹರಣದಲ್ಲಾಗಲಿ, ಕೊಲೆಗಾಗಲೀ ಅವರ ಕುಮ್ಮಕ್ಕು ಇರಲಿಲ್ಲ ಎಂದು ವಾದಿಸಿದ್ದರು. ಎಲ್ಲಾ ಆರೋಪಿಗಳನ್ನು ನಗರದ ಪರಪ್ಪನ ಅಗ್ರಹಾರದಲ್ಲಿ ಇಡಲಾಗಿತ್ತು. ದರ್ಶನ್‌ಗೆ ಸೆರೆಮನೆಯಲ್ಲಿ ಮೋಜು, ಮಸ್ತಿ ಮಾಡಲು ಅವಕಾಶ ನೀಡಲಾಗಿದೆ ಎಂಬ ಆರೋಪದ ಮೇಲೆ ಕೆಲವು ಆರೋಪಿಗಳನ್ನು ವಿವಿಧ ಕಾರಾಗೃಹಗಳಿಗೆ ಸ್ಥಳಾಂತರಿಸಲಾಗಿತ್ತು. ಹಾಗೆ ದರ್ಶನ್‌ನನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರಿ ಸಲಾಗಿತ್ತು. ದರ್ಶನ್ ಬಳ್ಳಾರಿ ಜೈಲಿ ನಲ್ಲಿರುವಾಗಲೇ ಆರೋಗ್ಯ ಹದಗೆಟ್ಟು ಬೆನ್ನು ನೋವಿಗೆ ಶಸ್ತ್ರ ಚಿಕಿತ್ಸೆ ಪಡೆಯಲು ಮಧ್ಯಂತರ ಜಾಮೀನು ಪಡೆದು ನಗರದ ಬಿಜಿಎಸ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅವರಿಗೆ ಇದುವರೆಗೂ ಶಸ್ತ್ರಚಿಕಿತ್ಸೆ ನಡೆದಿಲ್ಲ, ಹೈಕೋರ್ಟ್ ಜಾಮೀನು ನೀಡಿದರೂ ಅವರು ಸದ್ಯಕ್ಕೆ ಹೊರಬರುವ ಸಾಧ್ಯತೆ ಇಲ್ಲ. ಸರ್ಕಾರ ಸುಪ್ರೀಂಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸುತ್ತಿರುವುದರಿಂದ ಅವರು ಆಸ್ಪತ್ರೆಯಲ್ಲೇ ಮುಂದುವರೆ ಯಲಿದ್ದಾರೆ ಎನ್ನಲಾಗಿದೆ. ಸುಪ್ರೀಂ ಕೋರ್ಟ್ ತೀರ್ಪಿನ ಮೇಲೆ ದರ್ಶನ್ ಚಿಕಿತ್ಸೆ ನಿರ್ಧಾರವಾಗಲಿದೆ.

ಶಿಕ್ಷೆ ಆಗುವ ನಂಬಿಕೆಯಿದೆ...

ಅಂತಿಮವಾಗಿ ಆರೋಪಿಗಳಿಗೆ ಶಿಕ್ಷೆ ಆಗುವ ನಂಬಿಕೆಯಿದೆ' ಎಂದು ಹೇಳಿದ್ದಾರೆ.

'ಸರ್ಕಾರ ನಮ್ಮ ಸೊಸೆ ಸಹನಾಗೆ ಸರ್ಕಾರಿ ನೌಕರಿ ನೀಡಬೇಕು' ಎಂದು ಹೇಳುತ್ತಾ ಕಾಶೀನಾಥಯ್ಯ ಅವರು ಭಾವುಕರಾಗಿದ್ದಾರೆ. 'ದರ್ಶನ್ ನಮ್ಮ ಜತೆ ಮಾತುಕತೆಗೆ ಬರುವ ವಿಚಾರ ಇಲ್ಲ. ದರ್ಶನ್ ಜತೆ ಮಾತನಾಡುವಂಥದ್ದು ಏನೂ ಇಲ್ಲ. ನಾವು ಮಗನ ಕಳೆದುಕೊಂಡು ದುಃಖದಲ್ಲಿದ್ದೇವೆ. ನಮಗೆ ಮಗ ಬೇಕೆ ಹೊರತು ಮಾತುಕತೆ ಏನೂ ಬೇಕಿಲ್ಲ' ಎಂದು ಕಾಶಿನಾಥಯ್ಯ ಹೇಳಿದ್ದಾರೆ.

'ಈವರೆಗೆ ನಮಗೆ ಮಾತುಕತೆಗೆಂದು ಯಾರೂ ಸಂಪರ್ಕ ಮಾಡಿಲ್ಲ. ಅದಕ್ಕೆಂದು ನಮ್ಮ ಸಂಪರ್ಕ ಮಾಡಲು ಅವಕಾಶ ಇಲ್ಲ. ನಾವು ದರ್ಶನ್ ಜತೆ ಮಾತುಕತೆ ಬಗ್ಗೆ ಅಪೇಕ್ಷಿಪಡಲ್ಲ. ಸಿಎಂ ಭೇಟಿ ಮಾಡಿ ಮನವಿ ಮಾಡುವ ಬಗ್ಗೆ ಆಪ್ತರ ಜತೆ ಚರ್ಚಿಸುತ್ತೇವೆ. ಸರ್ಕಾರ ಮಧ್ಯಂತರ ಜಾಮೀನು ಪ್ರಶ್ನಿಸಿ ಸುಪ್ರೀಂ ಮೊರೆ ಹೋಗಿದೆ. ಜಾಮೀನು ಪ್ರಶ್ನಿಸಿ ಸಹ ಸುಪ್ರೀಂ ಮೊರೆ ಹೋಗುವ ವಿಶ್ವಾಸವಿದೆ. ಸಿಎಂ ಹಾಗೂ ಸರ್ಕಾರದ ಮೇಲೆ ಒತ್ತಡ ಹಾಕಲ್ಲ, ಯೋಚಿಸುತ್ತೇವೆ' ಎಂದಿದ್ದಾರೆ.

ಸರ್ಕಾರ ಕಣ್ಮುಚ್ಚಿ ಕೂರಲು ಸಾಧ್ಯವಿಲ್ಲ

ಈಗಿರುವಂತೆಯೇ ಪ್ರವರ್ಗ 2ಎ, 2ಬಿ ಇರಬೇಕು, ಇದಕ್ಕೆ ಹೊಸ ಸೇರ್ಪಡೆಯಾಗಬಾರದು. 2ಬಿಯಲ್ಲಿರುವ 4% ಮೀಸಲಾತಿ ರದ್ದು ಮಾಡಬಾರದು ಎಂದು ಹೇಳಿದ್ದಾರೆ. ಬಿಜೆಪಿ ಅವಧಿಯಲ್ಲಿ ಆಗಿದ್ದಕ್ಕೆ ಅಂದು ಪ್ರತಿಭಟನೆ ಏಕೆ ಮಾಡಲಿಲ್ಲ. ಈಗ ಬಿಜೆಪಿಯವರು ಹೋರಾಟಕ್ಕೆ ಬೆಂಬಲ ನೀಡುತ್ತಿದ್ದಾರೆ. ಮುಸಲ್ಮಾನರಿಗೆ ಇದ್ದ ಶೇ.4 ರ ಮೀಸಲಾತಿ ರದ್ದುಮಾಡಿ 3ಎ ಒಕ್ಕಲಿಗರಿಗೆ 2% ಮತ್ತು 3ಬಿ ಪ್ರವರ್ಗಗಳಡಿ ಲಿಂಗಾಯತರಿಗೆ 2% ಮೀಸಲಾತಿ ನೀಡಿದರು. ಇದನ್ನು ಪ್ರಶ್ನಿಸಿ ಮುಸಲ್ಮಾನರಾದ ರಸೂಲ್ ಎಂಬ ವ್ಯಕ್ತಿ ನ್ಯಾಯಾಲಯದ ಮೆಟ್ಟಿಲೇರಿದ್ದರು. ಈ ವೇಳೆ ಹಿಂದಿನ ಬಿಜೆಪಿ ಸರ್ಕಾರವೇ ಮೀಸಲಾತಿಯಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ ಎಂದು ಒಪ್ಪಿಕೊಂಡಿದೆ ಎಂದು ಮುಖ್ಯಮಂತ್ರಿ ಹೇಳಿದರು. ಟ್ರ್ಯಾಕ್ಟರ್ ತರುವ ಮೂಲಕ ಪಂಚಮಸಾಲಿ ಹೋರಾಟವನ್ನು ಮಾಡುತ್ತೇವೆ ಎಂಬುದಾಗಿ ತಿಳಿಸಿದ್ದರು, ನ್ಯಾಯಾಲಯವೂ ಶಾಂತಿಯುತವಾಗಿ, ಸಾರ್ವಜನಿಕರಿಗೆ ತೊಂದರೆಯಾಗದಂತೆ ಹೋರಾಟ ನಡೆಸಲು ಸೂಚಿಸಿತ್ತು. ಆದರೆ, ಹೋರಾಟಗಾರರು ಕಾನೂನನ್ನು ಕೈಗೆ ತೆಗೆದುಕೊಳ್ಳಲು ಯತ್ನಿಸಿದರು. ಸ್ಥಳಕ್ಕೆ ಮಹದೇವಪ್ಪ ಸೇರಿದಂತೆ ಮೂವರು ಸಚಿವರನ್ನು ಕಳುಹಿಸಲಾಗಿತ್ತು. ಆದರೂ, ಮಾತುಕತೆಗೆ ಬರಲಿಲ್ಲ ಎಂದರು.

ಹಿಂದೆಯೇ ಬಿಡುಗಡೆ!

ವಾಸದಿಂದ ಪಾರಾದಂತಾಗಿದೆ. ಆದರೆ ಒಂದು ದಿನ ಅಥವಾ ಸೋಮವಾರದವರೆಗೆಯಾದರೂ ಜೈಲು ವಾಸ ಅನುಭವಿಸುವ ಸಾಧ್ಯತೆ ಇದೆ.

ಎಫ್‌ಐಆರ್ ರದ್ದು ಕೋರಿ ಅಲ್ಲು ಅರ್ಜುನ್ ಪರ ವಕೀಲರು ತೆಲಂಗಾಣ ಹೈಕೋರ್ಟ್‌ನಲ್ಲಿ ಅರ್ಜಿ ಹಾಕಿದ್ದರು. ಶಾರುಖ್ ಖಾನ್ ಪ್ರಕರಣ ಸೇರಿದಂತೆ ಹಲವು ಪ್ರಕರಣಗಳ ಉಲ್ಲೇಖ ಮಾಡಿ ಅಲ್ಲು ಅರ್ಜುನ್ ಪರ ವಕೀಲರು ವಾದ ಮಂಡಿಸಿದರು. ಆದರೆ ಹೈಕೋರ್ಟ್ ಎಫ್‌ಐಆರ್ ರದ್ದುಗೊಳಿಸಲು ನಿರಾಕರಿಸಿದೆ. ವಾದ ಮುಂದುವರೆಸಿದ ಅಲ್ಲು ಅರ್ಜುನ್ ಪರ ವಕೀಲರು ಮಧ್ಯಂತರ ಜಾಮೀನಿದೆ ಮನವಿ ಮಾಡಿದರು.

ಅಲ್ಲು ಅರ್ಜುನ್‌ಗೂ, ರೇವತಿ ಸಾವಿಗೂ ನೇರ ಸಂಬಂಧವೇ ಇಲ್ಲ. ಇದು ಅಚಾನಕ್ಕಾಗಿ ನಡೆದಿರುವ ಘಟನೆ. ಇಂಥಹಾ ಅಪಘಾತಗಳು ಸಾಕಷ್ಟು ನಡೆಯುತ್ತಲೇ ಇರುತ್ತವೆ. ಈ ರೀತಿಯ ಘಟನೆಗಳಿಗೆ ನಟರನ್ನು, ರಾಜಕಾರಣಿಗಳನ್ನು ಕೊಲೆಗಾರರು ಎನ್ನಲಾಗದು ಎಂದು ವಾದಿಸಿದರು. ಹಲವು ಇತರೆ ಪ್ರಕರಣಗಳ ಉಲ್ಲೇಖಗಳನ್ನು ಸಹ ವಕೀಲರು ನ್ಯಾಯಾಲಯದಲ್ಲಿ ಮಾಡಿದರು. ವಾದ ಆಲಿಸಿದ ನ್ಯಾಯಮೂರ್ತಿಗಳು ಅಲ್ಲು ಅರ್ಜುನ್‌ಗೆ ಮಧ್ಯಂತರ ಜಾಮೀನು ಮಂಜೂರು ಮಾಡಿದ್ದಾರೆ.

ಇದಕ್ಕೂ ಮುನ್ನ ಮೃತ ಮಹಿಳೆ ರೇವತಿಯ ಪತಿ ಭಾಸ್ಕರ್ ಮಾತನಾಡಿ, ಆಕೆಯ ಸಾವಿಗೆ ನಟ ಅಲ್ಲು ಅರ್ಜುನ್ ಕಾರಣವಲ್ಲ. ಅವರ ತಪ್ಪಿಲ್ಲ. ಅಗತ್ಯವಿದ್ದರೆ ಪ್ರಕರಣವನ್ನು ಹಿಂಪಡೆಯಲು ಸಿದ್ಧ ಎಂದು ಹೇಳಿದರು. ಅಲ್ಲದೆ ಅಲ್ಲು ಅರ್ಜುನ್ ಬಂಧನದ ಬಗ್ಗೆ ತನಗೆ ಮಾಹಿತಿ ಇಲ್ಲ ಎಂದು ಅವರು ಹೇಳಿದ್ದಾರೆ.

ಬಿಜೆಪಿ ಶಾಸಕರ ಸಭಾತ್ಯಾಗ

ಈ ಸಂಬಂಧ ಮನವಿ ಮಾಡಿ ನಾಲ್ಕು ದಿನ ಕಳೆಯಿತು. ವಕ್ಫ್ ವಿವಾದ, ಬಾಣಂತಿಯರು, ನವಶಿಶುಗಳ ಮರಣ, ರೂ. 700 ಕೋಟಿ ಅಬಕಾರಿ ಹಗರಣ, ಉತ್ತರ ಕರ್ನಾಟಕ ಅಭಿವೃದ್ಧಿ ವಿಚಾರ ಕುರಿತು ಪ್ರಶ್ನೆಗೆ ಬಯಸಿದ್ದೆವು. ಪ್ರಮುಖವಾದ ಬೇಡಿಕೆಗಳನ್ನು ಎತ್ತಿದಾಗ ಸದನವನ್ನು ಮುಂದೂಡಲಾಯಿತು ಎಂದು ಅವರು ಹೇಳಿದರು. ಕೇಂದ್ರದಿಂದ ಅನುದಾನ ಬಿಡುಗಡೆಯಾಗಿಲ್ಲ ಎಂದು ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಶಾಸಕರು ಕೂಡಾ ಆಕ್ರೋಶ ವ್ಯಕ್ತಪಡಿಸಿದರು.

ಸ್ಪೀಕರ್ ಖಾದರ್ ಅವರಿಗೆ ಸಚಿವ ಸ್ಥಾನ ನೀಡದ ಹಿನ್ನೆಲೆಯಲ್ಲಿ ಸದನದಲ್ಲಿ ಕೋಪ ತೋರಿಸುತ್ತಿದ್ದಾರೆ. ಯೋಜಿತ ರೀತಿಯಲ್ಲಿ ಕಾಂಗ್ರೆಸ್ ನಾಯಕರು ಬಿಜೆಪಿಯೊಂದಿಗೆ ಜಗಳಕ್ಕೆ ನಿಲ್ಲುತ್ತಿದ್ದಾರೆ. ಹೀಗಾಗಿ ಬಿಜೆಪಿ ಶಾಸಕರ ಸದನದಿಂದ ಹೊರ ನಡೆದರು ಎಂದು ಅಶೋಕ್ ಹೇಳಿದರು. ಮತ್ತೊಂದೆಡೆ ಸ್ಪೀಕರ್ ಮಾತುಗಳನ್ನು ಕಾಂಗ್ರೆಸ್ ಸದಸ್ಯರು ಗೌರವಿಸುತ್ತಿಲ್ಲ. ಸ್ಪೀಕರ್ ಕೂಡಾ ಒಂದು ಕಡೆಯವರಂತೆ ವರ್ತಿಸುತ್ತಿದ್ದು, ಸರ್ಕಾರದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ. ಅಧಿವೇಶನದಲ್ಲಿ ಏನು ಸಂದೇಶ ರವಾನಿಸುತ್ತಿದ್ದಾರೆ ಎಂದು ಪ್ರಶ್ನಿಸಿದ ಅಶೋಕ್, ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ವಿಧಾನಸಭೆಯಲ್ಲಿ ಚರ್ಚೆಗೆ ಅವಕಾಶ ನೀಡದೆ ಪ್ರತಿಪಕ್ಷಗಳ ಸಂವಿಧಾನಿಕ ಹಕ್ಕನ್ನು ಕಸಿದುಕೊಳ್ಳುತ್ತಿದೆ ಎಂದು ಆರೋಪಿಸಿದರು.

ಬಡವರು, ರೈತರ ಒಕ್ಕಲೆಬ್ಬಿಸುವುದಿಲ್ಲ

ಎಂದು ಎಲ್ಲಿಯೂ ನಾನು ಹೇಳಿಲ್ಲ. ವಕ್ಫ್ ಮಂಡಳಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಆಸ್ತಿಗಳ ಒತ್ತುವರಿ ಕುರಿತು ಪರಿಶೀಲಿಸುವಂತೆ ಮುಖ್ಯಮಂತ್ರಿಯವರು ಸೂಚನೆ ನೀಡಿದ್ದಾರೆ ಎಂದಷ್ಟೇ ಹೇಳಿದ್ದೆ. ಹಲವು ಜಿಲ್ಲೆಗಳಿಗೆ ಹೋಗಿ ವಕ್ಫ್ ಅದಾಲತ್ ನಡೆಸಿದ್ದೇನೆ. ಆ ಸಭೆಗಳಿಗೆ ಬಿಜೆಪಿ ಸದಸ್ಯರು ಬಂದಿದ್ದರೆ ಈ ರೀತಿಯ ಸುಳ್ಳು ಆರೋಪ ಮಾಡುತ್ತಿರಲಿಲ್ಲ ಎಂದು ಹೇಳಿದರು. 2021ರಲ್ಲೇ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ವಕ್ಫ್ ಮಂಡಳಿಯ ಆಸ್ತಿಗಳ ಒತ್ತುವರಿ ತೆರವಿಗೆ ಸುತ್ತೋಲೆ ಹೊರಡಿಸಿದ್ದರು. 2019ರಲ್ಲೂ ಅಂತಹ ಸುತ್ತೋಲೆ ಹೊರಡಿಸಲಾಗಿತ್ತು. ಎರಡೂ ಸಂದರ್ಭಗಳಲ್ಲಿ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವೇ ಇತ್ತು. ಆಗಿನಿಂದಲೂ ಆ ನೋಟಿಸ್‌ಗಳ ಆಧಾರದಲ್ಲೇ ಪ್ರಕ್ರಿಯೆ ನಡೆಯುತ್ತಾ ಬಂದಿದೆ. ಈ ಸರ್ಕಾರದ ಅವಧಿಯಲ್ಲಿ ಅಂತಹ ಯಾವುದೇ ಸೂಚನೆಯನ್ನೂ ನೀಡಿಲ್ಲ ಎಂದು ಬಿಜೆಪಿ ಸದಸ್ಯರ ಆರೋಪಕ್ಕೆ ಸಚಿವರು ಪ್ರತಿಕ್ರಿಯಿಸಿದರು.

ನಿಮ್ಮ ಪತ್ರಗಳು

ನಾವು ನಾಗರಿಕರಲ್ಲವೇ...ನಮ್ಮ ಆಸ್ತಿಯ ಹಕ್ಕು ರಕ್ಷಿಸಬೇಕಲ್ಲವೇ...

ಮಾನ್ಯರೆ,

ಸುಪ್ರೀಂಕೋರ್ಟ್‌ನ ಹಿಂದಿನ ಆದೇಶವನ್ನು ಪಾಲಿಸದೇ ಇದ್ದುದ್ದಕ್ಕೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ, ಬಿಬಿಎಂಪಿ ಆಯುಕ್ತರು, ಬಿಡಿಎ ಆಯುಕ್ತರು ಇನ್ನಿತರರ ವಿರುದ್ಧ ಚದುರಂಗಕಾಂತರಾಜ ಅರಸ್ ಮತ್ತು ಮೈಸೂರು ರಾಜಮನೆತನದ ಇನ್ನಿತರ ಸದಸ್ಯರು ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಯನ್ನು ಪುರಸ್ಕರಿಸಿದ್ದ ಸುಪ್ರೀಂಕೋರ್ಟ್, ಈ ಸಂಬಂಧ ಡಿಸೆಂಬರ್ 10ರಂದು ಮಹತ್ವದ ಆದೇಶ ನೀಡಿದೆ.

ಭೂಮಿಯ ಮಾಲೀಕರು, ರಾಜಮನೆತನದ ಸದಸ್ಯರಿಗೆ ಆರು ವಾರಗಳಲ್ಲಿ ಮುದ್ರಾಂಕ ಕಾಯ್ದೆ ಪ್ರಕಾರ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕುಗಳ (ಟಿಡಿಆರ್) ನೀಡುವಂತೆ ಸುಪ್ರೀಂಕೋರ್ಟ್ ಸಂಬಂಧಿಸಿದ ಪ್ರಾಧಿಕಾರಕ್ಕೆ ಆದೇಶಿಸಿದೆ.

ಆದರೆ 2010ರಿಂದ ನಡೆಯುತ್ತಿದ್ದ ಈ ಪ್ರಕರಣದಲ್ಲಿ ರಾಜ್ಯ ಸರ್ಕಾರದ ಉದಾಸೀನತೆ ಹಾಗೂ ವಿಳಂಬ ಧೋರಣೆ ಎದ್ದು ಕಾಣುತ್ತದೆ.

2018ರಲ್ಲಿ ಹೊಸ ವಿಮಾನ ನಿಲ್ದಾಣ ಕಾರ್ಯಾರಂಭವಾದಾಗ ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ಹೆಚ್ಚಾಯಿತು. ರಸ್ತೆ ಅಗಲೀಕರಣಕ್ಕಾಗಿ ಸರ್ಕಾರವು ಬೆಂಗಳೂರು ಅರಮನೆ ಸುತ್ತಮುತ್ತಲ 15 ಎಕರೆ ಭೂಮಿ ಕೋರಿತ್ತು.

ಇದಕ್ಕಾಗಿ ರಾಜಮನೆತನಕ್ಕೆ ಟಿಡಿಆರ್ ನೀಡುವುದಾಗಿ ಕರ್ನಾಟಕ ಸರ್ಕಾರ ನೀಡಿದ ಭರವಸೆಯನ್ನು ನಂಬಿದ ರಾಜಮನೆತನವು ತಕ್ಷಣವೇ ಸರ್ಕಾರಕ್ಕೆ ಭೂಮಿ ಹಸ್ತಾಂತರಿಸುವ ಮೂಲಕ ಅಭಿವೃದ್ಧಿಗೆ ಸಹಕರಿಸಿತ್ತು.

ಆದರೆ ಅರಮನೆ ಮೈದಾನಕ್ಕೆ ಹೊಸದಾಗಿ ಕಾಂಪೌಂಡ್ ನಿರ್ಮಿಸಿ ದರೂ ಬಿಬಿಎಂಪಿ ತನ್ನ ಬದ್ಧತೆಯನ್ನು ಪ್ರದರ್ಶಿಸದೇ ರಾಜಮನೆತನ 14 ವರ್ಷಗಳ ಸುದೀರ್ಘ ಕಾನೂನು ಹೋರಾಟ ನಡೆಸಬೇಕಾದ ಪರಿಸ್ಥಿತಿಗೆ ದೂಡಿತು.

ಟಿಡಿಆರ್ ಪ್ರಮಾಣ ಪತ್ರಗಳನ್ನು ರಾಜಮನೆತನಕ್ಕೆ ನೀಡುವುದರಿಂದ ಸರ್ಕಾರದ ಬೊಕ್ಕಸಕ್ಕೆ ಯಾವುದೇ ಹೊರೆಯಾಗುತ್ತಿರಲಿಲ್ಲ. ಟಿಡಿಆರ್ ಅನ್ನು ಡೆವಲಪರ್‌ಗಳಿಗೆ ಮಾರಾಟ ಮಾಡಿದಾಗ ಮಾತ್ರ ಅದು ವಿತ್ತೀಯ ಮೌಲ್ಯ ಹೊಂದುತ್ತದೆ.

ಹಾಗಿದ್ದರೂ ಅಧಿಕಾರಶಾಹಿಗಳು ಮತ್ತು ರಾಜಕಾರಣಿಗಳ ನಿರಾಸಕ್ತಿಯಿಂದಾಗಿ ರಾಜಮನೆತನದ ಸದಸ್ಯರಿಗೆ ನ್ಯಾಯ ದೊರೆಯಲಿಲ್ಲ. ಏಕೆ? ಇದಕ್ಕೆ ಅಧಿಕಾರದಲ್ಲಿರುವವರು ಮಾತ್ರ ಉತ್ತರ ನೀಡಬಲ್ಲರು.

ಟಿಡಿಆರ್ ನೀಡುವಲ್ಲಿ ಸರ್ಕಾರದ ಈ ವಿಳಂಬ ಮಾತ್ರ ಒಂದು ರೀತಿ ಕುಚೇಷ್ಟೆಯಂತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕೆಸರೆ ಗ್ರಾಮದ ಕೇವಲ 3.16 ಎಕರೆ ಭೂಮಿಗೆ 62 ಕೋಟಿ ರೂ. ಪರಿಹಾರ ಕೋರಿದ್ದಕ್ಕೆ ಸಂಬಂಧಿಸಿದಂತೆ 'ನಾನು ಮುಖ್ಯಮಂತ್ರಿ ಆಗಿದ್ದ ಮಾತ್ರಕ್ಕೆ ನಮ್ಮ ಭೂಮಿಯನ್ನು ಬಿಟ್ಟು ಕೊಡಬೇಕೇ?' ಎಂದು ಪ್ರಶ್ನಿಸಿರುವುದಾಗಿ ವರದಿಯಾಗಿದೆ. ಆದರೆ ಬೆಂಗಳೂರು ಅರಮನೆ ಜಾಗದ ವಿಚಾರದಲ್ಲಿ ಸರ್ಕಾರ ನೀಡಿದ್ದ ಒಂದು ಸಣ್ಣ ಭರವಸೆ ಯಿಂದ ಹಿಂದೆ ಸರಿದಿದ್ದು ಏಕೆ?.

ಇದೇ ತತ್ವ ಅನ್ವಯಿಸುವುದಾದರೆ ರಾಜಮನೆತನದ ಇಂತಹುದೇ ಹಕ್ಕುಗಳ ನಿರಾಕರಿಸುವುದೇಕೆ? ರಾಜಮನೆತನವನ್ನು ಸರ್ಕಾರ ಹೇಗೆ ನಡೆಸಿಕೊಂಡಿದೆ ಎಂಬುದು ಇದರಿಂದ ಅರ್ಥವಾಗುತ್ತದೆ.


1996ರಲ್ಲಿ ಬೆಂಗಳೂರು ಅರಮನೆ ಮೈದಾನದ 470 ಎಕರೆ ಭೂಮಿಯನ್ನು (ಸ್ವಾಧೀನ ಮತ್ತು ವರ್ಗಾವಣೆ) ಕಾಯ್ದೆ ಮೂಲಕ 11 ಕೋಟಿ ರೂ.ಗಳಿಗೆ ಸ್ವಾಧೀನಪಡಿಸಿಕೊಳ್ಳಲು ರಾಜ್ಯ ಸರ್ಕಾರ ಮುಂದಾಗಿತ್ತು.

ಆಗ ಜೆಡಿಎಸ್ ಸರ್ಕಾರ ಅಸ್ತಿತ್ವದಲ್ಲಿದ್ದು, ಸಿದ್ದರಾಮಯ್ಯ ಅದರ ಭಾಗವಾಗಿದ್ದರು.

ಸರ್ಕಾರದ ಈ ಕ್ರಮದ ವಿರುದ್ಧ ರಾಜಮನೆತನದ ಪರವಾಗಿ 2014ರಲ್ಲಿ ತೀರ್ಪು ಬಂದಾಗ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದರು.

ರಾಜಮನೆತನದ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್, ಅವರ ಸಹೋದರಿಯರಾದ ಮೀನಾಕ್ಷಿದೇವಿ ಮತ್ತು ವಿಶಾಲಾಕ್ಷಿದೇವಿ ಅವರು ಈ ಅರ್ಜಿಗಳ ಸಲ್ಲಿಸಿದ್ದರು. ಈಗವರು ಜೀವಂತವಾಗಿಲ್ಲ. ಇದರ ಮೂಲಕ ಸರ್ಕಾರ ನಾಗರಿಕರ ಹಕ್ಕುಗಳನ್ನು ಹೇಗೆ ನಿರ್ಲಕ್ಷಿಸುತ್ತಿದೆ ಎಂಬುದನ್ನು ತಿಳಿಯಬಹುದಾಗಿದೆ.

ಸುಪ್ರೀಂಕೋರ್ಟ್‌ನ ಈ ತೀರ್ಪು, ಮೈಸೂರು ರಾಜಮನೆತನ ಮಾತ್ರವೇ ಅಲ್ಲದೆ ಅಧಿಕಾರಶಾಹಿ ಹಾಗೂ ರಾಜಕಾರಣಿಗಳಿಂದ ವಾಡಿಕೆಯಂತೆ ತಮ್ಮ ಹಕ್ಕುಗಳಿಂದ ವಂಚಿತರಾಗುವ ನಾಗರಿಕರಲ್ಲೂ ಭರವಸೆಯನ್ನು ಹುಟ್ಟುಹಾಕಿದೆ.



–ಆರ್.ರಾಜಾಚಂದ್ರ (ಮೈಸೂರು ರಾಜಮನೆತನದ ಸದಸ್ಯರು)

ಬೆಂಗಳೂರು, ದಿನಾಂಕ:11–12–2024

ಡಿ.16ರಿಂದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಡಾ.ಪಾವಗಡ ಪ್ರಕಾಶ್‌ರಾವ್ ಪ್ರವಚನ ಮಾಲಿಕೆ





ಮೈಸೂರು, ಡಿ.13–ನಗರದ ಊಟಿ ರಸ್ತೆಯಲ್ಲಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ನಾದ ಮಂಟಪದಲ್ಲಿ ಡಿ.16ರಿಂದ 18ರವರೆಗೆ ಪ್ರತಿದಿನ ಸಂಜೆ 5.30ಕ್ಕೆ ಕೃಷ್ಣಮೂರ್ತಿಪುರಂನ ದತ್ತ ಸೇನೆ ಮತ್ತು ಉಪನ್ಯಾಸ ಮಾಲಿಕೆ ಸಮಿತಿ, ಮೈಸೂರು ಇವರ ವತಿಯಿಂದ ಬೆಂಗಳೂರಿನ ಪ್ರವಚನ ಚಕ್ರವರ್ತಿ ಡಾ. ಪಾವಗಡ ಪ್ರಕಾಶ್ ರಾವ್ ಇವರಿಂದ 'ಉಪನಿಷತ್ ದರ್ಶನ' ವಿಷಯ ಕುರಿತು ಪ್ರವಚನ ಮಾಲಿಕೆಯನ್ನು ಆಯೋಜಿಸಲಾಗಿದೆ.

ಡಿ.16ರಂದು ಸಂಜೆ 5.30ಕ್ಕೆ ಪರಮ ಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳು ಹಾಗೂ ಕಿರಿಯ ಸ್ವಾಮಿಗಳಾದ ದತ್ತ ವಿಜಯಾನಂದ ತೀರ್ಥ ಶ್ರೀಗಳು ಕಾರ್ಯಕ್ರಮಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೇಲುಕೋಟೆ ವಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಉದ್ಯಮಿ ಮಹೇಶ್ ಶೆಣೈ, ನಿವೃತ್ತ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಭಾಸ್ಕರ್ ರಾವ್, ಹಿರಿಯ ಸಮಾಜ ಸೇವಕ ಡಾ.ಕೆ. ರಘುರಾವ್ ವಾಜಪೇಯಿ, ಸಪ್ತಋಷಿ ಸೌಹಾರ್ದ ಸೊಸೈಟಿಯ ನಿರ್ದೇಶಕ ನಾಗಚಂದ್ರ, ಆದರ್ಶ ಸೇವಾ ಸಂಘದ ಅಧ್ಯಕ್ಷ ಜಿ.ಆರ್.ನಾಗರಾಜ್, ಉದ್ಯಮಿ ರವಿಶಾಸ್ತ್ರಿ, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ, ಲಕ್ಷ್ಮೀಪುರಂ ಪೊಲೀಸ್ ಇಲಾಖೆಯ ವೃತ್ತ ನಿರೀಕ್ಷಕ ರವಿಶಂಕರ್, ಕಾಂಗ್ರೆಸ್ ಮುಖಂಡ ಜೈರಾಜ್, ಹರಿದಾಸ ಸಮಿತಿ ಅಧ್ಯಕ್ಷ ರವಿಕುಮಾರ್, ಡೆವಲಪರ್ ಗಿರೀಶ್, ಒಂಟಿಕೊಪ್ಪಲ್ ವೆಂಕಟೇಶ್ವರ ಸ್ವಾಮಿ ದೇವಸ್ಥಾನದ ಟ್ರಸ್ಟಿ ಪುಟ್ಟಸ್ವಾಮಿ ಆಗಮಿಸಲಿದ್ದಾರೆ.

ಡಿ.18ರಂದು ಸಂಜೆ 5.30ಕ್ಕೆ ಸಮಾರೋಪ ಸಮಾರಂಭದಲ್ಲಿ 'ದತ್ತಾವಧೂತರ ಅವತಾರ' ಎಂಬ ವಿಷಯ ಕುರಿತು ಗುರುದ್ವಯರ ಸನ್ನಿಧಿಯಲ್ಲಿ ನಡೆಯಲಿದೆ. ಅತಿಥಿಗಳಾಗಿ ಬೆಂಗಳೂರಿನ ವಿಪ್ರ ಮುಖಂಡ ರಘುನಾಥ, ಜ್ಯೋತಿ ಸಮೂಹ ಸಂಸ್ಥೆಯ ನರಸಿಂಹನ್, ವಿಪ್ರ ಮುಖಂಡ ಲಕ್ಷ್ಮೀಕಾಂತ್, ಉದ್ಯಮಿ ರಾಜಶೇಖರ್, ಕಾಂಗ್ರೆಸ್ ಮುಖಂಡ ಎಂ.ಎನ್.ನವೀನ್‌ಕುಮಾರ್, ಜಿಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಡಾ.ನಟರಾಜ ಜೋಯಿಸ್, ವಿಪ್ರ ವಕೀಲ ಪರಿಷತ್ ಅಧ್ಯಕ್ಷ ರವೀಂದ್ರ ಆಗಮಿಸಲಿದ್ದಾರೆ. ಭಕ್ತ ಮಹಾಶಯರು ಈ ಮೂರು ದಿನದ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕೃತಾರ್ಥರಾಗಬೇಕೆಂದು ದತ್ತ ಸೇನೆ ಅಧ್ಯಕ್ಷ ಆರ್.ಎಸ್.ಸತ್ಯನಾರಾಯಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗೆ ಮೊಬೈಲ್ 9686832244 ಸಂಪರ್ಕಿಸಬಹುದು.

ರಾಜ್ಯದಲ್ಲಿ ಆದ್ಯತೆ ಮೇರೆಗೆ ಗ್ರಾಪಂಗಳು ಪಪಂಗಳಾಗಿ ಮೇಲ್ದರ್ಜೆಗೆ



ಸುರೇಶ್

ಬೆಳಗಾವಿ: ರಾಜ್ಯದ ವಿವಿಧ ಕಡೆ ಗ್ರಾಮ ಪಂಚಾಯತ್‌ಗಳನ್ನು ಪಟ್ಟಣ ಪಂಚಾಯತ್‌ಗಳನ್ನಾಗಿ, ಪಟ್ಟಣ ಪಂಚಾಯತ್‌ಗಳನ್ನು ಪುರಸಭೆಗಳನ್ನಾಗಿ, ಪುರಸಭೆಗಳನ್ನು ನಗರಸಭೆಗಳನ್ನಾಗಿ ಮೇಲ್ದರ್ಜೆಗೆ ಏರಿಸುವಂತೆ ಕೋರಿ 50ಕ್ಕೂ ಹೆಚ್ಚು ಪ್ರಸ್ತಾವನೆಗಳನ್ನು ರಾಜ್ಯ ಸರ್ಕಾರ ಸ್ವೀಕರಿಸಿದೆ ಎಂದು ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವ ಬಿ.ಎಸ್.ಸುರೇಶ್ ತಿಳಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಣಕಾಸು ಇಲಾಖೆಯೊಂದಿಗೆ ಚರ್ಚಿಸಿ ಹಂತ ಹಂತವಾಗಿ ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿ ದ್ದಾರೆ ಎಂದು ಸದನಕ್ಕೆ ಮಾಹಿತಿ ನೀಡಿದರು. 20,000 ಸಾವಿರಕ್ಕೂ ಅಧಿಕ ಜನಸಂಖ್ಯೆ ಇದ್ದರೆ ಮಾತ್ರ ಗ್ರಾಮ ಪಂಚಾಯತ್ ಅನ್ನು ಪಟ್ಟಣ ಪಂಚಾಯತ್ ಆಗಿ ಮೇಲ್ದರ್ಜೆಗೆ ಏರಿಸಬಹುದು, ಇದರೊಂದಿಗೆ ಪಟ್ಟಣ ಪಂಚಾಯತ್ ಆಗಿ ಪರಿವರ್ತನೆಯಾದ ಮೇಲೆ ಅಗತ್ಯ ಅಧಿಕಾರಿ, ಸಿಬ್ಬಂದಿ ನೇಮಿಸಿ ಸೂಕ್ತ ಅನುದಾನ ನೀಡಬೇಕಿದೆ ಎಂದರು.

ಡಿ.16, ಬೆಳಗಾವಿಯಲ್ಲಿ ನಿವೃತ್ತ ಸರ್ಕಾರಿ ನೌಕರರ ಪ್ರತಿಭಟನೆ

ಮೈಸೂರು, ಡಿ.13(ಜಿಎ)–ತಮ್ಮ ಬೇಡಿಕೆ ಈಡೇರಿಕೆಗಾಗಿ ಡಿ.16ರಂದು ಬೆಳಗಾವಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ಕರ್ನಾಟಕ ನಿವೃತ್ತ ನೌಕರರ ವೇದಿಕೆಯ ಸಂಚಾಲಕ ಹೆಚ್.ಡಿ.ಮಾದಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 4.50 ಲಕ್ಷ ನಿವೃತ್ತ ನೌಕರರಿದ್ದು, 1.7.2020ರಿಂದ 31.7.2024ರ ಅವಧಿಯಲ್ಲಿ ನಿವೃತ್ತರಾದ 26,423 ಅಧಿಕಾರಿ, ನೌಕರ ವರ್ಗದವರಿಗೆ 7ನೇ ಆಯೋಗದ ಅನುಷ್ಠಾನದಲ್ಲಿ ನಿವೃತ್ತ ಆರ್ಥಿಕ ಸೌಲಭ್ಯವನ್ನು ನೀಡದೇ 6ನೇ ವೇತನ ಆಯೋಗದನ್ವಯ ನೀಡಲಾಗಿದೆ ಈ ನಿಟ್ಟಿನಲ್ಲಿ ಎ ದರ್ಜೆಯಿಂದ ಡಿ ದರ್ಜೆಯ ನೌಕರರಿಗೆ 6 ಲಕ್ಷ ರಿಂದ 22 ಲಕ್ಷ ರೂ.ವರೆಗೆ ನಷ್ಟವಾಗಿದೆ ಎಂದರು. ಈ ಕುರಿತು ಸರ್ಕಾರದ ಗಮನ ಸೆಳೆಯುವಲ್ಲಿ ಈವರೆಗೂ ಸತತ ನಾಲ್ಕು ತಿಂಗಳಿನಿಂದ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳಿಗೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ, ಪ್ರತಿಪಕ್ಷದ ನಾಯಕರಿಗೆ, ಉಭಯ ಸಭಾಪತಿಗಳಿಗೆ, ಶಾಸಕರು, ವಿಧಾನ ಪರಿಷತ್ ಸದಸ್ಯರು ಸೇರಿದಂತೆ ರಾಜ್ಯ ಸರ್ಕಾರಿ ನೌಕರರ ಸಂಘದ ಮೂಲಕ ಖುದ್ದಾಗಿ ಮನವಿ ಸಲ್ಲಿಸಿದ್ದು ಯಾವುದೇ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ ಡಿ.16ರಂದು ಬೆಳಗಾವಿಯ ಅಧಿವೇಶನ ಸಂದರ್ಭದಲ್ಲಿ ಸುವರ್ಣ ಸೌಧದ ಮುಂಭಾಗ ಅಂದು ಬೆಳಗ್ಗೆ 9ರಿಂದ ಸಂಜೆವರೆಗೂ ಧರಣಿ ನಡೆಸಲಾಗುತ್ತಿದೆ. ಮೈಸೂರು ಜಿಲ್ಲೆಯಿಂದ ವಿವಿಧ ತಾಲೂಕಿನಿಂದ ಬಸ್‌ಗಳ ಮೂಲಕ 500ಕ್ಕೂ ಅಧಿಕ ಮಂದಿ ಭಾಗವಹಿಸಿ ಬೆಂಬಲ ಸೂಚಿಸಿ, 26,423 ನೌಕರರು ಮುಖ್ಯಮಂತ್ರಿಗೆ ತಮ್ಮ ಬೇಡಿಕೆ ಈಡೇರಿಸುವಂತೆ ಆಗ್ರಹಿಸಲಿದ್ದೇವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜಯ್ಯ, ರಾಜಮ್ಮ, ಸಿ.ನಾಗಯ್ಯ, ರಾಜೇಂದ್ರ, ಶ್ರೀಕಂಠ ಮೂರ್ತಿ, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಖಾಸಗಿಯವರಿಗೆ ಗುತ್ತಿಗೆ ನೀಡಿ ಸಹಕಾರಿ ಸಕ್ಕರೆ ಕಾರ್ಖಾನೆಗಳ ಪುನಶ್ಚೇತನ



ಪಾಟೀಲ್

ಬೆಳಗಾವಿ: ಆರ್ಥಿಕ ಸಂಕಷ್ಟ ಹಾಗೂ ಇತರ ಆಡಳಿತಾತ್ಮಕ ಕಾರಣಗಳಿಂದ ಸ್ಥಗಿತಗೊಂಡಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವ ಮೂಲಕ ಪುನಶ್ಚೇತನಗೊಳಿಸುವುದು ಸರ್ಕಾರದ ಉದ್ದೇಶವಾಗಿದೆ ಎಂದು ಕಬ್ಬು ಅಭಿವೃದ್ಧಿ, ಸಕ್ಕರೆ ಸಚಿವ ಶಿವಾನಂದ ಪಾಟೀಲ್ ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

ಬಾಬಾ ಸಾಹೇಬ್ ಪಾಟೀಲ್ (ಕಿತ್ತೂರು) ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ಆರ್ಥಿಕ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಕಾರ್ಖಾನೆಗೆ ಸರ್ಕಾರದಿಂದ ಬಂಡವಾಳ ಅಥವಾ ಅನುದಾನ ನೀಡುವ ನೀತಿ ಸರ್ಕಾರದ ಮುಂದೆ ಇಲ್ಲ.

ಸಾಲ ಪಡೆದು ಪುನಶ್ಚೇತನಗೊಳಿಸುವ ಪ್ರಯತ್ನ ಮಾಡಿದರೆ ಸರ್ಕಾರ ನೆರವಿಗೆ ಬರಲಿದೆ ಎಂದರು. ಕಾರ್ಖಾನೆಯ ಕಾರ್ಯ ನಿರ್ವಹಣೆಗೆ ಅಗತ್ಯ ಸಂಪನ್ಮೂಲ ಕ್ರೋಢೀಕರಣ ಮಾಡುವುದು ಆಡಳಿತ ಮಂಡಳಿಯ ಜವಾಬ್ದಾರಿಯಾಗಿದ್ದು, ಸಾಮಾನ್ಯ ಸಭೆ ಮತ್ತು ಆಡಳಿತ ಮಂಡಳಿ ಸಭೆಗಳಲ್ಲಿ ಸೂಕ್ತ ತೀರ್ಮಾನ ಕೈಗೊಂಡು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರೆ ನಿಯಮಾನುಸಾರ ಪರಿಶೀಲನೆ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಗಣರಾಜ್ಯೋತ್ಸವದ ವೇಳೆಗೆ 'ಯುದ್ಧ ಸ್ಮಾರಕ' ನಿರ್ಮಾಣ ಪೂರ್ಣ

● ಸ್ಮಾರಕದ ಸ್ಲಾಬ್‌ಗಳಿಗೆ ಅಂತಿಮ ಹಂತದ ಪಾಲಿಶ್ ಮಾಡುವ ಕಾರ್ಯ ಆರಂಭ ● ಬೃಹತ್ ಕ್ರೇನ್ ಮೂಲಕ ಸ್ಲ್ಯಾಬ್ ಜೋಡಿಸಿ ಪಾಲಿಶ್ ● ಮಾಸಾಂತ್ಯದ ವೇಳೆಗೆ ಪ್ಲಾಟ್‌ಫಾರಂ ಮೇಲೆ ಜೋಡಣೆ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಡಿ.13– ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ನಿರ್ಮಿಸುತ್ತಿರುವ 'ಯುದ್ಧ ಸ್ಮಾರಕ' ಕಾಮಗಾರಿ ಅಂತಿಮ ಹಂತ ತಲುಪಿದ್ದು, ಗಣರಾಜ್ಯೋತ್ಸವದ ವೇಳೆಗೆ ಯುದ್ಧ ಸ್ಮಾರಕ ಸಮರ್ಪಿಸುವ ಗುರಿಯೊಂದಿಗೆ ಸ್ಲ್ಯಾಬ್‌ಗಳಿಗೆ ಪಾಲಿಶ್ ಮಾಡುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ.

ಮೈಸೂರಲ್ಲಿ ಯುದ್ಧ ಸ್ಮಾರಕ ನಿರ್ಮಾಣಕ್ಕಾಗಿ 25 ವರ್ಷದ ಹೋರಾಟ ಸಾಕಾರಗೊಳ್ಳುವ ಕಾಲ ಸನ್ನಿಹಿತವಾಗಿದ್ದು, ದೇಶ ಕಾಯುವ ಯೋಧರ ಗೌರವಾರ್ಥ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಯುದ್ಧ ಸ್ಮಾರಕ ತಲೆ ಎತ್ತಲಿದೆ. ಕಳೆದ 2–3 ತಿಂಗಳಿಂದ ನೆನೆಗುದಿಗೆ ಬಿದ್ದಿದ್ದ ಕಾಮಗಾರಿ ಇಂದಿನಿಂದ ಮತ್ತೆ ಚುರುಕುಗೊಂಡಿದೆ.

ಸ್ಮಾರಕ ನಿರ್ಮಾಣಕ್ಕಾಗಿ ಕಳೆದ 6 ತಿಂಗಳ ಹಿಂದಷ್ಟೇ ವೃತ್ತಾಕಾರದ ಹಂತದೊಂದಿಗೆ ಬೇಸ್ಮೆಂಟ್ ನಿರ್ಮಿಸಲಾಗಿದ್ದು, ಅದರ ಮೇಲೆ ಬೃಹತ್ ಆಕಾರದ 6 ಸ್ಲ್ಯಾಬ್‌ಗಳನ್ನು ಜೋಡಣೆ ಮಾಡಲಾಗುತ್ತಿದೆ. ಈ ಹಿಂದೆಯೇ ಚಾಮರಾಜನಗರ ಜಿಲ್ಲೆಯಿಂದ ದಾನದ ರೂಪದಲ್ಲಿ ಪಡೆದ ಆರು ಬೃಹತ್ ಸ್ಲ್ಯಾಬ್‌ಗಳನ್ನು ಕೆತ್ತನೆ ಮಾಡಿ, ಉದ್ದೇಶಿತ ಆಕಾರ ನೀಡಲಾಗಿದೆ. ಆ ಸ್ಲ್ಯಾಬ್‌ಗಳನ್ನು ಈಗಾಗಲೇ ಮೊದಲ ಹಂತದಲ್ಲಿ ಪಾಲಿಶ್ ಮಾಡಿ, ಗೋಪುರದ ಮಾದರಿ ಸಿದ್ಧಪಡಿಸಲಾಗಿದೆ. ವಿವಿಧೆಡೆ ಕೆತ್ತನೆ ಮಾಡಲಾಗಿದ್ದ ಉತ್ಕೃಷ್ಟ ಶಿಲೆಯ ಬೃಹತ್ ಸ್ಲ್ಯಾಬ್‌ಗಳನ್ನು ಬೃಹತ್ ಕ್ರೇನ್ ಮೂಲಕ ಒಂದರ ಮೇಲೊಂದರಂತೆ ಜೋಡಣೆ ಮಾಡಲಾಗಿದೆ. ಅದಕ್ಕೆ ಅಂತಿಮ ಹಂತದ ಪಾಲಿಶ್ ಮಾಡಿ, ಬೇಸ್ಮೆಂಟ್ ಮೇಲೆ ಜೋಡಣೆ ಮಾಡಲಾಗುತ್ತದೆ.



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಸಮೀಪದ ಎನ್‌ಸಿಸಿ ಕವಾಯತು ಮೈದಾನದಲ್ಲಿ ಪಾಲಿಶ್ ಮಾಡಲು ಯುದ್ಧ ಸ್ಮಾರಕದ ಬೃಹತ್ ಗಾತ್ರದ ಸ್ಲ್ಯಾಬ್‌ಗಳನ್ನು ಕ್ರೇನ್ ಮೂಲಕ ಜೋಡಣೆ ಮಾಡುತ್ತಿರುವುದು.

15 ದಿನದೊಳಗೆ ಸ್ಲ್ಯಾಬ್‌ಗಳ ಪಾಲಿಶ್ ಕಾರ್ಯ ಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು, ಆ ನಂತರ ಮತ್ತೆ ಕ್ರಮಬದ್ಧವಾಗಿ ಬೇಸ್ಮೆಂಟ್ ಮೇಲೆ ಗೋಪುರದ ಮಾದರಿಯಲ್ಲಿ ಜೋಡಣೆ ಮಾಡಲಾಗುತ್ತದೆ. ನಂತರ ಸ್ಲ್ಯಾಬ್ ಕೆಳಗೆ ಹಾಗೂ ಸುತ್ತಲೂ ಪಾರಂಪರಿಕ ಸ್ಪರ್ಶ ನೀಡಲು ಉತ್ಕೃಷ್ಟವಾದ ಹಸಿರು ಕಲ್ಲನ್ನು ಜೋಡಣೆ ಮಾಡಲಾಗುತ್ತದೆ. ಬಳಿಕ ಸ್ಮಾರಕದ ಸ್ಲ್ಯಾಬ್‌ಗೆ ಅಂತಿಮ ಟಚ್ ನೀಡಿ, ಗೋಲ್ಡನ್ ಕಲರ್‌ನಲ್ಲಿ ಅಕ್ಷರ ಕೆತ್ತನೆ ಮಾಡಲಾಗುತ್ತದೆ.

ಸ್ಮಾರಕದಲ್ಲಿ: ಯುದ್ಧ ಸ್ಮಾರಕ ಪಾರಂಪರಿಕ ಶೈಲಿಯಲ್ಲಿಯೇ ನಿರ್ಮಾಣವಾಗಲಿದ್ದು, ಚೌಕಾಕಾರದಲ್ಲಿ ನಿರ್ಮಿಸಲಾಗುತ್ತದೆ. ಒಂದು ಭಾಗದಲ್ಲಿ ಮೂರು ಪಡೆಗಳ ಸಂಕೇತದೊಂದಿಗೆ ದ್ವಾರ ನಿರ್ಮಿಸಲಾಗುತ್ತದೆ. ನಂತರ ಉಳಿದ ಮೂರು ಬದಿಯಲ್ಲಿ ಭೂ ಸೇನೆ, ವಾಯು ಸೇನೆ, ನೌಕಾದಳದ ಮಹತ್ವ ಸಾರುವ ಯುದ್ಧ ಟ್ಯಾಂಕರ್‌ಗಳು, ಯುದ್ಧ ವಿಮಾನಗಳು, ನೌಕೆ, ಗನ್ ಸೇರಿದಂತೆ ಯುದ್ಧದಲ್ಲಿ ಬಳಸುವ ಪರಿಕರಗಳನ್ನು ಪ್ರದರ್ಶನಕ್ಕಿಡಲು ನಿರ್ಧರಿಸಲಾಗಿದ್ದು, ಇದಕ್ಕಾಗಿ ಬಳಸಲ್ಪಟ್ಟ ಯುದ್ಧ ಪರಿಕರ ನೀಡಲು ಸೇನೆ ಸಮ್ಮತಿ ಸೂಚಿಸಿದೆ. ಈ ಸಂಬಂಧ ನಿವೃತ್ತ ಸೇನಾಧಿಕಾರಿ, ಮಂಗಳೂರು ಪಾಲಿಕೆ ಆಯುಕ್ತ ಸಿ.ಎಲ್.ಆನಂದ್ ಅವರು ಈಗಾಗಲೇ ಪತ್ರ ವ್ಯವಹಾರ ನಡೆಸಿದ್ದು, ಸ್ಮಾರಕ ನಿರ್ಮಾಣ ಕಾರ್ಯ ಪೂರ್ಣಗೊಂಡ ಬಳಿಕ ಬಳಸಲ್ಪಟ್ಟ ಯುದ್ಧ ಟ್ಯಾಂಕರ್, ಗನ್ ಹಾಗೂ ಇನ್ನಿತರ ಯುದ್ಧ ಪರಿಕರಗಳು ಮೈಸೂರು ತಲುಪಲಿವೆ.


ಸ್ಮಾರಕ ನಿರ್ಮಾಣದ ಹಾದಿ: 2000ರಲ್ಲಿ ಯುದ್ಧ ಸ್ಮಾರಕ ನಿರ್ಮಾಣಕ್ಕೆ ಒತ್ತಾಯಿಸಿ ವೀಕೇರ್ ನಿವೃತ್ತ ಸೈನಿಕರ ಟ್ರಸ್ಟ್‌ನ ಎಂ.ಎನ್.ಸುಬ್ರಹ್ಮಣಿ ರಾಜ್ಯ ಸರ್ಕಾರ ಹಾಗೂ ಮೈಸೂರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದರು. 2010ರಲ್ಲಿ ಪುನಃ ಮನವಿ ಸಲ್ಲಿಸಿದಾಗ ಸ್ಥಳ ಆಯ್ಕೆ ಪ್ರಕ್ರಿಯೆ ಆರಂಭವಾಯ್ತು. ನಂತರ ಅದು ನೆನೆಗುದಿಗೆ ಬಿದ್ದಿತ್ತು. ಆದರೆ 2012ರಲ್ಲಿ ಮತ್ತೆ ಸ್ಮಾರಕ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಕ್ರಿಯೆ ಆರಂಭವಾಯಿತು. 2016ರಲ್ಲಿ ನಿವೃತ್ತ ಯೋಧರೂ ಆಗಿರುವ ಮೈಸೂರು ಉಪ ವಿಭಾಗಾಧಿಕಾರಿಯಾಗಿದ್ದ ಸಿ.ಎಲ್.ಆನಂದ್(ಹಾಲಿ ಮಂಗಳೂರು ಪಾಲಿಕೆ ಆಯುಕ್ತ) ಅವರು ಯುದ್ಧ ಸ್ಮಾರಕ ನಿರ್ಮಾಣಕ್ಕೆ ಅಗತ್ಯವಾದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ್ದು, ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರು.

ಜನವರಿ 26ರೊಳಗೆ ಪೂರ್ಣಗೊಳಿಸುವ ಗುರಿ

"ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಸಮೀಪದ ಎನ್‌ಸಿಸಿ ಪರೇಡ್ ಮೈದಾನದಲ್ಲಿ ನಿರ್ಮಿಸಲಾಗುತ್ತಿರುವ ಯುದ್ಧ ಸ್ಮಾರಕದ ಕಾಮಗಾರಿ ಜನವರಿ 26ರೊಳಗೆ ಪೂರ್ಣಗೊಳಿಸಿ, ಗಣರಾಜ್ಯೋತ್ಸವದ ದಿನ ಯುದ್ಧ ಸ್ಮಾರಕಕ್ಕೆ ನಮನ ಸಲ್ಲಿಸುವ ಗುರಿ ಹೊಂದಲಾಗಿದೆ. ಈಗಾಗಲೇ ಚಾಮರಾಜನಗರ ಹಾಗೂ ಹಾಸನದಿಂದ ದಾನವಾಗಿ ಪಡೆದಿರುವ ಕೋಟ್ಯಾಂತರ ರೂ. ಮೌಲ್ಯದ ಉತ್ಕೃಷ್ಟ ಶಿಲೆಗೆ ಸ್ಮಾರಕದ ರೂಪ ನೀಡಲಾಗಿದ್ದು, ಅಂತಿಮ ಹಂತದ ಪಾಲಿಶ್ ಕಾರ್ಯ ಆರಂಭವಾಗಿದೆ. ಶೀಘ್ರವೇ ಸ್ಮಾರಕದ ಫ್ಲಾಟ್‌ಫಾರಂ ಮೇಲೆ ಸ್ಲ್ಯಾಬ್‌ಗಳನ್ನು ಜೋಡಣೆ ಮಾಡುವ ಕಾರ್ಯವೂ ಪೂರ್ಣಗೊಳ್ಳಲಿದೆ.

–ಸಿ.ಎಲ್.ಆನಂದ್, ನಿವೃತ್ತ ಸೇನಾಧಿಕಾರಿ (ಮಂಗಳೂರು ಪಾಲಿಕೆ ಆಯುಕ್ತ)

ಎಕ್ಸ್‌ಪ್ರೆಸ್‌ವೇ ಡಿವೈಡರ್‌ಗೆ ಡಿಕ್ಕಿ ಹೊಡೆದು ಪಲ್ಟಿಯಾದ ಕಾರು; ಪ್ರಯಾಣಿಕರು ಪಾರು



ಎಕ್ಸ್‌ಪ್ರೆಸ್‌ವೇನಲ್ಲಿ ಕಾರು ಪಲ್ಟಿಯಾಗಿ ಬಿದ್ದಿರುವುದು.

ಶ್ರೀರಂಗಪಟ್ಟಣ, ಡಿ.13– ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಡಿವೈಡರ್‌ಗೆ ಡಿಕ್ಕಿ ಹೊಡೆದು, ಪಲ್ಟಿಯಾಗಿದ್ದು, ಅದೃಷ್ಟವಶಾತ್ ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ತಾಲೂಕಿನ ಗಣಂಗೂರು ಬಳಿಯ ಬೆಂಗಳೂರು –ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ನಡೆದಿದೆ.

ಬೆಂಗಳೂರಿನ ವಿಕ್ರಮ್ ಎಂಬುವವರು ತಮ್ಮ ಕುಟುಂಬ ಸದಸ್ಯರೊಂದಿಗೆ ಮೈಸೂರಿಗೆ ತೆರಳಿ ಬೆಂಗಳೂರಿಗೆ ಹಿಂತಿರುಗುತ್ತಿದ್ದ ವೇಳೆ ಈ ಘಟನೆ ಸಂಭವಿಸಿದೆ. ಕಾರಿನಲ್ಲಿ ವಿಕ್ರಮ್ ಹಾಗೂ ತಾಯಿ, ಹೆಂಡತಿ ಅಜ್ಜಿ, ಜೊತೆಗೆ 7 ರಿಂದ 8 ವರ್ಷದ ಮಗು ಇದ್ದದ್ದಾಗಿ ತಿಳಿದು ಬಂದಿದೆ. ತಾಲೂಕಿನ ಗಣಂಗೂರು ಬಳಿ ಆಗಮಿಸುತ್ತಿದ್ದಂತೆ ಚಾಲಕನ ನಿಯಂತ್ರಣ ತಪ್ಪಿ ಹೆದ್ದಾರಿಯಲ್ಲಿನ ಎಡಭಾಗದ ಡಿವೈಡರ್‌ಗೆ ಗುದ್ದಿದ ಪರಿಣಾಮ ಕಾರು ಪಲ್ಟಿಯಾಗಿ ಬಿದ್ದಿದೆ. ಘಟನೆಯಿಂದ ಕಾರು ಸಂಪೂರ್ಣ ವಾಗಿ ನಜ್ಜುಗುಜ್ಜಾಗಿದ್ದು, ಕಾರಿನಲ್ಲಿದ್ದ 5 ಮಂದಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ವೇಳೆ ಟ್ರಾಫಿಕ್ ಜಾಮ್ ಉಂಟಾಗಿ ವಾಹನ ಸಂಚಾರಕ್ಕೆ ತೊಂದರೆ ಯಾಗಿತ್ತು. ತಕ್ಷಣ ಹೆದ್ದಾರಿ ನಿರ್ವಹಣೆ ಯವರು ಸ್ಥಳಕ್ಕೆ ಆಗಮಿಸಿ, ಅಪಘಾತ ಗೊಂಡಿದ್ದ ವಾಹನ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಶ್ರೀರಂಗಪಟ್ಟಣ ಗ್ರಾಮಾಂತರ ಠಾಣಾ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನಾಳೆ ಗುರುಪೂರ್ಣಿಮಾ ಪೂಜೆ

ಪಾಂಡವಪುರ, ಡಿ.13– ತಾಲೂಕಿನ ದೊಡ್ಡಗೌಡನಕೊಪ್ಪಲು ಗ್ರಾಮದಲ್ಲಿರುವ ಶ್ರೀ ಕಾವೇರಿ ಸಾಯಿಧಾಮದಲ್ಲಿ ಗುರುಪೂರ್ಣಿಮೆ ಅಂಗವಾಗಿ ಡಿ.15ರ ಭಾನುವಾರ ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿವೆ. ಅಂದು ಬೆಳಗ್ಗೆ 7.30 ಗಂಟೆಗೆ ಶ್ರೀ ಸಾಯಿ ಬಾಬಾ ಮೂರ್ತಿಗೆ ಅಭಿಷೇಕ, ನಂತರ ಷೋಡಶ ಪೂಜಾ ಕಾರ್ಯಗಳು ನಡೆಯುತ್ತವೆ. ಅಲ್ಲದೆ ಬೆಳಗ್ಗೆ 10.30 ಗಂಟೆಗೆ ಸಾಮೂಹಿಕ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ ಆರಂಭಗೊಳ್ಳಲಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಜಯದೇವ್ (9449825051) ರನ್ನು ಸಂಪರ್ಕಿಸಲು ಕೋರಲಾಗಿದೆ.

ಕೋವಿಡ್–19 ವೇಳೆ ನಾಗಮಂಗಲ ತಾಲೂಕು ಕಚೇರಿಯಲ್ಲಿ 3 ಕೋಟಿಗೂ ಅಧಿಕ ಹಣ ದುರುಪಯೋಗ

ತಹಶೀಲ್ದಾರ್ ಸೇರಿ ಇತರರ ವಿರುದ್ಧ ಕ್ರಮಕ್ಕೆ ಜಿಲ್ಲಾಧಿಕಾರಿ ವರದಿ

ಮಂಡ್ಯ, ಡಿ.13–ನಾಗಮಂಗಲ ತಾಲೂಕು ಕಚೇರಿಯಲ್ಲಿ ಕೋವಿಡ್–19 ಮತ್ತು ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದಂತೆ 3 ಕೋಟಿಗೂ ಹೆಚ್ಚು ಹಣ ದುರುಪಯೋಗವಾಗಿದ್ದು, ತಾಲೂಕಿನ ಹಿಂದಿನ ತಹಸೀಲ್ದಾರ್ ಕುಂಞಿ ಅಹಮದ್ ಸೇರಿದಂತೆ ನಾಲ್ವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಮಂಡ್ಯ ಜಿಲ್ಲಾಧಿಕಾರಿ ಡಾ. ಕುಮಾರ್ ವರದಿ ಸಲ್ಲಿಸಿದ್ದಾರೆ.

ನಾಗಮಂಗಲ ತಾಲೂಕಿನಲ್ಲಿ ಕೋವಿಡ್–19 ಮತ್ತು ಪ್ರಕೃತಿ ವಿಕೋಪ ಸಂಬಂಧ 3 ಕೋಟಿಗೂ ಹೆಚ್ಚು ಹಣ ದುರುಪಯೋಗವಾಗಿದೆ ಎಂದು ಮಂಡ್ಯದ ಸಾಮಾಜಿಕ ಕಾರ್ಯಕರ್ತ ಕೆ.ಆರ್.ರವೀಂದ್ರ ಅವರು ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳ ಸೂಚನೆ ಮೇರೆಗೆ ಜಿಲ್ಲಾಧಿಕಾರಿಗಳು ನಾಲ್ವರನ್ನೊಳಗೊಂಡ ತನಿಖಾ ತಂಡವನ್ನು ನೇಮಿಸಿದ್ದರು.

ಈ ತನಿಖಾ ತಂಡ ಪರಿಶೀಲನೆ ನಡೆಸಿದ ವೇಳೆ ಪ್ರಕೃತಿ ವಿಕೋಪ ಶಾಖೆಯಿಂದ ಡಿ.ದೇವರಾಜು ಎಂಬುವವರಿಂದ 242 ವಾಹನಗಳನ್ನು ಬಾಡಿಗೆಗೆ ಪಡೆದು 5,08,200 ರೂಗಳನ್ನು ಪಾವತಿಸಲಾಗಿದೆ. ಆದರೆ ನಾಗಮಂಗಲ ತಾಲೂಕು ಆರೋಗ್ಯ ಅಧಿಕಾರಿಗಳು 40 ಲಸಿಕಾ ವಾಹನಗಳ ಮಾಲೀಕರಿಗೆ ಹಣ ಪಾವತಿಸುವಂತೆ ಕೋರಿರುವ ಪತ್ರ ಮಾತ್ರ ಲಭ್ಯವಿದ್ದು, ಉಳಿದಂತೆ 202 ವಾಹನಗಳ ವಿವರಗಳು ಲಭ್ಯವಿಲ್ಲ. ಡಿ.ದೇವರಾಜು, ಬಾಡಿಗೆ ವಾಹನಗಳ ಏಜೆಂಟ್ ಬದ್ರಿಕೊಪ್ಪಲು ಬಡಾವಣೆ ನಾಗಮಂಗಲ ತಾಲೂಕು ಎಂಬ ವಿಳಾಸದಿಂದ 22 ವಾಹನಗಳಿಗೆ ಬಾಡಿಗೆ ಪಾವತಿಸುವಂತೆ ತಹಸೀಲ್ದಾರರಿಗೆ ಮನವಿ ಸಲ್ಲಿಸಲಾಗಿತ್ತು. ಆದರೆ ಡಿ.ದೇವರಾಜು ಅವರ ಸ್ಥಳ ಪಿರಿಯಾಪಟ್ಟಣ ಎಂಬುದು ನಮೂದಾಗಿರುವುದೂ ಕಂಡು ಬಂದಿದೆ. ಅಲ್ಲದೆ ಈ ದೇವರಾಜು ಎಂಬುವರು ಕೋವಿಡ್ ಲಸಿಕಾ ವಾಹನಗಳನ್ನು ಸರಬರಾಜು ಮಾಡಿರುವ ಮಾಲೀಕರು ಎಂಬುದಕ್ಕೆ ಯಾವುದೇ ಮಾಹಿತಿ ಲಭ್ಯವಿಲ್ಲ. ಆದರೂ ಡಿ.ದೇವರಾಜು ಹೆಸರಿನಲ್ಲಿ 5,08,200 ರೂ. ಪಾವತಿಸಲಾಗಿದೆ ಎಂದು ತನಿಖಾ ತಂಡ ತಿಳಿಸಿದೆ.

ಮತ್ತೊಂದು ಪ್ರಕರಣದಲ್ಲಿ ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ಬಾಡಿಗೆ ಕರಾರು ವಾಹನಗಳಿಗೆ 5.40 ಲಕ್ಷ ರೂ.ಗಳನ್ನು ಪಾವತಿಸಲಾಗಿದೆ. ಪೂರ್ಣಿಮಾ, ಶಶಿಕಿರಣ್, ಹೆಚ್.ಎಂ.ಕೀರ್ತಿ, ಸಬೀನಾ, ವಿಜಯಕುಮಾರ್, ಕವಿತಾ ಎಂಬ ಹೆಸರಿನಲ್ಲಿ ತಲಾ 90 ಸಾವಿರ ರೂ. ಪಾವತಿಸಲಾಗಿದ್ದು, ಈ ವಾಹನಗಳನ್ನು ಉಪಯೋಗಿಸಿಕೊಂಡು ಹಣ ಪಾವತಿ ಮಾಡುವ ಸಂಬಂಧ ಯಾವುದೇ ಕೋರಿಕೆ ಪತ್ರ, ವ್ಯವಹಾರ ಮತ್ತು ದೃಢೀಕರಣಗಳು ಲಭ್ಯವಿರುವುದಿಲ್ಲ. ಆದರೂ 6 ಮಂದಿ ಖಾಸಗಿ ವ್ಯಕ್ತಿಗಳ ಹೆಸರಿನಲ್ಲಿ ಹಣ ಪಾವತಿಸಲಾಗಿದೆ.

ಎನ್.ಪಿ.ಮಹೇಶ್ ಎಂಬ ಹೆಸರಿಗೆ 3,16,800 ರೂ.ಗಳನ್ನು ಪಾವತಿಸಲಾಗಿದ್ದು, ಅವರಿಗೆ ಯಾವ ಬಾಬ್ತಿಗೆ ಹಣ ಪಾವತಿಸಲಾಗಿದೆ ಎಂಬುದಕ್ಕೆ ಪೂರಕ ದಾಖಲೆಗಳು ಇಲ್ಲ. ಅಲ್ಲದೇ ಕೋವಿಡ್–19 ಲಸಿಕಾ ವಾಹನಗಳ ಬಾಡಿಗೆ ಎಂದು ತಲಾ 30 ಸಾವಿರ ರೂ.ಗಳಂತೆ 6 ಮಂದಿ ಹೆಸರಿನಲ್ಲಿ ಒಟ್ಟು 1.80 ಲಕ್ಷ ರೂ. ಪಾವತಿಸಲಾಗಿದ್ದು, ಹಣ ಪಾವತಿ ಬಗ್ಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನಾಗಮಂಗಲ ಶಾಖೆ ವ್ಯವಸ್ಥಾಪಕರಿಗೆ ಬರೆದಿರುವ ಪತ್ರ ಮಾತ್ರ ಲಭ್ಯವಿದೆ. ಈ ಪ್ರಕರಣದಲ್ಲಿ ವಿಷಯ ನಿರ್ವಾಹಕರು ಹಾಗೂ ಶಾಖಾ ಮುಖ್ಯಸ್ಥರ ವಿವರಣೆಯಂತೆ ತಹಸೀಲ್ದಾರ್ ಒಬ್ಬರೇ ಸಹಿ ಮಾಡಿದ್ದಾರೆ. ಅಲ್ಲದೇ ಪ್ರಕೃತಿ ವಿಕೋಪ ವಿಷಯ ನಿರ್ವಾಹಕ ದರ್ಶನ್ ರಾವಣಿಕರ್ ಮತ್ತು ಪ್ರಕೃತಿ ವಿಕೋಪದ ಅಂದಿನ ಶಾಖಾ ಮುಖ್ಯಸ್ಥರಾದ ಪಿ.ಪ್ರಕಾಶ್ ಸಹಿ ಮಾಡದಿದ್ದರೂ ಅಂದಿನ ತಹಸೀಲ್ದಾರ್ ಕುಂಞಿ ಅಹಮದ್ ಮಾತ್ರ ಎಲ್ಲಾ ಕಂಡಿಕೆಗಳಿಗೂ ಅನುಮೋದನೆ ನೀಡಿರುವುದು ಕಚೇರಿಯ ದಾಖಲೆಗಳಿಂದ ಕಂಡು ಬಂದಿದೆ.

22,42,340 ರೂ.ಗಳು ವೆಚ್ಚವಾಗಿದ್ದರೂ ಅದರ ಬಗ್ಗೆ ಯಾವುದೇ ದಾಖಲೆಗಳೂ ಇಲ್ಲ. ಮಳೆ ಹಾನಿ ಸಂತ್ರಸ್ತರಾದ 105 ಫಲಾನುಭವಿಗಳಿಗೆ 80,62,069 ರೂ. ಪಾವತಿಸಲಾಗಿದೆಯಾದರೂ, ಸದರಿ ಹಣಕ್ಕೆ ಸಂಬಂಧಿಸಿದ ಚೆಕ್‌ಗಳನ್ನು ಪಡೆದಿರುವ ವ್ಯಕ್ತಿಗಳ ವಿವರವೇ ಲಭ್ಯವಿಲ್ಲ. ತಹಸೀಲ್ದಾರ್ ಕುಂಞಿ ಅಹಮದ್ ಅವರು 2022ರ ಮಾರ್ಚ್ 7ರಂದು ವರ್ಗಾವಣೆಯಾಗಿ ಕರ್ತವ್ಯದಿಂದ ಬಿಡುಗಡೆಗೊಂಡಿದ್ದರೂ, ನಂತರದ ದಿನಗಳಲ್ಲಿ ಅವರು ಚೆಕ್‌ಗಳಿಗೆ ಸಹಿ ಮಾಡಿದ್ದಾರೆ ಎಂಬುದು ತನಿಖಾ ತಂಡದ ಪರಿಶೀಲನಾ ವೇಳೆ ತಿಳಿದು ಬಂದಿದೆ.

ತಾಲೂಕು ಕಚೇರಿಯಲ್ಲಿ ಸೂಕ್ತ ರೀತಿ ಕಡತಗಳನ್ನು ಹಾಗೂ ದಾಖಲಾತಿಗಳನ್ನು ನಿರ್ವಹಿಸಿಲ್ಲ. ಅಂದಿನ ತಹಸೀಲ್ದಾರ್ ಕುಂಞಿ ಅಹಮದ್ ಅವರ ಅವಧಿಯಲ್ಲಿ ಪ್ರಕೃತಿ ವಿಕೋಪ ಹಾಗೂ ಕೋವಿಡ್–19ಕ್ಕೆ ಸಂಬಂಧಿಸಿದ ಅನುದಾನ ಬಳಕೆಯಲ್ಲಿ ಕಚೇರಿ ಟಿಪ್ಪಣಿಗಳ ನಿರ್ವಹಣೆ ಮತ್ತು ವೆಚ್ಚಕ್ಕೆ ಸಂಬಂಧಿಸಿದ ಕಡತ, ಕಾರ್ಯಾದೇಶಗಳು, ರಸೀದಿ, ಓಚರ್ ಮತ್ತು ಪೂರಕ ದಾಖಲೆಗಳನ್ನು ಸಂಬಂಧಿಸಿದ ವಿಷಯ ನಿರ್ವಾಹಕರು, ಶಾಖಾ ಮುಖ್ಯಸ್ಥರು ಸಮರ್ಪಕವಾಗಿ ಕರ್ತವ್ಯ ನಿರ್ವಹಿಸದೆ ಲೋಪವೆಸಗಿದ್ದಾರೆ.

ಪ್ರಕೃತಿ ವಿಕೋಪ ಮತ್ತು ಕೋವಿಡ್–19ಕ್ಕೆ ಸಂಬಂಧಿಸಿದಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ತೆರೆಯಲಾಗಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಹಣ ಪಾವತಿಯಾಗಿರುವುದು ಸ್ಪಷ್ಟವಾಗಿದೆ. ಆದರೆ ತಾಲೂಕು ಕಚೇರಿಯಲ್ಲಿ ಯಾವುದೇ ರೀತಿಯ ಕಡತ ಹಾಗೂ ದಾಖಲೆಗಳನ್ನು ನಿರ್ವಹಿಸದಿದ್ದು, ಹಣ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಹೀಗಾಗಿ ನಾಗಮಂಗಲ ತಾಲೂಕಿನ ಅಂದಿನ ತಹಸೀಲ್ದಾರ್ ಕುಂಞಿ ಅಹಮದ್ (ಹಾಲಿ ತುರುವೇಕೆರೆ ತಹಸೀಲ್ದಾರ್) ಹಿಂದಿನ ಶಿರಸ್ತೇದಾರ್‌ಗಳಾದ ಪ್ರಕಾಶ್, ಹರ್ಷ, ಹಿಂದಿನ ದ್ವಿತೀಯ ದರ್ಜೆ ಸಹಾಯಕಿ ಶ್ರೀಮತಿ ಉಮಾ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ಜಿಲ್ಲಾಧಿಕಾರಿಗಳು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಸಲ್ಲಿಸಿರುವ ವರದಿಯಲ್ಲಿ ತಿಳಿಸಿದ್ದಾರೆ.

ಎಂಎಲ್‌ಸಿ ದಿನೇಶ್ ಗೂಳಿಗೌಡರಿಂದ ಸಮ್ಮೇಳನದ ವೇದಿಕೆ ನಿರ್ಮಾಣದ ಸಿದ್ಧತೆ ಪರಿಶೀಲನೆ



ಎಂಎಲ್‌ಸಿ ದಿನೇಶ್ ಗೂಳಿಗೌಡ ಸಮ್ಮೇಳನದ ವೇದಿಕೆ ಸಿದ್ಧತೆ ಪರಿಶೀಲಿಸಿದರು.

ಮಂಡ್ಯ, ಡಿ.13– ಡಿ.20ರಿಂದ ಮೂರು ದಿನಗಳು ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ನಿರ್ಮಾಣವಾಗುತ್ತಿರುವ ಬೃಹತ್ ವೇದಿಕೆಯನ್ನು ವಿಧಾನ ಪರಿಷತ್ ಶಾಸಕ ಹಾಗೂ ಮಾಧ್ಯಮ ಸಮಿತಿ ಅಧ್ಯಕ್ಷ ದಿನೇಶ್ ಗೂಳಿಗೌಡ ಶುಕ್ರವಾರ ಪರಿಶೀಲಿಸಿದರು.

ನಗರದ ಹೊರವಲಯದ ಸಾಂಜೋ ಆಸ್ಪತ್ರೆ ಹಿಂಭಾಗದ ವಿಶಾಲವಾದ 60 ಎಕರೆ ಪ್ರದೇಶದಲ್ಲಿ ನಿರ್ಮಾಣವಾಗುತ್ತಿರುವ ಸಮ್ಮೇಳನದ ಮುಖ್ಯ ವೇದಿಕೆ, ಆಹಾರ, ಪುಸ್ತಕ ಸೇರಿದಂತೆ ಇನ್ನಿತರೆ ಮಳಿಗೆಗಳ ನಿರ್ಮಾಣದ ಸ್ಥಳಕ್ಕೆ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಸಿ. ತ್ಯಾಗರಾಜು ಹಾಗೂ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 3ನೇ ಬಾರಿಗೆ ಸಕ್ಕರೆ ಜಿಲ್ಲೆ ಮಂಡ್ಯ ನಗರದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ನಮ್ಮೆಲ್ಲರ ಹೆಮ್ಮೆ. ಸಮ್ಮೇಳನ ಕನ್ನಡದ ಹಬ್ಬ, ನಮ್ಮ ಮನೆಯ ಹಬ್ಬವಾಗಿದ್ದು, ಕುಟುಂಬದವರೊಂದಿಗೆ ಜಿಲ್ಲೆಯ ಜನತೆ ಒಟ್ಟಾಗಿ ನುಡಿ ಜಾತ್ರೆಯನ್ನು ಆಚರಿಸಬೇಕಾಗಿದೆ ಎಂದರು. ನುಡಿ ಜಾತ್ರೆಗೆ ರಾಜ್ಯ, ಹೊರ ರಾಜ್ಯ ಹಾಗೂ ದೇಶ–ವಿದೇಶಗಳಿಂದ ಕನ್ನಡಾಭಿಮಾನಿಗಳು, ಸಾಹಿತಿಗಳು ಆಗಮಿಸುತ್ತಿದ್ದು, ನೋಂದಣಿಯಾಗಿರುವವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ಕ್ರಮ ವಹಿಸಲಾಗಿದೆ. ಅಲ್ಲದೆ, ಸಮ್ಮೇಳನಕ್ಕೆ ಆಗಮಿಸುವ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿದ್ದು, ಸಂಬಂಧಿಸಿದ ಸಮಿತಿಯ ಅಧ್ಯಕ್ಷರು ಹಾಗೂ ಅಧಿಕಾರಿಗಳು ಸಕಲ ರೀತಿಯ ವ್ಯವಸ್ಥೆಯಲ್ಲಿ ತೊಡಗಿದ್ದಾರೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಭೂ ಸೇನಾ ನಿಗಮದ ಮುಖ್ಯ ಇಂಜಿನಿಯರ್ ಸೋಮಶೇಖರ್, ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್ ಹರ್ಷ, ಎಇಇ ಸತೀಶ್, ವೇದಿಕೆ ನಿರ್ಮಾಣ ಹೊಣೆ ಹೊತ್ತಿರುವ ಷರೀಫ್, ಗೋಪಾಲಕೃಷ್ಣ ಇತರರಿದ್ದರು.

ಸೇವಾ ಕಾರ್ಯಗಳೊಂದಿಗೆ ಮೈಷುಗರ್ ಅಧ್ಯಕ್ಷ ಗಂಗಾಧರ್ ಹುಟ್ಟುಹಬ್ಬ



ಮಮತೆಯ ಮಡಿಲು ಅನ್ನ ದಾಸೋಹ ಕೇಂದ್ರದಲ್ಲಿ ಬಾಣಂತಿಯರಿಗೆ ಉಪಾಹಾರ ವಿತರಿಸಲಾಯಿತು.

ಮಂಡ್ಯ, ಡಿ.13– ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹಾಗೂ ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಅವರ 55ನೇ ವರ್ಷದ ಹುಟ್ಟುಹಬ್ಬವನ್ನು ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಉಪಾಧ್ಯಕ್ಷ ಚಂದಗಾಲು ವಿಜಯ್‌ಕುಮಾರ್ ಅವರ ನೇತೃತ್ವದಲ್ಲಿ ವಿವಿಧ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಅರ್ಥಗರ್ಭಿತವಾಗಿ ಕಾಂಗ್ರೆಸ್ ಕಾರ್ಯಕರ್ತರು ಹುಟ್ಟುಹಬ್ಬ ಆಚರಿಸಿದರು.

ನಗರದ ಗಣಪತಿ ದೇವಾಲಯದಲ್ಲಿ ಸಿ.ಡಿ.ಗಂಗಾಧರ್ ಅವರ ಹೆಸರಿನಲ್ಲಿ ವಿಶೇಷ ಪೂಜಾ ಕಾರ್ಯಕ್ರಮ, ಜಿಲ್ಲಾ ಸ್ತ್ರೀಯ ಒಳ ರೋಗಿಗಳಿಗೆ ಹಣ್ಣು ವಿತರಣೆ, ಮಮತೆಯ ಮಡಿಲು ಅನ್ನ ದಾಸೋಹ ಕೇಂದ್ರದಲ್ಲಿ ಬಾಣಂತಿಯರಿಗೆ ಗಂಜಿ ವಿತರಣೆ ಹಾಗೂ ಪ್ರೇರಣಾ ಅಂಧ ಮಕ್ಕಳ ಶಾಲೆಯ ಮಕ್ಕಳಿಗೆ ಊಟ ವಿತರಣೆ ಮಾಡುವ ಮೂಲಕ ಹುಟ್ಟುಹಬ್ಬ ಆಚರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್ ಮಾತನಾಡಿ, ಸಿ.ಡಿ.ಗಂಗಾಧರ್ ಅವರಿಗೆ ರಾಜಕೀಯ ರಂಗದಲ್ಲಿ ಇನ್ನು ಹೆಚ್ಚಿನ ಅವಕಾಶ ಸಿಗಲಿ ಎಂದು ಅವರ ಹುಟ್ಟುಹಬ್ಬದ ಶುಭಾಶಯಗಳನ್ನು ತಿಳಿಸಿದರು.

ಕೆಪಿಸಿಸಿ ಮಾಜಿ ಸದಸ್ಯ ಕೆ.ಹೆಚ್. ನಾಗರಾಜು ಮಾತನಾಡಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಅವರಿಗೆ ರಾಜಕೀಯ ರಂಗದಲ್ಲಿ ಹೆಚ್ಚಿನ ಶ್ರೇಯಸ್ಸು ಪಡೆದು ಉನ್ನತ ಸ್ಥಾನ ಅಲಂಕರಿಸಲಿ ಎಂದು ಹೇಳಿದರು. ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷ ಶ್ರೀಧರ್ ಮಾತನಾಡಿ, ಸಿ.ಡಿ.ಗಂಗಾಧರ್ ಅವರಿಗೆ ದೇವರು ಸಕಲ ಸೌಭಾಗ್ಯ ಕೊಟ್ಟು ಅವರ ಇಷ್ಟಾರ್ಥ ಸಿದ್ಧಿಯಾಗಲಿ, ಅವರಿಗೆ ಇನ್ನೂ ಹೆಚ್ಚಿನ ರಾಜಕೀಯ ಸ್ಥಾನ ಸಿಗಲಿ ಎಂದರು.

ಗಂಗಾಧರ್ ರವರ ಹುಟ್ಟುಹಬ್ಬದ ಅಂಗವಾಗಿ ಮಮತೆಯ ಮಡಿಲು ಅನ್ನದಾಸೋಹ ಕೇಂದ್ರದಲ್ಲಿ ರೋಗಿಗಳು ಅವರ ಸಂಬಂಧಿಕರಿಗೆ ಗಂಜಿ ಹಾಗೂ ಉಪಹಾರ ವಿತರಣೆ, ಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ಹಾಗೂ ಪ್ರೇರಣಾ ಅಂಧರ ಶಾಲೆಯ ಮಕ್ಕಳಿಗೆ ಆಹಾರ ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಿದರು.

ಈ ಸಂದರ್ಭದಲ್ಲಿ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಚಿನಕುರಳಿ ರಮೇಶ್,ಗ್ಯಾರಂಟಿ ಯೋಜನೆಯ ಸದಸ್ಯ ಹೆಚ್.ಎಂ ಉದಯ ಕುಮಾರ್, ಜಿಲ್ಲಾ ಹಿಂದುಳಿದ ಕಾಂಗ್ರೆಸ್ ಅಧ್ಯಕ್ಷ ಸಾತನೂರು ಕೃಷ್ಣ,ಸೋನಿಯಾ ಬ್ರಿಗೇಡ್ ಜಿಲ್ಲಾಧ್ಯಕ್ಷೆ ವೀಣಾ ಶಂಕರ್, ಬೇಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುವರ್ಣಾವತಿ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್, ಕಾಂಗ್ರೆಸ್ ಮುಖಂಡರಾದ ಕೊತ್ತತ್ತಿರಾಜು, ಸುಂಡಹಳ್ಳಿ ಮಂಜುನಾಥ್ , ಸಿ.ಎಂ. ದ್ಯಾವಪ್ಪ, ಹಿಟ್ಟನಹಳ್ಳಿ ಕೊಪ್ಪಲು ನಾಗರಾಜು, ಎಲ್. ಸಂದೇಶ್, ರಾಜಣ್ಣ, ಕಲ್ಲಹಳ್ಳಿ ನಾಗೇಂದ್ರ, ಪ್ರಕಾಶ್, ಚನ್ನಪ್ಪ, ಶಶಿಕಲಾ, ಜಯಲಕ್ಷ್ಮಿ, ಅನುರಾಧ ಸೇರಿದಂತೆ ಇತರರು ಹಾಜರಿದ್ದರು.

ಹಿಂದುಳಿದ ವರ್ಗಗಳ ನಿಗಮಗಳಿಗೆ ಅನುದಾನ ಬಿಡುಗಡೆಗೆ ಒತ್ತಾಯಿಸಿ ಬಿಜೆಪಿ ಪ್ರತಿಭಟನೆ



ಅನುದಾನ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಮಂಡ್ಯದಲ್ಲಿ ಪ್ರತಿಭಟನೆ ನಡೆಸಿದರು.

ಮಂಡ್ಯ, ಡಿ.13– ಹಿಂದುಳಿದ ವರ್ಗಗಳ ನಿಗಮಗಳಿಗೆ ಅನುದಾನ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಭಾರತೀಯ ಜನತಾ ಪಾರ್ಟಿಯ ಹಿಂದುಳಿದ ವರ್ಗಗಳ ಮೋರ್ಚಾ ಕಾರ್ಯಕರ್ತರು ಮಂಡ್ಯದಲ್ಲಿ ಪ್ರತಿಭಟನೆ ನಡೆಸಿದರು. ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪಕ್ಷದ ಕಾರ್ಯಕರ್ತರು ಪ್ರತಿ ಭಟನೆ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ಸಿಎಂ ಸಿದ್ದರಾಮಯ್ಯರಿಗೆ ಮನವಿ ಪತ್ರ ರವಾನಿಸಿದರು.

ಬಳಿಕ ಮಾತನಾಡಿದ ರಾಜ್ಯ ಕಾರ್ಯಕಾರಿಣಿ ಸದಸ್ಯ ನರಸಿಂಹಮೂರ್ತಿಗೌಡ, ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ 1,000 ಕೋಟಿ ಅನುದಾನವನ್ನು ಡಿ.ದೇವರಾಜ ಅರಸು ನಿಗಮ, ಒಕ್ಕಲಿಗರ ಅಭಿವೃದ್ಧಿ ನಿಗಮ, ಮರಾಠ, ವಿಶ್ವಕರ್ಮ, ವೀರಶೈವ ಲಿಂಗಾಯತ, ನಿಜಶರಣ ಅಂಬಿಗರ ಚೌಡಯ್ಯ, ಸವಿತಾ ಸಮಾಜ, ಅಲೆಮಾರಿ, ಅರೆ ಅಲೆಮಾರಿ, ಮಡಿವಾಳ ಮಾಚಿದೇವ ಕಾಡುಗೊಲ್ಲ ಅಭಿವೃದ್ಧಿ ನಿಗಮಗಳಿಗೆ ಬಿಡುಗಡೆ ಮಾಡಿತ್ತು, ಆದರೆ ಕಾಂಗ್ರೆಸ್ ಸರ್ಕಾರ ಬಜೆಟ್ ನಲ್ಲಿ ಹಿಂದುಳಿದ ವರ್ಗಗಳಿಗೆ 1600 ಕೋಟಿ ರೂ ಘೋಷಣೆ ಮಾಡಿ ಕೇವಲ 57.04 ಕೋಟಿ ವೆಚ್ಚ ಮಾಡಿ ಮೋಸ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿಂದುಳಿದ ವರ್ಗಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಶೈಕ್ಷಣಿಕ ಸಾಲಕ್ಕೆ 6065 ಅರ್ಜಿಗಳು ಸಲ್ಲಿಕೆಯಾಗಿದ್ದರೂ ನಯಾ ಪೈಸೆ ಬಿಡುಗಡೆ ಮಾಡಿಲ್ಲ, ಅತ್ಯಂತ ಹಿಂದುಳಿದ ಸಮುದಾಯಗಳಾದ ಹೂಗಾರ, ಕಂಬಾರ, ಗಾಣಿಗ, ಹಡಪದ, ಈಡಿಗ, ಮಾಳಿ ಸಮುದಾಯದ ನಿಗಮಗಳಿಗೂ ಸಹ ಹಣ ನೀಡಿಲ್ಲ ಎಂದು ಆರೋಪಿಸಿದರು.

ಹಿಂದುಳಿದ ವರ್ಗ ನಿಗಮಗಳಿಗೆ ಬಜೆಟ್ ನಲ್ಲಿ ಘೋಷಣೆ ಮಾಡಿರುವ 1600 ಕೋಟಿ ರೂಗಳನ್ನು ಕೂಡಲೇ ಬಿಡುಗಡೆ ಮಾಡಿ ಹಿಂದುಳಿದವರ ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಪಕ್ಷದ ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾಧ್ಯಕ್ಷ ನರಸಿಂಹಾಚಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದ್, ವಾಸು, ಸಿ.ಟಿ. ಮಂಜುನಾಥ್, ಸಿದ್ದರಾಜು ಗೌಡ, ಮಹಿಳಾಧ್ಯಕ್ಷ ಮಂಗಳ, ಮಲ್ಲಿಕಾರ್ಜುನ್, ಲಕ್ಷ್ಮಣಗೌಡ, ಧರಣಿ, ಕಲ್ಲಳ್ಳಿ ರಾಜು, ಪ್ರಸನ್ನ, ಚಂದ್ರು ಭಾಗವಹಿಸಿದ್ದರು.

ಕೆಆರ್‌ಎಸ್‌ನಲ್ಲಿ ಬೇಕರಿ ಮಾಲೀಕನ ಕೊಂದ ನಾಲ್ವರ ಬಂಧನ

ಶ್ರೀರಂಗಪಟ್ಟಣ, ಡಿ.13– ಹಾಡಹಗಲೇ ವ್ಯಕ್ತಿಯ ಬರ್ಬರ ಹತ್ಯೆ ಮಾಡಿದ್ದ ನಾಲ್ವರು ಆರೋಪಿಗಳನ್ನು ಕೆಆರ್‌ಎಸ್ ಪೊಲೀಸರು ಶುಕ್ರವಾರ ಬೆಳಗ್ಗಿನ ಜಾವ ಬಂಧಿಸಿದ್ದಾರೆ.

ಗುರುವಾರ ಸಂಜೆ ಚೇತನ್ ಎಂಬಾತನನ್ನು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ್ದ ಆರೋಪಿಗಳಾದ ಸಂತೋಷ್, ಮನೋಜ್, ಯಶವಂತ್ ಮತ್ತು ನಾಗೇಶ್ ಎಂಬುವ ವರನ್ನ ಬಂಧಿಸಿ ಹತ್ಯೆಗೆ ಬಳಸಿದ್ದ ಮಾರಕಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

ಘಟನೆ ಹಿನ್ನಲೆ: ಕೊಲೆ ಪ್ರಮುಖ ಆರೋಪಿ ಸಂತೋಷ್ ಎಂಬುವವನ ಪ್ರೇಯಸಿಯನ್ನು ಕೊಲೆಯಾದ ಚೇತನ್ ಸಂಬಂಧ ಹೊಂದಿದ್ದೇ ಕೊಲೆಗೆ ಕಾರಣ ಎಂದು ತಿಳಿದು ಬಂದಿದೆ ಚೇತನ್ ಹಾಗೂ ಪ್ರೇಯಸಿ ಜೊತೆಗಿರುವ ಚಿತ್ರಗಳನ್ನು ಸಂತೋಷ್ ಮೊಬೈಲ್‌ನಲ್ಲಿ ನೋಡಿ, ಕೋಪಗೊಂಡು ತನ್ನ ಪ್ರೇಯಸಿಯ ಸಹೋದರ ಮನೋಜ್, ಸ್ನೇಹಿತರಾದ ನಾಗೇಶ್, ಯಶವಂತ್ ಜೊತೆಗೂಡಿ ಚೇತನ್ ಕೊಲೆ ಮಾಡಲು ಪ್ಲಾನ್ ರೂಪಿಸಿದ್ದ, ಇದರಂತೆ ಗುರುವಾರ ಬೆಳಗ್ಗೆಯಿಂದ ಮದ್ಯಪಾನ ಮಾಡಿ, ನಂತರ ಸಂಜೆ ವೇಳೆ ಚೇತನ್ ಬೇಕರಿಗೆ ನುಗ್ಗಿ ದಾಂಧಲೆ ನಡೆಸಿ, ಹೊರ ಹೋಗಿದ್ದ ಚೇತನ್ ಬೇಕರಿ ಬಳಿ ವಾಪಸ್ಸಾದ ತಕ್ಷಣ ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿ ಸುಜಕಿ ಸ್ಕೂಟರನಲ್ಲಿ ನಾಲ್ವರು ಪರಾರಿಯಾಗಿದ್ದರು.

ಹತ್ಯೆಯಾದ ಚೇತನ್ ಪತ್ನಿ ಕಾವ್ಯ ನೀಡಿದ ದೂರಿನ ಮೇರೆಗೆ ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿಗಳನ್ನು ಬಂದಿಸಿ, ಶ್ರೀರಂಗಪಟ್ಟಣ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿದೆ. ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ ಹಾಗೂ ಡಿ.ವೈ.ಎಸ್.ಪಿ ಮುರಳಿ ಸ್ಥಳ ಪರಿಶೀಲನೆ ನಡೆಸಿ ತನಿಖೆಗೆ ಮಾರ್ಗದರ್ಶನ ನೀಡಿದ್ದರು. ಕೆಆರ್‌ಎಸ್ ಪೊಲೀಸ್ ಠಾಣೆ ವೃತ್ತ ನಿರೀಕ್ಷ ಪುನೀತ್ ನೇತೃತ್ವದಲ್ಲಿ, ಪಿ.ಎಸ್ಐ ರಮೇಶ್ ಕರ್ಕಿಕಟ್ಟೆ, ಎ.ಎಸ್ಐ ದೇವರಾಜು, ನಟರಾಜು, ಪೊಲೀಸ್ ಸಿಬ್ಬಂದಿಗಳಾದ ಸತೀಶ್, ಶ್ರೀಧರ್, ಯದುರಾಜ್, ರವೀಶ್, ಪ್ರಭುಸ್ವಾಮಿ, ಅನಿಲ್ ಚಾಲಕ ಜವರಲಾಲ್ ನೆಹರು ಭಾಗವಹಿಸಿದ್ದರು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಡಿ.20ರಂದು ಪ್ರಧಾನ ವೇದಿಕೆಯ ಕಾರ್ಯಕ್ರಮಗಳ ವಿವರ

ಮಂಡ್ಯ, ಡಿ.13– 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಡಿಸೆಂಬರ್ 20, 21, 22 ರಂದು ಒಟ್ಟು 3 ದಿನಗಳ ಕಾಲ ನಡೆಯಲಿದ್ದು, ಡಿಸೆಂಬರ್ 20 ರಂದು ನಡೆಯುವ ಕಾರ್ಯಕ್ರಮದ ವಿವರ ಇಂತಿದೆ.

ಧ್ವಜಾರೋಹಣ ಕಾರ್ಯಕ್ರಮ

ಡಿಸೆಂಬರ್ 20 ರಂದು ಬೆಳಿಗ್ಗೆ 6 ರಿಂದ 6.30 ಗಂಟೆಯವರೆಗೆ ಧ್ವಜಾರೋಹಣ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಸಮ್ಮೇಳನ ಸ್ವಾಗತ ಸಮಿತಿಯ ಅಧ್ಯಕ್ಷ ಎನ್. ಚಲುವರಾಯಸ್ವಾಮಿ ಅವರು ರಾಷ್ಟ್ರ ಧ್ವಜಾ ರೋಹಣವನ್ನು, ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಹಾಗೂ ಸಮ್ಮೇಳನ ಸ್ವಾಗತ ಸಮಿತಿಯ ಗೌರವ ಕಾರ್ಯಾಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ ಪರಿಷತ್ತಿನ ಧ್ವಜಾರೋಹಣವನ್ನು ಹಾಗೂ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಂಚಾಲಕಿ ಮೀರಾ ಶಿವಲಿಂಗಯ್ಯ ಅವರು ನಾಡ ಧ್ವಜಾರೋಹಣವನ್ನು ನೆರವೇರಿಸಲಿದ್ದಾರೆ.

ಮೆರವಣಿಗೆ

ಬೆಳಿಗ್ಗೆ 7 ಗಂಟೆಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆಯು ಮಂಡ್ಯ ನಗರದ ಸರ್ ಎಂ ವಿಶ್ವೇಶ್ವರಯ್ಯ ಪ್ರತಿಮೆ ಮುಂಭಾಗದಿಂದ ಪ್ರಾರಂಭವಾಗಿ ಮೈಸೂರು – ಬೆಂಗಳೂರು ರಸ್ತೆ ಮಾರ್ಗವಾಗಿ ಸ್ಯಾಂಜೋ ಆಸ್ಪತ್ರೆ ಹಾಗೂ ಹೋಟೆಲ್ ಅಮರಾವತಿ ಹಿಂಭಾಗ ಸಮ್ಮೇಳನದ ವೇದಿಕೆಗೆ ತಲುಪುವುದು.

ಮೈಸೂರು ಅರಮನೆಯ ಶ್ರೀಮನ್ಮಹಾರಾಣಿ ಮಾತೃಶ್ರೀ ಶ್ರೀಮತಿ ಪ್ರಮೋದಾದೇವಿ ಅವರು ಮೆರವಣಿಗೆ ಉದ್ಘಾಟನೆ ಮಾಡಲಿದ್ದಾರೆ.

ಉದ್ಘಾಟನಾ ಸಮಾರಂಭ

ಬೆಳಗ್ಗೆ 10.30 ಗಂಟೆಗೆ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭವು ಪ್ರಧಾನ ವೇದಿಕೆಯಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ.

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ, ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಡಾ. ದೊಡ್ಡರಂಗೇಗೌಡ, ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಸಮ್ಮೇಳನ ಸ್ವಾಗತ ಸಮಿತಿಯ ಅಧ್ಯಕ್ಷ ಎನ್. ಚಲುವರಾಯಸ್ವಾಮಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹಾಗೂ ಸಮ್ಮೇಳನ ಸ್ವಾಗತ ಸಮಿತಿಯ ಗೌರವ ಕಾರ್ಯಾಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ ಅವರು ಕಾರ್ಯಕ್ರಮದಲ್ಲಿ ಘನ ಉಪಸ್ಥಿತಿ ವಹಿಸಲಿದ್ದಾರೆ.

ವಿವಿಧ ಕೇಂದ್ರಗಳ ಉದ್ಘಾಟನೆ

ವೇದಿಕೆಗಳ ಉದ್ಘಾಟನೆ: ಸಮಾಜ ಕಲ್ಯಾಣ ಸಚಿವ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹಾದೇವಪ್ಪ, ಮಹಾಮಂಟಪ ಉದ್ಘಾಟನೆ: ಮಳವಳ್ಳಿ ಶಾಸಕ ಪಿ.ಎಂ. ನರೇಂದ್ರಸ್ವಾಮಿ, ಮಹಾದ್ವಾರಗಳ ಉದ್ಘಾಟನೆ: ಮಂಡ್ಯ ಶಾಸಕ ಪಿ.ರವಿಕುಮಾರ್, ಪ್ರವೇಶ ದ್ವಾರಗಳ ಉದ್ಘಾಟನೆ: ಶ್ರೀರಂಗಪಟ್ಟಣ ಶಾಸಕ ಎ.ಬಿ. ರಮೇಶ ಬಂಡಿಸಿದ್ದೇಗೌಡ, ಪುಸ್ತಕ ಮಳಿಗೆ ಉದ್ಘಾಟನೆ: ಕೆ.ಆರ್.ಪೇಟೆ ಶಾಸಕ ಹೆಚ್.ಟಿ. ಮಂಜು, ವಾಣಿಜ್ಯ ಮಳಿಗೆ ಉದ್ಘಾಟನೆ: ವಿಧಾನಪರಿಷತ್ ಶಾಸಕ ಕೆ.ವಿವೇಕಾನಂದ, ವಸ್ತು ಪ್ರದರ್ಶನ ಮಳಿಗೆ ಉದ್ಘಾಟನೆ: ವಿಧಾನ ಪರಿಷತ್ ಶಾಸಕ ಮಧು ಜಿ ಮಾದೇಗೌಡ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಪುಸ್ತಕ ಬಿಡುಗಡೆ: ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಡಾ. ಚಂದ್ರಶೇಖರ ಕಂಬಾರ, ಮಂಡ್ಯ ಜಿಲ್ಲಾ ಪುಸ್ತಕಗಳ ಬಿಡುಗಡೆ: ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಸ್ಮರಣ ಸಂಚಿಕೆ ಬಿಡುಗಡೆ: ಕೆ.ಎಂ. ಉದಯ, ವಿಶೇಷ ಅಂಚೆ ಲಕೋಟೆ ಬಿಡುಗಡೆ: ವಿಧಾನ ಸಭೆ ಸರ್ಕಾರಿ ಮುಖ್ಯ ಸಚೇತಕ ಅಶೋಕ್ ಮಹದೇವಪ್ಪ ಪಟ್ಟಣ್ ಹಾಗೂ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಹನುಮಗೌಡ ಪಾಟೀಲ ಅವರುಗಳು ನೆರವೇರಿಸಲಿದ್ದಾರೆ.



ಕಾರ್ಯಕ್ರಮದ ಉದ್ಘಾಟಕರ ಶುಭನುಡಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೆರವೇರಿಸಲಿದ್ದಾರೆ. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್ ಫರೀದ್, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ ತಂಗಡಗಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರುಗಳು ಶುಭ ನುಡಿಯನ್ನಾಡಲಿದ್ದಾರೆ. ಹಿರಿಯ ಸಾಹಿತಿ ಡಾ. ದೊಡ್ಡರಂಗೇಗೌಡ ಅವರು ನಿಕಟಪೂರ್ವ ಸಮ್ಮೇಳನಾ ಧ್ಯಕ್ಷರಿಂದ ಧ್ವಜ ಹಸ್ತಾಂತರ ಮತ್ತು ಶುಭನುಡಿಯನ್ನು ನೆರವೇರಿಸಲಿದ್ದಾರೆ.

ಸಮ್ಮೇಳನಾಧ್ಯಕ್ಷರ ಭಾಷಣವನ್ನು ನಾಡೋಜ ಡಾ ಗೊ.ರು. ಚನ್ನಬಸಪ್ಪ ಅವರು ಮಾಡಲಿದ್ದಾರೆ.

ದಿವ್ಯ ಸಾನ್ನಿಧ್ಯ – ಶುಭನುಡಿ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ,

ಸಾಧಕರಿಗೆ ಸನ್ಮಾನ

ಸಂಜೆ 6 ರಿಂದ 7.30 ಗಂಟೆಯವರೆಗೆ ಸಾಹಿತ್ಯ ಸಮ್ಮೇಳನದ ಅಂಗವಾಗಿ ಹಾಗೂ ಸುವರ್ಣ ಮಹೋತ್ಸವದ ನೆನಪಿನಲ್ಲಿ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಸುತ್ತೂರು ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯವನ್ನು ವಹಿಸಲಿದ್ದಾರೆ. ಗದಗ ಡಂಬಳದ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಶ್ರೀ ಮನ್ನಿರಂಜನ ಜಗದ್ಗುರು ಡಾ. ತೋಂಟದ ಸಿದ್ದರಾಮ ಮಹಾಸ್ವಾಮಿಗಳು ಸನ್ನಿಧಾನ ವಹಿಸಲಿದ್ದಾರೆ. ಆಂಧ್ರಪ್ರದೇಶ ರಾಜ್ಯಪಾಲರು ನ್ಯಾಯಮೂರ್ತಿ ಎಸ್ ಅಬ್ದುಲ್ ನಜೀರ್ ಅವರು ಸನ್ಮಾನಿಸಲಿದ್ದಾರೆ.

ಗೋಷ್ಠಿಗಳು

ಮಧ್ಯಾಹ್ನ 2 ರಿಂದ 3.30 ಗಂಟೆಯವರೆಗೆ ಪ್ರಧಾನ ವೇದಿಕೆಯಲ್ಲಿ ಮಂಡ್ಯ ಜಿಲ್ಲೆಗೆ ಕೊಡುಗೆ ನೀಡಿದ ಮಹನೀಯರು ವಿಷಯದ ಬಗ್ಗೆ ಗೋಷ್ಠಿ ನಡೆಯಲಿದೆ. ಖ್ಯಾತ ಇತಿಹಾಸ ತಜ್ಞ ಪ್ರೊ. ಎಂ. ವಿ. ಶ್ರೀನಿವಾಸ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ವಿಷಯ ಮಂಡನೆ: ರಾಜಮಾತೆ ಕೆಂಪನಂಜಮ್ಮಣ್ಣಿ: ಮಾದರಿ ಮೈಸೂರಿನ ತಾಯಿಬೇರು – ಡಾ. ಗಜಾನನ ಶರ್ಮಾ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ : ಮೈಸೂರು ಪ್ರಾಂತ್ಯಕ್ಕೆ ನೀಡಿದ ಕೊಡುಗೆ – ಚಿನ್ನಸ್ವಾಮಿ ಸೋಸಲೆ, ಸರ್ ಮಿರ್ಜಾ ಇಸ್ಮಾಯಿಲ್ : ಮೈಸೂರು ಪ್ರಾಂತ್ಯದ ಅಭಿವೃದ್ಧಿ – ಡಾ ನಯಿಂಉರ್ ರಹಮಾನ್ ಅವರು ವಿಷಯ ಮಂಡನೆ ಮಾಡಲಿದ್ದಾರೆ. ಕಾರ್ಯಕ್ರಮದ ನಿರ್ವಹಣೆ – ಸುಜಾತ ಕೃಷ್ಣ, ಸ್ವಾಗತ – ಹರ್ಷ ಪಣ್ಣೆದೊಡ್ಡಿ, ನಿರೂಪಣೆ – ಡಾ. ಕೃಷ್ಣೇಗೌಡ ಹುಸ್ಕೂರು, ವಂದನಾರ್ಪಣೆ – ಅಪ್ಪಾಜಪ್ಪ ಬಿ ಎಂ ಅವರು ಮಾಡಲಿದ್ದಾರೆ.

ಗೋಷ್ಠಿ–2: ಮಧ್ಯಾಹ್ನ 3.30 ರಿಂದ 4.30 ರವರೆಗೆ ಕವಿ ಗೋಷ್ಠಿ – 1 ದೃಷ್ಟಿಚೇತನರ ವಿಶೇಷ ಕವಿಗೋಷ್ಠಿ ನಡೆಯಲಿದೆ. ಪ್ರಾಧ್ಯಾಪಕರು ಡಾ. ಶಿವರಾಜ ಶಾಸ್ತ್ರಿ ಹೇರೂರ ಅವರು ಅಧ್ಯಕ್ಷತೆ ವಹಿಸಲಿದ್ದು, ಸಾಹಿತಿಗಳಾದ ಮುದಿಗೆರೆ ರಮೇಶ್ ಕುಮಾರ್ ಅವರು ಆಶಯ ನುಡಿಯನ್ನು ನೆರವೇರಿಸಲಿದ್ದಾರೆ. ಕವಿಗಳಾದ ಬಾಪು ಖಾಡೆ, ಹರೀಶ್ ಸಿ, ಹೇಮಂತ ಕುಮಾರ್, ಜಯನಂದಾ ಟೋಪುಗೋಳು, ರಮಾ ಫಣಿಭಟ್ ಗೋಪಿ, ಸೋಮಶೇಖರ್ ಬಳೆಗಾರ್, ಶಿವಸ್ವಾಮಿ ಚೀನಕೇರ, ಟಿ. ಎಂ. ತೋಟಯ್ಯ, ಡಾ. ಕೃಷ್ಣ ಹೊಂಬಾಳ, ಡಾ. ಆನಂದ್ ಇಂದೂರಾ ಅವರು ಗೋಷ್ಠಿ ನಡೆಸಲಿದ್ದಾರೆ.

ಗೋಷ್ಠಿ–3: ಸಂಜೆ 4.30 ರಿಂದ 6 ಗಂಟೆಯವರೆಗೆ ಕವಿ ಗೋಷ್ಠಿ – 2 ಮಹಿಳಾ ವಿಶೇಷ ಗೋಷ್ಠಿ ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಕವಯಿತ್ರಿ ಸವಿತಾ ನಾಗಭೂಷಣ ಅವರು ವಹಿಸಲಿದ್ದಾರೆ. ಹಿರಿಯ ಕವಯಿತ್ರಿ ಡಾ. ಕೆ.ಎನ್.ಲಾವಣ್ಯಪ್ರಭಾ ಅವರು ಆಶಯ ನುಡಿಯನ್ನಾಡಲಿದ್ದಾರೆ. ಕವಯಿತ್ರಿಗಳಾದ ಡಾ. ಶೃತಿ ಬಿ. ಆರ್., ಸಾವಿತ್ರಿ ಮುಜುಂದಾರ್, ನೂತನ್ ದೋಶೆಟ್ಟಿ, ಲಲಿತಾ ಕೆ. ಹೊಸಪ್ಯಾಟಿ, ವಾಸಂತಿ ಅಂಬಲಪಾಡಿ, ಡಾ. ಸಿ. ಸುಮರಾಣಿ ಶಂಭು, ಡಾ. ಫ್ಲೇವಿಯಾ ಕ್ಯಾಸ್ಟಲಿನೋ, ಗೀತಾ ಮಕ್ಕಿಮನೆ, ಇಂದಿರಾ ಜಾನಕಿ (ಹವ್ಯಕ ಕನ್ನಡ), ಜ್ಯೋತಿ ಕಡಕೋಳ, ಲಕ್ಷ್ಮೀ ವಿ. ಭಟ್, ಡಾ. ನಿಕೇತನಾ (ತುಳು ಭಾಷೆ), ಅಭಿಜ್ಞಾ ಪಿ.ಎಮ್. ಗೌಡ, ಅನುರಾಧಾ ಆನಂದ್, ವಸು ವತ್ಸಲೆ ಅವರುಗಳು ಮಹಿಳಾ ಕವಿ ಗೋಷ್ಠಿ ನಡೆಸಿಕೊಡಲಿದ್ದಾರೆ.

ಗೊಮ್ಮಟಗಿರಿ ಗೊಮ್ಮಟೇಶ್ವರನಿಗೆ ವರ್ಣರಂಜಿತ ಮಹಾಮಸ್ತಕಾಭಿಷೇಕಕ್ಕೆ ಚಾಲನೆ

- ಮೂರು ದಿನಗಳ ಜಾತ್ರಾ ಮಹೋತ್ಸವಕ್ಕೆ ಚಾಲನೆ
- ಮೇಘಾಲಯದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಭಾಗಿ



ಹುಣಸೂರು ತಾಲೂಕಿನ ಬೆಟ್ಟದೂರಿನ ಗೊಮ್ಮಟಗಿರಿಯ ವೈರಾಗ್ಯ ಮೂರ್ತಿ ಗೊಮ್ಮಟೇಶ್ವರನಿಗೆ ಶುಕ್ರವಾರ ಮಹಾಮಸ್ತಕಾಭಿಷೇಕ ವಿಜೃಂಭಣೆಯಿಂದ ನೆರವೇರಿತು. ಈ ಸಂದರ್ಭದಲ್ಲಿ ಮೇಘಾಲಯದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕನಕಗಿರಿಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಇನ್ನಿತರರನ್ನು ಕಾಣಬಹುದು.



ಗೊಮ್ಮಟೇಶ್ವರ ಮೂರ್ತಿಗೆ ಹರಿಶಿನ, ಕುಂಕುಮ, ಹಾಲಿನಿಂದ ಅಭಿಷೇಕ ಮಾಡುತ್ತಿರುವುದು. (ಚಿತ್ರ: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್)

ಗೊಮ್ಮಟಗಿರಿ, ಡಿ.13(ಎಂಟಿವೈ)- ಹುಣಸೂರು ತಾಲೂಕಿನ ಗೊಮ್ಮಟಗಿರಿಯ ಶ್ರೀ ಗೊಮ್ಮಟೇಶ್ವರ ಮೂರ್ತಿಗೆ ಅಪಾರ ಸಂಖ್ಯೆ ಭಕ್ತರ ಸಮ್ಮುಖದಲ್ಲಿ 75ನೇ ವರ್ಷದ ಮಹಾಮಸ್ತಕಾಭಿಷೇಕ ಹಾಗೂ ಮೂರು ದಿನಗಳ ಜಾತ್ರಾ ಮಹೋತ್ಸವ ಅದ್ಧೂರಿಯಾಗಿ ಆರಂಭವಾಯಿತು.

ಶ್ರೀ ಗೊಮ್ಮಟಗಿರಿ ಕ್ಷೇತ್ರ ಸೇವಾ ಸಮಿತಿ ವತಿಯಿಂದ ಆಯೋಜಿಸಿದ್ದ ಮಹಾ ಮಸ್ತಕಾಭಿಷೇಕ ಹಾಗೂ ಜಾತ್ರಾ ಮಹೋತ್ಸವ ಇಂದಿನಿಂದ ಡಿ.15ರವರೆಗೆ ನಡೆಯಲಿದ್ದು, ಮೈಸೂರು, ಬೆಂಗಳೂರು, ಚಾಮರಾಜನಗರ, ಮಂಡ್ಯ, ಹಾಸನ, ಶ್ರವಣಬೆಳಗೊಳ ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಅಪಾರ ಸಂಖ್ಯೆಯಲ್ಲಿ ಜೈನ ಬಾಂಧವರು ಆಗಮಿಸಿ ಶಾಂತ ಹಾಗೂ ವೈರಾಗ್ಯ ಮೂರ್ತಿಗೆ ಜೈಕಾರ ಹಾಕಿ ಭಕ್ತಿಭಾವದಿಂದ ನಮಿಸಿದರು.

ಗೊಮ್ಮಟಗಿರಿ ಗೊಮ್ಮಟೇಶ್ವರ ಮೂರ್ತಿಗೆ ಪ್ರತಿವರ್ಷ ಒಂದು ದಿನ ಮಾತ್ರ ಮಹಾಭಿಷೇಕ ನಡೆಸಲಾಗುತ್ತಿತ್ತು. ಈ ಬಾರಿ 75ನೇ ವರ್ಷದ ಸಂಭ್ರಮಾಚರಣೆಯ ಹಿನ್ನೆಲೆಯಲ್ಲಿ ಮಹಾಮಸ್ತಕಾಭಿಷೇಕದ ಅಮೃತ ಮಹೋತ್ಸವವನ್ನು ಮೂರು ದಿನಗಳ ಕಾಲ ವಿಜೃಂಭಣೆಯಿಂದ ನಡೆಸಲು ಗೊಮ್ಮಟಗಿರಿ ಸೇವಾ ಸಮಿತಿ ನಿರ್ಧರಿಸಿದ್ದು, ಅದಕ್ಕಾಗಿ ಸಿದ್ಧತೆ ಮಾಡಿಕೊಂಡಿದೆ. ಈ ಹಿನ್ನೆಲೆಯಲ್ಲಿ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಕ್ಷೇತ್ರ ಕನಕಗಿರಿಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಹೊಂಬುಜ ಕ್ಷೇತ್ರದ ಸ್ವಸ್ತಿಶ್ರೀ ಡಾ. ದೇವೇಂದ್ರ ಕೀರ್ತಿ ಭಟ್ಟಾರಕ ಸ್ವಾಮೀಜಿ, ಶ್ರವಣಬೆಳಗೊಳದ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಸ್ವಾಮೀಜಿಗಳ ಸಾನಿಧ್ಯದಲ್ಲಿ ನಡೆದ ಮಸ್ತಕಾಭಿಷೇಕದ ಮೊದಲ ದಿನ ಧಾರ್ಮಿಕ ಕಾರ್ಯದಲ್ಲಿ ಅಪಾರ ಸಂಖ್ಯೆ ಭಕ್ತರು ಪಾಲ್ಗೊಂಡರು.

ಮಸ್ತಕಾಭಿಷೇಕದ ಹಿನ್ನೆಲೆಯಲ್ಲಿ ಬೆಳಿಗ್ಗೆ 10.30ಕ್ಕೆ ಕನಕಗಿರಿಯ ಅರ್ಹದ್ದಾಸರ ಸಭಾ ಮಂಟಪದಲ್ಲಿ ಆವರಣದಲ್ಲಿ ಸುವರ್ಣ ಕಳಸದ ಹರಾಜು ಪ್ರಕ್ರಿಯೆ ನಡೆಯಿತು. ಭಕ್ತರು 108 ಕಳಸಗಳನ್ನು ವಿವಿಧ ಮೊತ್ತಕ್ಕೆ ಖರೀದಿಸಿದರು. ಬಳಿಕ ಹರಾಜಾದ 108 ಕಳಸದ ನೀರಿನಿಂದ ಮಧ್ಯಾಹ್ನ 12.30 ಗಂಟೆಯಿಂದ ಗೊಮ್ಮಟೇಶ್ವರನಿಗೆ ಅಭಿಷೇಕ ಆರಂಭಿಸಲಾಯಿತು.

ಜೈನ ಸಂಪ್ರದಾಯ ಹಾಗೂ ವಿವಿಧ ಮಂತ್ರಗಳ ಪಠಣ ಮತ್ತು ಜಯಘೋಷಗಳೊಂದಿಗೆ ಮಸ್ತಕಾಭಿಷೇಕ ನೆರವೇರಿತು. ಕಳಸಗಳ ನೀರಿನಿಂದ ಅಭಿಷೇಕ ಮಾಡಿದ ನಂತರ, ಗೊಮ್ಮಟೇಶ್ವರ ಮೂರ್ತಿಗೆ ಎಳನೀರು, ಕಬ್ಬಿನ ಹಾಲಿನ ಅಭಿಷೇಕ, ಕ್ಷೀರಾಭಿಷೇಕ, ಕಲ್ಕಚೂರ್ಣ, ಅರಿಶಿನ, ಕುಂಕುಮ, ಕಷಾಯ, ಚಂದನ, ನಾಲ್ಕು ಬಗೆಯ ಚತುಷ್ಕೋನ, ಅಷ್ಟಗಂಧ, ಶ್ರೀಗಂಧ, ಕೇಸರಿ, ಭಸ್ಮ ಸೇರಿದಂತೆ ವಿವಿಧ ದ್ರವ್ಯಗಳಿಂದ ಮಹಾಮಸ್ತಕಾಭಿಷೇಕ ನೆರವೇರಿಸಲಾಯಿತು. ಬಳಿಕ ಪುಷ್ಪಾರ್ಚನೆ, ಪುಷ್ಪವೃಷ್ಟಿ, ಪೂರ್ಣಕುಂಭ ಜಲಾಭಿಷೇಕ ನೆರವೇರಿಸಿದ ನಂತರ ದೃಷ್ಟಿ ತೆಗೆದು ಮಹಾಮಂಗಳಾರತಿ ಮಾಡಲಾಯಿತು.

ಕಳೆ ಕಟ್ಟಿದ ಜಾತ್ರಾ ಮಹೋತ್ಸವ: ಗೊಮ್ಮಟಗಿರಿಯ ಗೊಮ್ಮಟೇಶ್ವರನಿಗೆ ಪ್ರತಿ ವರ್ಷ ನಡೆಯುವ ಮಸ್ತಕಾಭಿಷೇಕ ಗೊಮ್ಮಟಗಿರಿಯ ಸುತ್ತಲಿನ ಗ್ರಾಮಗಳ ಜನರಿಗೆ ಜಾತ್ರೆಯಾಗಿ ಪರಿಣಮಿಸಿದೆ. ಮೈಸೂರು, ಬೆಂಗಳೂರು, ಹಾಸನ, ಚಾಮರಾಜನಗರ, ಮಂಡ್ಯ ಸೇರಿದಂತೆ ಇನ್ನಿತರೆಡೆಗಳಲ್ಲಿ ನೆಲೆಸಿರುವ ಜೈನ ಸಮುದಾಯದವರು ಮಸ್ತಕಾಭಿಷೇಕದಲ್ಲಿ ಸಕ್ರಿಯರಾಗಿ ಪಾಲ್ಗೊಳ್ಳಲಿದ್ದಾರೆ. ಸುತ್ತಮುತ್ತಲಿನ ಗ್ರಾಮಸ್ಥರು ಗೊಮ್ಮಟಗಿರಿಗೆ ಕುಟುಂಬದ ಸದಸ್ಯರೊಂದಿಗೆ ಆಗಮಿಸಿ ಬಾಹುಬಲಿ ದರ್ಶನ ಪಡೆದು ಪೂಜೆ ಸಲ್ಲಿಸುವ ಸಂಪ್ರದಾಯ ಅನುಸರಿಸುತ್ತಿದ್ದಾರೆ.

ಈ ಬಾರಿ ಮಹಾಮಸ್ತಕಾಭಿಷೇಕ ಮೂರು ದಿನ ನಡೆಯುವುದರಿಂದ ಸಾವಿರಾರು ಜನರು ಗೊಮ್ಮಟಗಿರಿಗೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಆಟಿಕೆ ಮಾರಾಟ, ಸಿಹಿ ತಿಂಡಿ ಮಾರಾಟ, ವಿವಿಧ ವಸ್ತುಗಳ ಮಾರಾಟ ಮಳಿಗೆಗಳು, ಐಸ್‌ಕ್ರೀಮ್ ಪಾರ್ಲರ್‌ಗಳು, ಕಬ್ಬಿನ ಹಾಲಿನ ಮಾರಾಟ ಕೇಂದ್ರ, ನಂದಿನಿ ಐಸ್‌ಕ್ರೀಮ್, ಕಡಲೆಪುರಿ, ಸಿಹಿ ತಿನಿಸು ಸೇರಿದಂತೆ ವಿವಿಧ ಮಳಿಗೆಗಳು, ಮಕ್ಕಳ ಆಟಿಕೆಗಳ ಕೇಂದ್ರಗಳು ತಲೆ ಎತ್ತಿವೆ. ಇದರಿಂದ ಗೊಮ್ಮಟಗಿರಿಯಲ್ಲಿ ಜಾತ್ರಾ ವಾತಾವರಣ ನಿರ್ಮಾಣವಾಗಿದ್ದು, ಮೈಸೂರು, ಕೆಆರ್‌ಎಸ್ ಸೇರಿದಂತೆ ವಿವಿಧೆಡೆಯಿಂದ ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿದೆ. ಬಿಳಿಕೆರೆ ಪೊಲೀಸರು ಸೂಕ್ತ ಬಂದೋಬಸ್ತ್ ಏರ್ಪಡಿಸಿದ್ದಾರೆ.

ಡಿ.14 ಮತ್ತು 15ರಂದು ಗೊಮ್ಮಟೇಶ್ವರ ಮೂರ್ತಿಗೆ ಮಹಾಮಸ್ತಕಾಭಿಷೇಕ ನೆರವೇರಲಿದ್ದು, ಭಾನುವಾರ ವಿವಿಧೆಡೆಯಿಂದ ದಿಗಂಬರ ಸಮುದಾಯ ಅಪಾರ ಸಂಖ್ಯೆಯ ಭಕ್ತರು ಆಗಮಿಸಲಿದ್ದಾರೆ. ಭಾನುವಾರ ನಡೆಯುವ ಧಾರ್ಮಿಕ ಕಾರ್ಯ ಹಾಗೂ ಮಸ್ತಕಾಭಿಷೇಕದ ಮೂಲಕ ಈ ಸಾಲಿನ ಮೂರು ದಿನಗಳ ಮಹಾಮಸ್ತಕಾಭಿಷೇಕಕ್ಕೆ ತೆರೆ ಬೀಳಲಿದೆ.

ಬಾಹುಬಲಿ ಸನ್ಮಾರ್ಗ ಸೂಚಿಸುವ ದಿವ್ಯ ಚೇತನ



ಗೊಮ್ಮಟಗಿರಿ, ಡಿ.13(ಎಂಟಿವೈ)- ಬಾಹುಬಲಿ ನಮ್ಮ ಪಾಲಿಗೆ ದೈವಿ ಸ್ವರೂಪ, ಪ್ರೇರಣಾ ಶಕ್ತಿ ಮಾತ್ರವಲ್ಲದೆ, ನಾವು ಮಾಡುವ ಕೆಲಸದಲ್ಲಿ ಸನ್ಮಾರ್ಗ ಸೂಚಿಸುವ ದಿವ್ಯ ಚೇತನ ಎಂದು ಮೇಘಾಲಯ ರಾಜ್ಯಪಾಲ ಸಿ.ಹೆಚ್. ವಿಜಯಶಂಕರ್ ಅಭಿಪ್ರಾಯಪಟ್ಟಿದ್ದಾರೆ.

ಹುಣಸೂರು ತಾಲೂಕಿನ ಗೊಮ್ಮಟಗಿರಿಯಲ್ಲಿ ನಡೆದ ಬಾಹುಬಲಿಯ 75ನೇ ವರ್ಷದ ಮಹಾಮಸ್ತಕಾಭಿಷೇಕ ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ, ಭರತ ಭೂಮಿಯನ್ನು ತಪೋಭೂಮಿಯಾಗಿ, ದೈವತ್ವದ ಭೂಮಿಯಾಗಿ ಪರಿವರ್ತಿಸಿದ ಎಲ್ಲಾ ಶರಣರನ್ನು ನಾವು ಸ್ಮರಿಸಬೇಕಾಗಿದೆ. ಜಿತೇಂದ್ರಿಯಗಳು(ಇಂದ್ರಿಯ) ಮೇಲೆ ಯಾರು ಜಯ ಸಾಧಿಸಿದ್ದಾರೋ ಅವರನ್ನು ಜೈನರು ಎನ್ನುತ್ತಾರೆ. ಮೈಸೂರು ಭಾಗದಲ್ಲಿರುವ ನಾಮಧಾರಿಗೌಡರ ಮೂಲ ಜೈನ ಧರ್ಮವೇ ಆಗಿದೆ. ಶುದ್ಧ ಸಸ್ಯಾಹಾರಿಗಳಾಗಿರುವ ನಾಮಧಾರಿಗೌಡರು ಜೈನರಂತೆ ಸಂಪ್ರದಾಯ ಆಚರಿಸುತ್ತಿರುವುದನ್ನು ಕಾಣಬಹುದು ಎಂದರು.

ಅಹಿಂಸೆ, ಶುದ್ಧ ಪ್ರಕೃತಿ ಪ್ರಿಯ, ಪರಿಸರ ಪ್ರಿಯರ ಕೀರ್ತಿ ಯಶಸ್ಸು ಜೈನ ಧರ್ಮದಲ್ಲಿ ಕಾಣಬಹುದು. ಸಂಜೆ 6 ಗಂಟೆ ಮೇಲೆ ಪ್ರಾಣಿ, ಪಕ್ಷಿಗಳು ತಮ್ಮ ಚಟುವಟಿಕೆ ನಿಲ್ಲಿಸುತ್ತವೆ. ಯುದ್ಧ ಕಾಲದಲ್ಲೂ ರಾಜರು 6 ಗಂಟೆ ನಂತರ ಶಸ್ತ್ರಾಸ್ತ್ರ ಪ್ರಯೋಗ ಮಾಡುತ್ತಿರಲಿಲ್ಲ. ಸೂರ್ಯಾಸ್ತವಾಗುತ್ತಿದ್ದಂತೆ ಯುದ್ಧ ನಿಲ್ಲುತ್ತಿತ್ತು. ಪ್ರಕೃತಿ ಧರ್ಮವನ್ನು ಪಾಲನೆ ಮಾಡಲಾಗುತಿತ್ತು. ಅದರಂತೆ ಜೈನ ಧರ್ಮಿಯರು ಸೂರ್ಯಾಸ್ತದ ನಂತರ ನೀರನ್ನು ಕುಡಿಯಲ್ಲ. ಪ್ರಕೃತಿ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ನಾನು ಮೂಲತಃ ಹುಣಸೂರು ತಾಲೂಕಿಗೆ ಸೇರಿದವನು. ಬಾಲ್ಯದಲ್ಲಿ ಗೊಮ್ಮಟಗಿರಿಗೆ ಬಂದು ಹೋಗುತ್ತಿದ್ದೆ. ಈ ಕ್ಷೇತ್ರದೊಂದಿಗೆ ಭಾವನಾತ್ಮಕವಾದ ಸಂಬಂಧವಿದೆ. 2011ರಲ್ಲಿ ಅರಣ್ಯ ಸಚಿವನಾಗಿದ್ದಾಗ ಮಸ್ತಕಾಭಿಷೇಕ ಕಾರ್ಯಕ್ರಮಕ್ಕೆ ಬಂದಿದ್ದೆ. ಇದೀಗ ರಾಜ್ಯಪಾಲನಾಗಿ ಬಂದಿದ್ದೇನೆ. ಬಾಹುಬಲಿ ಅಧಿಕಾರ ತ್ಯಾಗ ಮಾಡಿರಬಹುದು. ಆದರೆ ತನ್ನನ್ನು ನಂಬಿದವರಿಗೆ ಸಮಾಜ, ದೇಶದ ಒಳಿತಿಗಾಗಿ ಕೆಲಸ ಮಾಡುವ ಎಂದು ಶಕ್ತಿಯನ್ನು ತುಂಬುತ್ತಾರೆ ಎಂದು ಹೇಳಿದರು.

ಇದೆ ವೇಳೆ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಮೈಸೂರಿಗೆ ಅನತಿ ದೂರದಲ್ಲಿರುವ ಗೊಮ್ಮಟಗಿರಿ ಕ್ಷೇತ್ರ ಪವಿತ್ರ ಕ್ಷೇತ್ರವೂ ಆಗಿದೆ. ನಿಸರ್ಗದ ರಮಣೀಯ ಕ್ಷೇತ್ರವಾಗಿರುವ ಗೊಮ್ಮಟಗಿರಿಯಲ್ಲಿ ಬಾಹುಬಲಿ ಬಳಿ ಪ್ರಕೃತಿ ಬಿಟ್ಟು ಬೇರಾವುದು ಇಲ್ಲ. ಈ ಕ್ಷೇತ್ರದಲ್ಲಿ ಯಾವುದೇ ಮನೆಗಳಿಲ್ಲದಿರುವುದು ವಿಶೇಷ. ಗೊಮ್ಮಟಗಿರಿಯನ್ನು ಶ್ರವಣಬೆಟ್ಟ ಎಂತಲೂ ಕರೆಯುತ್ತಾರೆ. ಚಲಿಸಲು ಸಿದ್ಧವಾಗಿರುವ ರಥದಂತೆ ಈ ಗುಡ್ಡ ಕಾಣುತ್ತದೆ. ಬಾಹುಬಲಿ ಎಲ್ಲವನ್ನೂ ತನ್ನ ಅಣ್ಣ ಭರತನಿಗೆ ವಹಿಸಿ ದೀಕ್ಷೆ ಪಡೆದದ್ದು ಸಾಮಾನ್ಯ ಸಂಗತಿಯಲ್ಲ ಎಂದು ಅಭಿಪ್ರಾಯಪಟ್ಟರು.

ಮೈಸೂರು ಜೈಲಿನಲ್ಲಿ 'ಮನರಂಜನೆಯಿಂದ- ಮನಪರಿವರ್ತನೆ' ಕಾರ್ಯಕ್ರಮ

ಖೈದಿಗಳಿಗೆ ಕನ್ನಡ ಗೀತೆಗಳ ರಸದೌತಣ



ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಇಂದು 'ಮನರಂಜನೆಯಿಂದ-ಮನ ಪರಿವರ್ತನೆ' ಎಂಬ ಭಾವಪೂರ್ಣ ಕನ್ನಡ ಗೀತೆಗಳ ರಸಮಂಜರಿ ಕಾರ್ಯ ಹಮ್ಮಿಕೊಳ್ಳಲಾಯಿತು.

ಮೈಸೂರು, ಡಿ. 13(ಆರ್‌ಕೆ)- ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಇಂದು 'ಮನರಂಜನೆಯಿಂದ-ಮನ ಪರಿವರ್ತನೆ' ಎಂಬ ಭಾವಪೂರ್ಣ ಕನ್ನಡ ಗೀತೆಗಳ ರಸಮಂಜರಿ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕೇಂದ್ರ ಕಾರಾಗೃಹದ ಆಶ್ರಯದಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮವನ್ನು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಎನ್. ಬೆಟ್ಟೇಗೌಡ ನೇತೃತ್ವದ ಗಾನ ತಂಡದ ಗಾಯಕರು ಹಾಗೂ ಜೈಲು ಖೈದಿಗಳು ಕನ್ನಡ ಗೀತೆಗಳನ್ನು ಹಾಡಿ ಸಂಗೀತ ರಸದೌತಣ ನೀಡಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕಾರಾಗೃಹದ ಮುಖ್ಯ ಅಧೀಕ್ಷಕ ಪಿ.ಎಸ್. ರಮೇಶ, ಜಾಕೀರ್ ಹುಸೇನ್, ಡಾ. ವೈ.ಡಿ. ರಾಜಣ್ಣ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಡೈರಿ ವೆಂಕಟೇಶ್, ಎಸಿ ಮಂಜುನಾಥ್, ಪ್ರಶಾಂತ್ ಆರ್ಯ, ರಧಿವುಲ್ಲಾ ಖಾನ್ ಇತರರು ಭಾಗವಹಿಸಿದ್ದರು.

ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗ

ಡಿ.27ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮ



ಮೈಸೂರು, ಡಿ.13(ಎಸ್‌ಪಿಎನ್)- ಹನುಮ ಜಯಂತಿ ಮಹೋತ್ಸವ ಪ್ರಯುಕ್ತ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಮೂಹ ದೇವಾಲಯಗಳು ವತಿಯಿಂದ ಇಂದಿನಿಂದ (ಶುಕ್ರವಾರ) ಡಿ.27ರವರೆಗೆ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕರ್ನಾಟಕ ಪೊಲೀಸ್ ಬ್ಯಾಂಡ್ ಕಲಾವಿದರು ಶುಕ್ರವಾರ ನಡೆಸಿಕೊಟ್ಟ 'ವಾದ್ಯ ಸಂಗೀತ' ಪ್ರೇಕ್ಷಕರ ಮನಸೆಳೆಯಿತು.

ನವರಾಗ ಮಾಲಿಕಾ ವಾದ್ಯಸಂಗೀತದೊಂದಿಗೆ ಆರಂಭವಾಗಿ, ಜಯಚಾಮರಾಜ ಒಡೆಯರ್ ರಚಿತ ಶ್ರೀ ಮಹಾಗಣಪತಿಮ್ ಭಜೆ ಹಮ್, ಮೈಸೂರು ವಾಸುದೇವಾಚಾರ್ಯರ ರಚಿತ ಶ್ರೀ ಚಾಮುಂಡೇಶ್ವರಿ ಪಾಲಯಮಾಮ್, ಮುತ್ತುಸ್ವಾಮಿ ದೀಕ್ಷಿತ ರಚನೆಗಳಾದ ಶ್ರೀ ಗುರುಗುಹ ಪಾಲಯಾಶು ಮಾಮ್, ಸರಸಿಜನಾಭ ಸೋದರಿ ಶಂಕರಿ ಪಾಹಿಮಾಮ್, ಸ್ವಾತಿ ತಿರುನಾಳ್ ಮಹಾರಾಜರ ರಚನೆಯ 'ಕೃಪಯಾ ಪಾಲಯ ಶೌರೇ', ಖ್ಯಾತ ಗಾಯಕಿ ಲತಾ ಮಂಗೇಶ್ವರ್ ಹಾಡಿರುವ ದೇಶಭಕ್ತಿಯಾದ 'ಹೇ ಮೇರೇ ವತನ್ ಕೀ ಲೋಗೋ', 'ಹರೇಕೃಷ್ಣಾ ಮುಕುಂದ ಮುರಾರೆ', ವಾದಿರಾಜಾರು ರಚಿತ 'ಯಷ್ಟು ಸಾಹಸವಂತ ನೀನೇ ಬಲವಂತ ಗೀತೆ ಹಾಗೂ ಶ್ರೀ ಪುರಂದರದಾಸ ರಚಿತ ಭಾಗ್ಯದ ಲಕ್ಷ್ಮೀ ಬಾರಮ್ಮ ಗೀತೆ ಮೂಲಕ ಸಂಪನ್ನಗೊಂಡಿತು.

ಕರ್ನಾಟಕ ಪೊಲೀಸ್ ಬ್ಯಾಂಡ್ ವಿದ್ವಾನ್ ಆರ್.ದಾಸಪ್ಪ ನೇತೃತ್ವದಲ್ಲಿ ಇತರೆ ಕಲಾವಿದರು ಅಮೋಘವಾಗಿ ನುಡಿಸಿ ಕಾರ್ಯಕ್ರಮಕ್ಕೆ ಮೆರಗು ತಂದರು. ವಯಲಿನ್‌ನಲ್ಲಿ ವಿದ್ವಾನ್ ಮಂಜು, ವಿದ್ವಾನ್ ಶಾಂತಕುಮಾರ್, ವಿದ್ವಾನ್ ತ್ಯಾಗರಾಜನ್, ವಿದ್ವಾನ್ ಮಧುಸೂದನ್, ವಿದ್ವಾನ್ ಯಶಸ್ವಿ ಮತ್ತು ವೀಣೆಯಲ್ಲಿ ವಿದ್ವಾನ್ ರಮೇಶ್, ಕ್ಲಾರಿನೆಟ್ ವಾದ್ಯದಲ್ಲಿ ವಿದ್ವಾನ್ ಸತೀಶ್, ವಿದ್ವಾನ್ ಶಾಂತರಾಜು, ವಿದ್ವಾನ್ ಸುನಿಲ್. ಕಾರ್ನೆಟ್ ವಾದ್ಯದಲ್ಲಿ ವಿದ್ವಾನ್ ಶಿವಕುಮಾರ್. ಕೊಳಲಿನಲ್ಲಿ ವಿದ್ವಾನ್ ಪದ್ಮನಾಭ ಹಾಗೂ ಶಹನಾಯ್ ವಾದ್ಯದಲ್ಲಿ ವಿದ್ವಾನ್ ಚಂದ್ರಕುಮಾರ್, ಸ್ಯಾಕ್ಸೋಫೋನ್ ವಾದ್ಯದಲ್ಲಿ ವಿದ್ವಾನ್ ಅರುಣ್ ಕುಮಾರ್, ಎಫೋನಿಯಂ ವಾದ್ಯದಲ್ಲಿ ವಿದ್ವಾನ್ ಹರೀಶ್, ಮೃದಂಗದಲ್ಲಿ ಕುಮಾರ್ ತಬಲಾ ವಿದ್ವಾನ್ ಸಾಗರ್, ರಿದಂ ಪಾಡ್ ವಿದ್ವಾನ್ ವಿಕ್ರಂ ಭಾರದ್ವಾಜ್, ಕೀಬೋರ್ಡ್ ವಿದ್ವಾನ್ ಶರತ್ ನುಡಿ ಕಾರ್ಯಕ್ರಮಕ್ಕೆ ಮೆರಗು ತಂದರು.


ನಂತರ ವಿದ್ವಾನ್ ಆರ್.ಮೋಹನ್, ವಿದ್ವಾನ್ ಎ.ವಿ.ದತ್ತಾತ್ರೇಯ ಮತ್ತು ವೃಂದದ ಕಲಾವಿದರಿಂದ ವೇಣು, ವೀಣಾ ವಯೋಲಿನ್ ವಾದ್ಯಲಹರಿ ಕಾರ್ಯಕ್ರಮ ಜರುಗಿತು.

ನೂತನ ಬೂತ್ ಅಧ್ಯಕ್ಷರ ನೇಮಕ



ಕೃಷ್ಣರಾಜ ಕ್ಷೇತ್ರದ ವಾರ್ಡ್ ನಂ.61 ವಿದ್ಯಾರಣ್ಯಪುರಂ ವ್ಯಾಪ್ತಿಯ ನೂತನ ಬೂತ್ ಅಧ್ಯಕ್ಷರನ್ನಾಗಿ ಶಿವಲಿಂಗಸ್ವಾಮಿ, ಮಹದೇವ್, ಜಯಶ್ರೀ, ವೀಣಾ ಮರಿಯಪ್ಪ, ನರೇಶ್, ಮಂಗಳ, ಮಾಧವ ರಾವ್ ಸಿಂದಿ ಹಾಗೂ ಹರಿಯಪ್ಪ ಅವರನ್ನು ನೇಮಕ ಮಾಡಿ, ಆದೇಶ ಪತ್ರ ವಿತರಿಸಿ ಅಭಿನಂದಿಸಲಾಯಿತು. ಈ ವೇಳೆ ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ಗೋಪಾಲ್ ರಾಜ ಅರಸ್, ನಗರ ಪಾಲಿಕೆ ಮಾಜಿ ಸದಸ್ಯ ಜಗದೀಶ್ ಎಲ್, ಕಾರ್ಯದರ್ಶಿ ಜಯರಾಮ್, ವಾರ್ಡಿನ ಚಾರ್ಜ್ ಉಪಾಧ್ಯಕ್ಷ ಜೋಗಿ ಮಂಜು, ಚುನಾವಣಾ ಉಸ್ತುವಾರಿ ಚಂದ್ರಶೇಖರ್ ಗೌಡ, ವಾರ್ಡ್ ಅಧ್ಯಕ್ಷ ಶಿವಪ್ರಕಾಶ್, ಕಾರ್ಯದರ್ಶಿ ಚಂದ್ರಶೇಖರ್, ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಕಿಶೋರ್ ಚಂದ ಜೈನ್, ಕೃಷ್ಣ ಭಟ್ ಉಪಸ್ಥಿತರಿದ್ದರು.

ಹನುಮ ಜಯಂತಿ; ಇಂದಿನಿಂದ 15ರ ಮಧ್ಯ ರಾತ್ರಿವರೆಗೆ ಮದ್ಯ ಮಾರಾಟ ನಿಷೇಧ



ಮೈಸೂರು,ಡಿ.13- ಹುಣಸೂರು ಪಟ್ಟಣದಲ್ಲಿ ಹನುಮ ಜಯಂತಿ ಆಚರಣೆ ಸಂಬಂಧ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಹುಣಸೂರು ತಾಲೂಕಿನಾದ್ಯಂತ ಮತ್ತು ಪಿರಿಯಾಪಟ್ಟಣ ತಾಲೂಕಿನ ಕಂಪಲಾಪುರ ಗ್ರಾಮ, ಹೆಚ್.ಡಿ. ಕೋಟೆ ತಾಲೂಕಿನ ಅಣ್ಣೂರು ಗ್ರಾಮದಲ್ಲಿ ಡಿ.13 ರಂದು ಸಂಜೆ 6 ಗಂಟೆಯಿಂದ ಡಿ.15 ರ ಮಧ್ಯರಾತ್ರಿ 12 ಗಂಟೆಯವರೆಗೆ ಎಲ್ಲಾ ಮದ್ಯದ ಅಂಗಡಿಗಳಲ್ಲಿ ಮದ್ಯ ಮಾರಾಟವನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯಾದ ಜಿ.ಲಕ್ಷ್ಮೀಕಾಂತ್ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಡಿ.13- ಜೆ.ಸಿ ಫೀಡರ್‌ನ ಲಲಿತಾದ್ರಿಪುರ ವ್ಯಾಪ್ತಿಯಲ್ಲಿ ಎ.ಬಿ ಕೇಬಲ್ ಹಾಗೂ ಕವರ್ಡ್ ಕಂಡಕ್ಟರ್ ಕಾಮಗಾರಿ ನಿಮಿತ್ತ ಲಲಿತಾದ್ರಿಪುರ ಗ್ರಾಮ, ಲಲಿತಾದ್ರಿನಗರ ಬಡಾವಣೆ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಡಿ.14, 16 ಮತ್ತು 18 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವಿದ್ಯುತ್ ವ್ಯತ್ಯಯವಾಗುವುದು ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮೇಘಾಲಯ ರಾಜ್ಯಪಾಲರಿಗೆ ಸ್ವಾಗತ



ಮೈಸೂರು ಜಿಲ್ಲೆ ಪ್ರವಾಸದಲ್ಲಿರುವ ಮೇಘಾಲಯ ರಾಜ್ಯದ ರಾಜ್ಯಪಾಲರಾದ ಡಾ.ಸಿ.ಹೆಚ್.ವಿಜಯಶಂಕರ್ ಅವರು ಕೇರ್ಗಳ್ಳಿ ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಗ್ರಾಮಸ್ಥ ಅದ್ದೂರಿಯಾಗಿ ಸ್ವಾಗತ ಕೋರಿದ್ದಾರೆ. ಈ ವೇಳೆ ಗ್ರಾಮದ ಮುಖಂಡರಾದ ಕೇರ್ಗಳ್ಳಿ ಮಲ್ಲೇಶ್ ಸೇರಿದಂತೆ ಮತ್ತಿತರರಿ ಉಪಸ್ಥಿತರಿದ್ದರು.

ದೇಶ - ವಿದೇಶ

ಅಮೆರಿಕಾದಲ್ಲಿ ನಾಲ್ವರು ಭಾರತೀಯರು ಸೇರಿ 1,500 ಮಂದಿಗೆ ಕ್ಷಮಾದಾನ

ವಾಷಿಂಗ್ಟನ್: ವಿವಿಧ ಕಾರಣಗಳಿಂದ ಜೈಲುಶಿಕ್ಷೆ ಅನುಭವಿಸುತ್ತಿದ್ದ 1,500 ಮಂದಿಯ ಶಿಕ್ಷೆ ಕಡಿತಗೊಳಿಸಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಮಹತ್ವದ ಆದೇಶ ಹೊರಡಿಸಿದ್ದಾರೆ. ಇವರಲ್ಲಿ ನಾಲ್ವರು ಭಾರತೀಯರೂ ಸೇರಿದ್ದಾರೆ. ಅಹಿಂಸಾತ್ಮಕ ಅಪರಾಧ ಎಸಗಿದ 39 ಮಂದಿಗೆ ಕ್ಷಮಾದಾನ ನೀಡಿದ್ದಾರೆ. ಇದು ಅಮೆರಿಕದ ಇತಿಹಾಸದಲ್ಲಿ ಒಂದೇ ದಿನ ಗರಿಷ್ಠ ಕ್ಷಮಾದಾನ ನೀಡಿದ ಪ್ರಕರಣವಾಗಿದೆ.

ಕನಿಷ್ಠ ಒಂದು ವರ್ಷ ಗೃಹಬಂಧನ ಶಿಕ್ಷೆ ಪೂರ್ಣಗೊಳಿಸಿದವರನ್ನು ಬಿಡುಗಡೆಗೊಳಿಸಲು ಗುರುವಾರ ಪ್ರಕಟಿಸಲಾದ ಆದೇಶದಲ್ಲಿ ತಿಳಿಸಲಾಗಿದೆ. ಈ ಮೂಲಕ ಭಾರತೀಯರಾದ ಮೀರಾ ಸಚ್‌ದೇವ, ವಿಕ್ರಮ್ ದತ್ತಾ, ಕೃಷ್ಣ ಮೋಟೆ ಮತ್ತು ಬಾಬುಭಾಯ್ ಪಟೇಲ್ ಅವರಿಗೆ ಬಿಡುಗಡೆ ಭಾಗ್ಯ ಸಿಕ್ಕಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಪರಿಣಾಮಕಾರಿ ಕ್ರಮಗಳನ್ನು ತೆಗೆದು ಕೊಂಡು ಕ್ಷಮಾದಾನ ಅರ್ಜಿಗಳ ಪರಿಶೀಲನೆ ನಡೆಸುವುದಾಗಿ ಅಧ್ಯಕ್ಷ ಜೋ ಬೈಡನ್ ತಿಳಿಸಿದ್ದಾರೆ. 2017ರಲ್ಲಿ ಅಧ್ಯಕ್ಷ ಸ್ಥಾನದಿಂದ ನಿರ್ಗಮಿಸುವ ಸಂದರ್ಭದಲ್ಲಿ ಬರಾಕ್ ಒಬಾಮ ಅವರು ಒಂದೇ ದಿನ 330 ಮಂದಿಗೆ ಕ್ಷಮಾದಾನ ನೀಡಿದ್ದರು.

ಅಮೆರಿಕವನ್ನು ಸಾಧ್ಯತೆ ಮತ್ತು ಎರಡನೇ ಅವಕಾಶಗಳ ಭರವಸೆ ಮೇಲೆ ನಿರ್ಮಿಸಲಾಗಿದೆ. ದೇಶದ ಅಧ್ಯಕ್ಷನಾಗಿ, ಪಶ್ಚಾತ್ತಾಪ ಹೊಂದಿದವರಿಗೆ ಪುನರ್ವಸತಿಗೆ ಅವಕಾಶ ನೀಡುವ ಸವಲತ್ತು ನನಗಿದೆ. ಹೀಗಾಗಿ ಅಹಿಂಸಾತ್ಮಕ ಅಪರಾಧ ಎಸಗಿದವರಿಗೆ ಹಾಗೂ ಮಾದಕವಸ್ತು ಅಪರಾಧಿಗಳಿಗೆ ಕ್ಷಮಾದಾನ ನೀಡಲಾಗುತ್ತಿದೆ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಗಾಜಾದಲ್ಲಿ ಕದನ ವಿರಾಮ ನಿರ್ಣಯದ ಪರ ಭಾರತ ಮತ

ವಿಶ್ವಸಂಸ್ಥೆ: ಯುದ್ಧಪೀಡಿತ ಗಾಜಾ ಪಟ್ಟಿಯಲ್ಲಿ ತಕ್ಷಣ ಬೇಷರತ್ತಾದ ಮತ್ತು ಶಾಶ್ವತ ಕದನ ವಿರಾಮಕ್ಕೆ ಆಗ್ರಹಿಸಿ ವಿಶ್ವಸಂಸ್ಥೆಯ ಮಹಾಧಿವೇಶನದ ನಿರ್ಣಯವನ್ನು ಬೆಂಬಲಿಸಿ ಭಾರತ ಮತ ಹಾಕಿದೆ. ಈ ಮೂಲಕ ಭಾರತವು ಈ ಪ್ರಸ್ತಾಪದ ಪರವಾಗಿ ಮತ ಹಾಕಿದ ಇತರ 157 ರಾಷ್ಟ್ರಗಳೊಂದಿಗೆ ಸೇರಿಕೊಂಡಿದೆ.

ಗಾಜಾದಲ್ಲಿ ಕದನ ವಿರಾಮಕ್ಕೆ ಕರೆ ನೀಡುವ ಹಾಗೂ ಇಸ್ರೇಲ್ ನಿಷೇಧಿಸಿರುವ ಪ್ಯಾಲೆಸ್ಟೈನ್ ನಿರಾಶ್ರಿತರಿಗಾಗಿ ವಿಶ್ವಸಂಸ್ಥೆಯ ಪರಿಹಾರ ಮತ್ತು ಕಾರ್ಯ ಸಂಸ್ಥೆಯನ್ನು (ಯುಎನ್ ಆರ್‌ಡಬ್ಲ್ಯುಎ) ಬೆಂಬಲಿಸುವ ಈ ಎರಡು ನಿರ್ಣಯಗಳನ್ನು ಯುಎನ್‌ಜಿಎ ಬಹುಮತದಿಂದ ಅಂಗೀಕರಿಸಿತು.

ಅಮೆರಿಕ, ಇಸ್ರೇಲ್, ಅರ್ಜೆಂಟೀನಾ, ಜೆಕಿಯಾ, ಹಂಗೇರಿ, ನೌರು, ಪಪುವಾ ನ್ಯೂ ಗಿನಿಯಾ, ಪರಾಗ್ವೆ ಮತ್ತು ಟೋಂಗಾ ಸೇರಿದಂತೆ ಒಂಬತ್ತು ದೇಶಗಳು ಕದನ ವಿರಾಮದ ವಿರುದ್ಧವಾಗಿ ಮತ್ತು 13 ದೇಶಗಳು ಗೈರು ಹಾಜರಾಗಿವೆ. ಕದನ ವಿರಾಮದ ಪರವಾಗಿ ಒಟ್ಟು 158 ಮತಗಳು ಬಂದಿವೆ.

ಯುಎನ್‌ಆರ್‌ಡಬ್ಲ್ಯುಎ ನಿಷೇಧವನ್ನು ಹಿಂಪಡೆಯಬೇಕೆಂಬ ಎರಡನೇ ನಿರ್ಣಯದ ಪರವಾಗಿ 159 ಮತ, ವಿರುದ್ಧವಾಗಿ ಒಂಬತ್ತು ಮತಗಳು ಚಲಾವಣೆಯಾದವು. 11 ದೇಶಗಳು ಮತದಾನದಿಂದ ಹೊರಗುಳಿದವು.

ಯುವತಿ ಮೇಲೆ 9 ಕಾಮುಕರಿಂದ ಅತ್ಯಾಚಾರ; ಏಳು ಜನರ ಬಂಧನ

ಗುವಾಹಟಿ: ಗುವಾಹಟಿಯಲ್ಲಿ ಯುವತಿಯ ಮೇಲೆ ಒಂಬತ್ತು ಮಂದಿ ಸಾಮೂಹಿಕ ಅತ್ಯಾಚಾರ ಎಸಗಿದ್ದು, ಏಳು ಕಾಮುಕರನ್ನು ಪೊಲೀಸರು ಬಂಧಿಸಿದ್ದಾರೆ ಬಂಧಿತ ಆರೋಪಿಗಳನ್ನು ಕುಲದೀಪ್ ನಾಥ್, ಪಿಂಕು ದಾಸ್, ಮೃಣಾಲ್ ರಭಾ, ಗಗನ್ ದಾಸ್, ಬಿಜೋಯ್ ರಭಾ, ಸೌರವ್ ಬೋರೋ ಮತ್ತು ದೀಪಂಕರ್ ಮುಖಿಯಾ ಎಂದು ಗುರುತಿಸಲಾಗಿದೆ. ಎಲ್ಲಾ ಆರೋಪಿಗಳು 18 ವರ್ಷದಿಂದ 23 ವರ್ಷ ವಯಸ್ಸಿನವರಾಗಿದ್ದಾರೆ.

ಮಾಸ್ಟರ್‌ಮೈಂಡ್‌ಗಳೆಂದು ಹೇಳಲಾದ ಇನ್ನಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಅವರಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಗುರುವಾರ ಮಧ್ಯರಾತ್ರಿ ಈ ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ನಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದರು. ನಗರದ ಹೊರವಲಯದ ಬೋರಗಾಂವ್‌ನ ನಿಜಾರಪರ್ ಪ್ರದೇಶದ ದುರ್ಗಾ ದೇವಸ್ಥಾನದ ಆವರಣದಲ್ಲಿ ಈ ಕೃತ್ಯ ಎಸಗಲಾಗಿದೆ.

ಮಹಿಳೆಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರವೆಸಗುತ್ತಿರುವ ವಿಡಿಯೋವನ್ನು ಬೋರಗಾಂವ್ ನಿವಾಸಿಗಳ ವಾಟ್ಸಾಪ್‌ನಲ್ಲಿ ಹರಿದಾಡುತ್ತಿದೆ ಎಂಬುದು ನಮಗೆ ತಿಳಿಯಿತು. ಅದರಲ್ಲಿ ಎಂಟರಿಂದ ಒಂಬತ್ತು ಜನ ಇದ್ದು, ಮೈಮೇಲೆ ಬಟ್ಟೆಯಿಲ್ಲದ ಮಹಿಳೆ ಮೇಲೆ ಹಿಂಸಾತ್ಮಕವಾಗಿ ಲೈಂಗಿಕ ದೌರ್ಜನ್ಯ ನಡೆಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಕುವೈತ್‌ನಿಂದ ಬಂದು ಪುತ್ರಿಗೆ ಲೈಂಗಿಕ ಕಿರುಕುಳ ನೀಡಿದವನ ಹತ್ಯೆಗೈದ ತಂದೆ

ತಿರುಪತಿ: ಅಪ್ರಾಪ್ತ ವಯಸ್ಸಿನ ತನ್ನ ಪುತ್ರಿಗೆ ಲೈಂಗಿಕ ಕಿರುಕುಳ ನೀಡಿದ್ದಾನೆ ಎನ್ನಲಾದ ವ್ಯಕ್ತಿಯನ್ನು ಕುವೈತ್‌ನಿಂದ ಬಂದು ಹತ್ಯೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ. ಈ ಹತ್ಯೆಯ ತಪ್ಪೊಪ್ಪಿಗೆ ಕುರಿತ ಸೆಲ್ಫಿ ವಿಡಿಯೊವನ್ನು ತಂದೆ ಕುವೈತ್‌ನಿಂದ ಬಿಡುಗಡೆ ಮಾಡಿದ್ದಾನೆ.

ಕುವೈತ್‌ನಲ್ಲಿ ಕಾರ್ಮಿಕನಾಗಿ ದುಡಿಯುತ್ತಿರುವ ಹಂತಕ, ಆಂಧ್ರಪ್ರದೇಶದ ಅಣ್ಣಮಯ್ಯ ಜಿಲ್ಲೆಯ ಓಬುಲವಾರಿಪಳ್ಳಿ ಎಂಬ ತನ್ನ ಹುಟ್ಟೂರಿಗೆ ಆಗಮಿಸಿ ಡಿ.7ರಂದು ತನ್ನ ಪುತ್ರಿಗೆ ಲೈಂಗಿಕ ಕಿರುಕುಳ ನೀಡಿದ್ದಾನೆ ಎನ್ನಲಾದ ವ್ಯಕ್ತಿಯನ್ನು ಇರಿದು ಹತ್ಯೆ ಮಾಡಿ ಮತ್ತೆ ಕುವೈತ್‌ಗೆ ವಾಪಸ್ಸಾಗಿದ್ದಾನೆ.

ತಾನು ಹಾಗೂ ಪತ್ನಿ ಇಬ್ಬರೂ ಕುವೈತ್‌ನಲ್ಲಿ ಕೆಲಸ ಮಾಡುತ್ತಿರುವುದಾಗಿ ವಿಡಿಯೋದಲ್ಲಿ ಈ ವ್ಯಕ್ತಿ ಹೇಳಿಕೊಂಡಿದ್ದಾನೆ. ಅತ್ತಿಗೆಯ ಮನೆಯಲ್ಲಿ 12 ವರ್ಷದ ಪುತ್ರಿಯನ್ನು ಬಿಟ್ಟು ಇಬ್ಬರೂ ಕುವೈತ್‌ಗೆ ತೆರಳಿದ್ದರು. ಆರಂಭದಲ್ಲಿ ಎಲ್ಲವೂ ಚೆನ್ನಾಗಿತ್ತು. ಆದರೆ ಇತ್ತೀಚೆಗೆ ಅತ್ತಿಗೆಯ ಮಾವ, ಅಪ್ರಾಪ್ತ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ್ದ ಎಂದು ವಿವರಿಸಿದ್ದಾನೆ.

ಪುತ್ರಿ ಇದಕ್ಕೆ ಪ್ರತಿರೋಧ ತೋರಿದಾಗ, ಬಾಯಿ ಮುಚ್ಚಿದ್ದಾರೆ. ಆದರೂ ಕೂಗಿಕೊಂಡಾಗ ಪತ್ನಿಯ ಸಹೋದರಿ ಬಾಲಕಿಯನ್ನು ರಕ್ಷಿಸಿದ್ದಾಳೆ. ಇತ್ತೀಚೆಗೆ ತಾಯಿ ಭೇಟಿ ನೀಡಿದಾಗ ಬಾಲಕಿ ಎಲ್ಲ ವಿಷಯವನ್ನು ತಾಯಿಯೊಂದಿಗೆ ಹೇಳಿಕೊಂಡಿದ್ದಳು ಎನ್ನಲಾಗಿದೆ.

ರಾಜೀನಾಮೆ ಘೋಷಿಸಿದ ಎಫ್‌ಬಿಐ ಮುಖ್ಯಸ್ಥ: ಅಮೆರಿಕಕ್ಕೆ ಒಳ್ಳೆಯ ದಿನ ಎಂದ ಟ್ರಂಪ್



ವಾಷಿಂಗ್ಟನ್: ಜೋ ಬೈಡನ್ ಅವರ ಅಧಿಕಾರಾವಧಿ ಕೊನೆಯಾಗುವ ಮುನ್ನವೇ ತಾವು ತಮ್ಮ ಹುದ್ದೆಗೆ ರಾಜೀನಾಮೆ ನೀಡುವುದಾಗಿ ಎಫ್‌ಬಿಐ ಡೈರೆಕ್ಟರ್ ಕ್ರಿಸ್ಟೋಫರ್ ವ್ರೇ ಸಹೋದ್ಯೋಗಿಗಳಿಗೆ ತಿಳಿಸಿದ್ದಾರೆ. ಈ ಮೂಲಕ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಂದ ಮುಂದಿನ ಎಫ್‌ಬಿಐ ಡೈರೆಕ್ಟರ್ ಎಂದು ನಾಮನಿರ್ದೇಶಿತಗೊಂಡಿರುವ ಕಶ್ಯಪ್ ಕಾಶ್ ಪಟೇಲ್ ಹಾದಿ ಸುಗಮವಾಗಲಿದೆ.

ಜನವರಿಯಲ್ಲಿ ಈ ಸರ್ಕಾರದ ಆಡಳಿತಾವಧಿಯ ಅಂತ್ಯದವರೆಗೆ ನಾನು ಸೇವೆ ಸಲ್ಲಿಸಿ ಹುದ್ದೆಯಿಂದ ಕೆಳಗಿಳಿಯುವುದು ಸಂಸ್ಥೆಯ ಹಿತದೃಷ್ಟಿಯಿಂದ ಒಳ್ಳೆಯ ನಿರ್ಧಾರವಾಗಿದೆ ಎಂದು ವ್ರೇ ಟೌನ್ ಹಾಲ್ ಮೀಟಿಂಗ್‌ನಲ್ಲಿ ತಮ್ಮ ಎಫ್‌ಬಿಐ ಉದ್ಯೋಗಿಗಳಿಗೆ ತಿಳಿಸಿದ್ದಾರೆ.

ಕ್ರಿಸ್ಟೋಫರ್ ವ್ರೇ ಅವರ ರಾಜೀನಾಮೆ ಅಮೆರಿಕಕ್ಕೆ ಉತ್ತಮ ದಿನವಾಗಿದೆ. ಇದು ಯುನೈಟೆಡ್ ಸ್ಟೇಟ್ಸ್ ಡಿಪಾರ್ಟ್‌ಮೆಂಟ್ ಆಫ್ ಇಂಜಸ್ಟಿಸ್ ಎಂದು ಕರೆಯಲಾಗುವ ಅನ್ಯಾಯವನ್ನು ಕೊನೆಗೊಳಿಸಲಿದೆ ಎಂದು ಟ್ರಂಪ್ ತಮ್ಮ ಸಾಮಾಜಿಕ ಮಾಧ್ಯಮ ವೇದಿಕೆಯಾದ ಟ್ರೂತ್ ಸೋಷಿಯಲ್‌ನಲ್ಲಿ ಬರೆದಿದ್ದಾರೆ.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

ಗ್ಯಾರಂಟಿ ಯೋಜನೆಗಳಿಗೆ ಹಿಂದುಳಿದ ವರ್ಗಗಳ ನಿಗಮದ ಹಣ ಬಳಕೆ ಆರೋಪ

ಮಡಿಕೇರಿ, ಡಿ.13(ಪಿಎಸ್)–ಅಹಿಂದ ಬೆಂಬಲ ದೊಂದಿಗೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿ ರುವ ಕಾಂಗ್ರೆಸ್ ಸರ್ಕಾರ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಮೀಸಲಾಗಿರುವ ಅಗತ್ಯ ಅನುದಾನ ಒದಗಿಸುತ್ತಿಲ್ಲ ಎಂದು ಕೊಡಗು ಜಿಲ್ಲಾ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ವತಿಯಿಂದ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಹಾಗೂ ಹಿಂದುಗಳಿದ ವರ್ಗಗಳ ಮೋರ್ಚಾ ಜಿಲ್ಲಾಧ್ಯಕ್ಷ ಅಪ್ರು ರವೀಂದ್ರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಹಿಂದುಳಿದ ವರ್ಗಗಳ ವಿವಿಧ ನಿಗಮಗಳಿಗೆ ಅನುದಾನ ಕಡಿತ ಮಾಡಿದೆ ಎಂದು ಆರೋಪಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ಹಿಂದುಳಿದ ವರ್ಗಗಳ ನೆರವಿನಿಂದ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪ್ರಸ್ತುತ ಅವರನ್ನೇ ಕಡೆಗಣಿಸುತ್ತಿದೆ. ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಘೋಷಿಸಿರುವ ಉಚಿತ ಭಾಗ್ಯಗಳನ್ನು ಪೂರೈಸುವ ಏಕಮಾತ್ರ ಉದ್ದೇಶದಿಂದ ವಾಲ್ಮೀಕಿ ಅಭಿವೃದ್ಧಿ ನಿಗಮ ಸೇರಿದಂತೆ ವಿವಿಧ ನಿಗಮಗಳ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳಲಾಗುತ್ತಿದೆ ಎಂದು ದೂರಿದರು.



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಎದುರು ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿ.ಕೆ.ಲೋಕೇಶ್ ಮಾತನಾಡಿ, ಹಿಂದುಳಿದ ವರ್ಗಗಳ ವಾಲ್ಮೀಕಿ, ಕಾಡುಗೊಲ್ಲರು ಸೇರಿದಂತೆ ವಿವಿಧ ನಿಗಮ ಮಂಡಳಿಗಳಿಗೆ ರಾಜ್ಯ ಸರ್ಕಾರ ಅನುದಾನ ಒದಗಿಸುವಲ್ಲಿ ತಾರತಮ್ಯ ಧೋರಣೆ ತಳೆದಿದೆ. ಹಿಂದೆ ನಿಗಮ ಮಂಡಳಿಗಳಿಗೆ 576 ಕೋಟಿ ರೂ. ಅನುದಾನ ಒದಗಿಸಲಾಗಿತ್ತು. ಕಳೆದ 2023–24ನೇ ಸಾಲಿನಲ್ಲಿ ಕಾಂಗ್ರೆಸ್ ಸರ್ಕಾರ 340 ಕೋಟಿ ರೂ.ಗಳನ್ನಷ್ಟೇ ನೀಡಿದ್ದು, ಇದರಲ್ಲಿ ಕೇವಲ 170 ಕೋಟಿಯಷ್ಟು ಮಾತ್ರ ಬಳಕೆಯಾಗಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಮಾಜಿ ಎಂಎಲ್‌ಸಿ ಸುನಿಲ್ ಸುಬ್ರಮಣಿ, ಪಶ್ಚಿಮ ಘಟ್ಟ ಸಂರಕ್ಷಣಾ ಸಮಿತಿ ಮಾಜಿ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ, ನಗರಸಭಾ ಮಾಜಿ ಅಧ್ಯಕ್ಷೆ ಅನಿತಾ ಪೂವಯ್ಯ, ತಾಪಂ ಮಾಜಿ ಅಧ್ಯಕ್ಷೆ ತೆಕ್ಕಡೆ ಶೋಭಾ ಮೋಹನ್, ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಪಿ.ಎಂ.ರವಿ, ಹಿಂದುಳಿದ ವರ್ಗಗಳ ಮೋರ್ಚಾದ ಮಡಿಕೇರಿ ಗ್ರಾಮಾಂತರ ಮಂಡಲಾಧ್ಯಕ್ಷ ಪ್ರದೀಪ್ ಪೂಜಾರಿ, ನಗರಾಧ್ಯಕ್ಷ ಗಜ ಭಗವತಿ, ಸುಂಟಿಕೊಪ್ಪ ಅಧ್ಯಕ್ಷ ಪಿ.ಆರ್.ಸುನಿಲ್, ವಿರಾಜಪೇಟೆ ಪೊಟ್ಟಂಡ ನವೀನ್ ಉತ್ತಪ್ಪ, ಉಪಾಧ್ಯಕ್ಷ ಗಿರೀಶ್, ಸೋಮವಾರಪೇಟೆ ಉಪಾಧ್ಯಕ್ಷ ಪಿ.ಎನ್.ಗಂಗಾಧರ, ಆರ್.ಕೆ.ಚಂದ್ರು, ಬಿ.ಕೆ.ಅರುಣ್ ಕುಮಾರ್, ಕನ್ನಂಡ ಸಂಪತ್, ಬಿ.ಕೆ.ಜಗದೀಶ್, ಸುರೇಶ್ ಸಿದ್ದಾಪುರ, ಕೆ.ಎಸ್.ರಮೇಶ್, ಅರುಣ್ ಶೆಟ್ಟಿ, ಸಜಿಲ್ ಕೃಷ್ಣ, ಬೊಳ್ಳಜಿರ ಅಯ್ಯಪ್ಪ, ಬಿ.ಪಿ.ಡಿಶು, ಕುಶಾಲಪ್ಪ ಪಾಲ್ಗೊಂಡಿದ್ದರು.

> ವಾಲ್ಮೀಕಿ ನಿಗಮದ ಭ್ರಷ್ಟಾಚಾರದಿಂದ ಸಚಿವರೊಬ್ಬರು ಜೈಲಿಗೆ ಹೋಗಿ ಬರುವಂತಾಗಿದೆ. ಮುಡಾ ಹಗರಣ ತಮ್ಮ ವಿರುದ್ಧ ತಿರುಗುತ್ತಿದಂತೆ 14 ನಿವೇಶನಗಳನ್ನು ಸಿಎಂ ಸಿದ್ದರಾಮಯ್ಯ ಏಕಾಏಕಿ ಹಿಂದಿರುಗಿಸಿದ್ದಾರೆ. ವಕ್ಫ್ ಬೋರ್ಡ್ ಮೂಲಕ ಆಸ್ತಿ ಕಬಳಿಕೆಗಳು ನಡೆಯುತ್ತಿದೆ. ಮಠ ಮಾನ್ಯಗಳ ಆಸ್ತಿಯನ್ನು ವಕ್ಫ್ ಆಸ್ತಿ ಎಂದು ಪಡೆಯಲು ಮುಂದಾದಲ್ಲಿ ತಕ್ಕ ಉತ್ತರ ನೀಡಲಾಗುವುದು.
>
> –ನಾಪಂಡ ರವಿ ಕಾಳಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ

ವಿರಾಜಪೇಟೆ ಅಭಿವೃದ್ಧಿ ಕುರಿತು ವಿಚಾರ ಸಂಕಿರಣ



ವಿರಾಜಪೇಟೆ ಪುರಭವನದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಡಾ.ಐ.ಆರ್.ದುರ್ಗಾಪ್ರಸಾದ್ ಮಾತನಾಡಿದರು.

ವಿರಾಜಪೇಟೆ, (ಮಂಜು)–ಸ್ಥಳೀಯ ಸಂಸ್ಥೆಗಳು ನಾಗರಿ ಕರೊಂದಿಗೆ ಸ್ನೇಹ ಸಂಬಂಧ ಮೂಲಕ ಅಭಿವೃದ್ಧಿ ನಡೆಸಬೇಕು ಎಂದು ಸಿಪಿಐ(ಎಂ) ಪ್ರಮುಖರಾದ ಸಾಮಾಜಿಕ ಹೋರಾಟಗಾರ ಡಾ.ಐ.ಆರ್. ದುರ್ಗಾಪ್ರಸಾದ್ ತಿಳಿಸಿದರು.

ಪಟ್ಟಣದ ಪುರಭವನದಲ್ಲಿ ಸಿಪಿಐ(ಎಂ) ಜಿಲ್ಲಾ ಸಮ್ಮೇಳನ ಅಂಗವಾಗಿ ನಡೆದ ವಿಚಾರ ಸಂಕಿರಣದಲ್ಲಿ 'ವಿರಾಜಪೇಟೆ ಪುರಸಭೆ ಅಭಿವೃದ್ಧಿಗೆ ಪಕ್ಷದ ಕಣ್ಣೋಟ' ಕುರಿತು ಮಾತನಾಡಿದ ಅವರು, ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯಿತಿ, ಪುರಸಭೆ, ಪಟ್ಟಣ ಪಂಚಾಯಿತಿ, ನಗರಸಭೆಗಳು ಸರ್ಕಾರದಿಂದ ಬರುವ ಸುತ್ತೋಲೆಗಳನ್ನು ಕಾರ್ಯಗತಗೊಳಿಸಬೇಕು. ಇದನ್ನು ಗಮನದಲ್ಲಿರಿಸಿಕೊಂಡು ಸರ್ಕಾರದೊಂದಿಗೆ ವ್ಯವಹರಿಸಿ ಆಯಾ ಸಂದರ್ಭಗಳಲ್ಲಿ ಅಗತ್ಯ ಹಣಕಾಸಿನ ವ್ಯವಸ್ಥೆ ಕಲ್ಪಿಸಬೇಕು ಎಂದರು.

ಸಿಪಿಐ(ಎಂ) ಸಂಘಟನಾ ಕಾರ್ಯದರ್ಶಿ ಎ.ಸಿ.ಸಾಬು ಮಾತನಾಡಿ, ವಿರಾಜಪೇಟೆ 300 ವರ್ಷ ಇತಿಹಾಸವಿರುವ ನಗರವಾಗಿದೆ. ನಗರದ ಅಭಿವೃದ್ಧಿ ಬಗ್ಗೆ ಸಿಪಿಐ(ಎಂ) ಸಾರ್ವಜನಿಕರ ಗಮನ ಸೆಳೆಯುತ್ತಿದೆ. ನಗರದ ಅಭಿವೃದ್ಧಿ ಎಂಬುದು ಪ್ರತಿಯೊಬ್ಬರ ಹೊಣೆಗಾರಿಕೆಯಾಗಿದೆ. ವಿರಾಜಪೇಟೆ ಅಭಿವೃದ್ಧಿಯಲ್ಲಿ ಸಾಕಷ್ಟು ಹಿಂದುಳಿದಿರುವುದರಿಂದ ಅಭಿವೃದ್ಧಿಗೆ ಹೆಸರಿನಲ್ಲಿ ವಿಚಾರ ಸಂಕಿರಣ ಏರ್ಪಡಿಸ ಲಾಗಿದೆ ಎಂದು ಹೇಳಿದರು.

ಖಾಸಗಿ ಬಸ್ ಕಾರ್ಮಿಕರ ಸಂಘದ ಕಾರ್ಯದರ್ಶಿ ಜೂಡಿವಾಜ್ ಮಾತನಾಡಿ, ವಿರಾಜಪೇಟೆ ಪುರಸಭೆ ಹಲವರು ಸಮಸ್ಯೆಗಳನ್ನು ಎದುರಿಸುತ್ತಿದೆ. ಸಮಸ್ಯೆಗಳ ಪರಿಹಾರಕ್ಕಾಗಿ ಸಾರ್ವಜನಿಕ ಜನಾಂದೋಲನ ಅಗತ್ಯವಿದೆ ಎಂದರು. ಇದೇ ವೇಳೆ ದಲಿತ ಮುಖಂಡ ಹೆಚ್.ಬಿ.ಸತೀಶ್, ಟ್ಯಾಕ್ಸಿ ಚಾಲಕರ ಸಂಘದ ನಜೀರ್, ನಾಗರಿಕ ಸಮಿತಿಯ ಎನ್.ಕೆ.ಶರೀಫ್, ಫ್ರಾನ್ಸಿಸ್, ಕಟ್ಟಡ ಕಾರ್ಮಿಕರ ಸಂಘದ ಅಬ್ದುಲ್ ಹಮೀದ್, ಮಲೆತಿರಿಕೆ ಬೆಟ್ಟದ ಲಾರೆನ್ಸ್ ನಗರದ ಸಮಸ್ಯೆಗಳನ್ನು ತೆರೆದಿಟ್ಟರು. ಕಾಂಗ್ರೆಸ್ ನಗರಾಧ್ಯಕ್ಷ ಮಾದಂಡ ಪಿ.ತಿಮ್ಮಯ್ಯ, ಪುರಸಭೆ ಅಧ್ಯಕ್ಷೆ ಎಂ.ಕೆ. ದೇಚಮ್ಮ, ಸದಸ್ಯ ಅಬ್ದುಲ್ ಜಲೀಲ್ ಇದ್ದರು.

ಅಪ್ರಾಪ್ತ ವಯಸ್ಸಿನ ಮಗನಿಗೆ ಚಾಲನೆಗೆ ದ್ವಿಚಕ್ರ ವಾಹನ ನೀಡಿದ್ದ ತಂದೆಗೆ 27 ಸಾವಿರ ರೂ. ದಂಡ

ಮಡಿಕೇರಿ, ಡಿ.13–ಅಪ್ರಾಪ್ತ ವಯಸ್ಸಿನ ಮಗನಿಗೆ ಚಾಲನೆ ಮಾಡಲು ದ್ವಿಚಕ್ರ ವಾಹನ ನೀಡಿದ್ದ ತಂದೆ (ವಾಹನದ ಮಾಲೀಕ)ಗೆ ಸೋಮವಾರಪೇಟೆ ಜೆಎಂಎಫ್‌ಸಿ ನ್ಯಾಯಾಲಯ 27 ಸಾವಿರ ರೂ. ದಂಡ ವಿಧಿಸಿದೆ.

ವಾಹನ ತಪಾಸಣೆ ವೇಳೆ ಅಪ್ರಾಪ್ತ ದ್ವಿಚಕ್ರ ವಾಹನ ಚಾಲನೆ ಮಾಡುತ್ತಿರುವುದು ಹಾಗೂ ವಿಮೆ ಚಾಲ್ತಿಯಲ್ಲಿ ಇಲ್ಲದಿರುವುದು ಪತ್ತೆಯಾಗಿತ್ತು. ಈ ಕುರಿತು ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಸೋಮವಾರಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯ ರೇಂಜರ್ ಬ್ಲಾಕ್ ಬಿ.ಎಸ್. ಮಂಜುನಾಥ ಅವರು ತಮ್ಮ ಪುತ್ರ (ಅಪ್ರಾಪ್ತ)ನಿಗೆ ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ನೀಡಿದ್ದಕ್ಕೆ ಮತ್ತು ವಾಹನದ ವಿಮೆ ಚಾಲ್ತಿಯಲ್ಲಿ ಇಲ್ಲದಿರುವುದರಿಂದ ನ್ಯಾಯಾಲಯ ಡಿ.13ರಂದು 27 ಸಾವಿರ ರೂ. ದಂಡ ವಿಧಿಸಿದೆ.

ಇಗ್ಗುತ್ತಪ್ಪ ದೇವಾಲಯದಲ್ಲಿ ಕುಂಬ್ಯಾರ್ ಕಲಾಡ್ಚ ಹಬ್ಬ ಸಂಪನ್ನ

ನಾಪೋಕ್ಲು, ಡಿ.13(ದುಗ್ಗಳ)–ಸಮೀಪದ ಕಕ್ಕಬ್ಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ಹುತ್ತರಿ (ಪುತ್ತರಿ)ಗೆ ಮುನ್ನಾ ದಿನವಾದ ಶುಕ್ರವಾರ ವಾರ್ಷಿಕ ಕುಂಬ್ಯಾರ್ ಕಲಾಡ್ಚ ಹಬ್ಬವನ್ನು ತಕ್ಕ ಮುಖ್ಯಸ್ಥರು ಹಾಗೂ ಭಕ್ತರು ಸಾಂಪ್ರದಾಯಿಕವಾಗಿ ಆಚರಿಸುವ ಮೂಲಕ ಸಂಪನ್ನಗೊಳಿಸಿದರು.

ಇಗ್ಗುತ್ತಪ್ಪ ಸನ್ನಿಧಿಯಲ್ಲಿ ದೇವತಕ್ಕರಾದ ಪರದಂಡ ಕುಟುಂಬಸ್ಥರು ದೇವಾಲಯಕ್ಕೆ ಎತ್ತುಪೋರಾಟವನ್ನು ಒಪ್ಪಿಸಿದರು. ನಂತರ ತುಲಾಭಾರ ಸೇವೆ, ಹಾಲು ಬಲಿವಾಡು ಹರಕೆ ಹಾಗೂ ಪೂಜಾ ಕಾರ್ಯ ನೆರವೇರಿಸಲಾಯಿತು. ನಂತರ ತೀರ್ಥ ಪ್ರಸಾದ, ಅನ್ನಸಂತರ್ಪಣೆ ಏರ್ಪಡಿಸಲಾಯಿತು.

ಇದೇ ಸಂದರ್ಭ ಪೇರೂರು ಹಾಗೂ ನೆಲಜಿ ಇಗ್ಗುತ್ತಪ್ಪ ದೇವಾಲಯ ತಕ್ಕ ಮುಖ್ಯಸ್ಥರು ಎತ್ತು ಪೋರಾಟದೊಂದಿಗೆ ಮಲ್ಮಕ್ಕೆ ಆಗಮಿಸಿದರು. ಅರ್ಚಕರು ಶುದ್ಧ ಕಲಶ ಪೂಜಾ ಕಾರ್ಯ ಹಾಗೂ ಎತ್ತುಪೋರಾಟ ದುಡಿಕೊಟ್ಟ್ ಪಾಟ್ ನೆರವೇರಿತು. ಬಳಿಕ ಎತ್ತುಪೋರಾಟ ಅಕ್ಕಿಯನ್ನು ಮೂರು ಭಾಗ ಮಾಡಿ ನೆಲಜಿ, ಪೇರೂರು ಹಾಗೂ ಪಾಡಿ ದೇವಾಲಯದ ತಕ್ಕಮುಖ್ಯಸ್ಥರು ಹಂಚಿಕೊಂಡು ದೇವರ ಕಟ್ಟು ಸಡಿಲಿಸಿ ನಾಡಿನ ಸುಭಿಕ್ಷಕ್ಕಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.



ಕಕ್ಕಬ್ಬೆಯ ಪಾಡಿ ಇಗ್ಗುತ್ತಪ್ಪ ಸನ್ನಿಧಿಯಲ್ಲಿ ಕುಂಬ್ಯಾರ್ ಕಲಾಡ್ಚ ಹಬ್ಬ ಆಚರಿಸಲಾಯಿತು.

ಸಂಜೆ ದೇವಾಲಯದಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ಕಲಾಡ್ಚ ಸಂಭ್ರಮದಿದ ಜರುಗಿತು. ಇದೇ ವೇಳೆ ಸಮೀಪದ ನೆಲಜಿ ಇಗ್ಗುತ್ತಪ್ಪ ದೇವಾಲಯದಲ್ಲೂ ಕುಂಬ್ಯಾರು ಕಲಾಡ್ಚ ವಾರ್ಷಿಕೋತ್ಸವ ಜರುಗಿತು. ದೇವಾಲಯದ 13 ತಕ್ಕ ಮುಖ್ಯಸ್ಥರು, ಭಕ್ತ ಜನ ಸಂಘ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಚುನಾಯಿತಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಇಂದು ಕೊಡಗಿನಾದ್ಯಂತ ಹುತ್ತರಿ ಹಬ್ಬ ಆಚರಣೆ

ಮಡಿಕೇರಿ: ಕೊಡಗಿನ ಪ್ರಮುಖ ಹಬ್ಬಗಳಲ್ಲಿ ಒಂದಾಗಿರುವ ಧಾನ್ಯ ಲಕ್ಷ್ಮಿಯನ್ನು ಮನೆ ತುಂಬಿಕೊಳ್ಳುವ 'ಹುತ್ತರಿ' ಹಬ್ಬ ಶನಿವಾರ ಕರ್ಕಾಟಕ ಲಗ್ನ ಹಾಗೂ ರೋಹಿಣಿ ನಕ್ಷತ್ರದಲ್ಲಿ ಜಿಲ್ಲಾದ್ಯಂತ ನಡೆಯಲಿದೆ.

ಶ್ರೀ ಪಾಡಿ ಇಗ್ಗುತಪ್ಪ ದೇವಾಲಯದಲ್ಲಿ ಅಮ್ಮಂಗೇರಿ ಜ್ಯೋತಿಷ್ಯರು ಮುಹೂರ್ತ ನಿಗದಿಪಡಿಸಿದಂತೆ ಮೊದಲಿಗೆ ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ರಾತ್ರಿ 7.30ಕ್ಕೆ ನೆರೆ ಕಟ್ಟಿ, 8.30ಕ್ಕೆ ಕದಿರು ತೆಗೆದು ದೇವಾಲಯಕ್ಕೆ ತರಲಾಗುವುದು. ಬಳಿಕ ವಿಶೇಷ ಪೂಜೆ ನೆರವೇರಿಸಿ ರಾತ್ರಿ 9.30ಕ್ಕೆ ಪ್ರಸಾದ ವಿತರಣೆ ನಡೆಯಲಿದೆ. ಇದೇ ವೇಳೆ ಜಿಲ್ಲಾದ್ಯಂತ ರಾತ್ರಿ 7.50ಕ್ಕೆ ನೆರೆ ಕಟ್ಟಿ, 8.50ಕ್ಕೆ ಕದಿರು ತೆಗೆಯಲಾಗುವುದು. ರಾತ್ರಿ 9.50ರ ಬಳಿಕ ಹಬ್ಬದ ವಿಶೇಷ ಖಾದ್ಯಗಳನ್ನು ಸವಿಯಲಾಗುವುದು.

ಕುಶಾಲನಗರದಲ್ಲಿ ಹನುಮ ಜಯಂತಿ...



ಕುಶಾಲನಗರ ರಥಬೀದಿಯ ಶ್ರೀ ಆಂಜನೇಯ ದೇವಸ್ಥಾನದಲ್ಲಿ ಆಂಜನೇಯ ಸೇವಾ ಸಮಿತಿ ಹಾಗೂ ಶ್ರೀರಾಮಾಂಜನೇಯ ಉತ್ಸವ ಸಮಿತಿ ವತಿಯಿಂದ ಹನುಮ ಜಯಂತಿ ಆಚರಿಸಲಾಯಿತು. ಇದೇ ವೇಳೆ ಭಕ್ತರು ದೇವರ ದರ್ಶನ ಪಡೆದರು.

ಜಿ.ಎಸ್.ಶಿವಪ್ಪಚಾರ್ ನಿಧನ



ಕುಶಾಲನಗರ, ಡಿ.13–ಸಮೀಪದ ಕಣಿವೆ ಗ್ರಾಮದ ನಿವೃತ್ತ ಮುಖ್ಯ ಶಿಕ್ಷಕ ಜಿ.ಎಸ್.ಶಿವಪ್ಪಚಾರ್(92) ಶುಕ್ರವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಪುತ್ರಿಯನ್ನು ಅಗಲಿದ್ದಾರೆ. ಬೆಂಗಳೂರಿನಲ್ಲಿ ಅಂತ್ಯಕ್ರಿಯೆ ನಡೆಯಿತು.





ಯುವಜನೋತ್ಸವ ಕಾರ್ಯಕ್ರಮದಲ್ಲಿ ಗಮನ ಸೆಳೆದ ಜಾನಪದ ನೃತ್ಯ

ಕಲಾಪ್ರತಿಭೆ ಹೊರತರಲು ಯುವಜನೋತ್ಸವ ಸಹಕಾರಿ

● ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ ಅಭಿಮತ ● ಚಾ.ನಗರದಲ್ಲಿ ಜಿಲ್ಲಾ ಮಟ್ಟದ ಯುವಜನೋತ್ಸವ

ಚಾಮರಾಜನಗರ, ಡಿ.13(ಎಸ್‌ಎಸ್)–ಯುವ ಜನರ ಕಲಾಪ್ರತಿಭೆಯನ್ನು ಹೊರತರಲು ಯುವಜನೋತ್ಸವ ಸಹಕಾರಿಯಾಗಿದೆ ಎಂದು ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ (ಚುಡಾ) ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ ಅಭಿಪ್ರಾಯಪಟ್ಟರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ನೆಹರು ಯುವ ಕೇಂದ್ರ ಸಹಯೋಗದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಯುವಕರು ಕಲಾಪ್ರಕಾರಗಳನ್ನು ಹೊರ ಜಗತ್ತಿಗೆ ಪರಿಚಯಿಸುವ ಮೂಲಕ ಯುವಜನತೆಯನ್ನು ಪ್ರೋತ್ಸಾಹಿಸಲು ಸರ್ಕಾರ ನಿರಂತರವಾಗಿ ಪ್ರತಿವರ್ಷ ಯುವಜನ ಮೇಳ ಆಯೋಜಿಸುತ್ತಿದೆ. ರಾಜ್ಯ ಮಟ್ಟದಲ್ಲಿ ಗೆದ್ದು ಜಿಲ್ಲೆಗೆ ಕೀರ್ತಿ ತರಬೇಕು. ಹಾಗೆಯೇ ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪಾಲ್ಗೊಳ್ಳಲು ಸಂಕಷ್ಟದಲ್ಲಿರುವ ಯುವಕರಿಗೆ ಸರ್ಕಾರ ಅಗತ್ಯ ನೆರವು ನೀಡಬೇಕು ಎಂದರು.

ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ ಸಮಿತಿ ಸದಸ್ಯ ಶ್ರೀನಿವಾಸಪ್ರಸಾದ್ ಮಾತನಾಡಿ, ವಿವಿಧ ಸ್ಪರ್ಧೆಗಳ ಮೂಲಕ ಜಿಲ್ಲೆಯ ಯುವಕ–ಯುವತಿಯರನ್ನು ಮುಖ್ಯವಾಹಿನಿಗೆ ತರಲು ಯುವಜನೋತ್ಸವ ಆಯೋಜಿಸಿ ಜಿಲ್ಲಾಡಳಿತ ಉತ್ತಮ ಪ್ರಯತ್ನ ಮಾಡುತ್ತಿದೆ. ಯುವಜನತೆ ಸತತ ಪರಿಶ್ರಮದ ಮೂಲಕ ತಮ್ಮಲ್ಲಿರುವ ಕಲಾಪ್ರತಿಭೆ ಅನಾವರಣಗೊಳಿಸಲು ಮುಂದಾಗಬೇಕು ಎಂದರು.



ಚಾಮರಾಜನಗರದ ಅಂಬೇಡ್ಕರ್ ಭವನದಲ್ಲಿ ಶುಕ್ರವಾರ ನಡೆದ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ ಉದ್ಘಾಟಿಸಿದರು.

> ಇಂದಿನ ವಿದ್ಯಾರ್ಥಿಗಳು ಬರೀ ಓದುವುದಷ್ಟೇ ಅಲ್ಲ. ಸಾಹಿತ್ಯ, ಕವಿತೆ ರಚನೆ, ಹಾಡು ಬರೆಯುವುದು, ನಾಟಕಗಳಲ್ಲಿ ಅಭಿನಯಿಸುವಂತಹ ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳುವುದು ಅನಿವಾರ್ಯವಾಗಿದೆ. ಕನ್ನಡದ ವರನಟ ಡಾ.ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಈ ನೆಲದ ಸಾಂಸ್ಕೃತಿಕ ರಾಯಭಾರಿಯಾಗಿದ್ದರು. ಅವರ ಮಾದರಿಯಲ್ಲೇ ಇಂದಿನ ಯುವಜನತೆ ಮುನ್ನೆಡೆಯಬೇಕು.
>
> –ಮಹದೇವ ಶಂಕನಪುರ, ಸಾಹಿತಿ, ಚಿಂತಕ

ಕರ್ನಾಟಕ ಜಾನಪದ ಅಕಾಡಮಿ ಸದಸ್ಯ ದೇವಾನಂದ್ ವರಪ್ರಸಾದ್ ಮಾತನಾಡಿ, ಆಧುನೀಕತೆ, ಜಾಗತೀಕರಣದಿಂದ ಈ ನೆಲದ ಜನಪದ ಸಂಸ್ಕೃತಿ ಮರೆಯಾಗುತ್ತಿದೆ. ಯುವಕರು ತಮ್ಮನ್ನು ತಾವು ಅರಿಯಲು ಯುವಜನೋತ್ಸವ ವೇದಿಕೆಯಾಗಲಿದೆ. ಶಿಸ್ತು, ಸಂಯಮ, ಕ್ರಿಯಾಶೀಲ ಚಿಂತನೆ, ವ್ಯಕ್ತಿತ್ವ ವಿಕಸನಕ್ಕೆ ಯುವಜನೋತ್ಸವ ನೆರವಾಗಲಿದೆ. ಯುವಕರು ಇದನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಕಿವಿಮಾತು ಹೇಳಿದರು.

ನೆಹರು ಯುವ ಕೇಂದ್ರದ ನಿವೃತ್ತ ಪ್ರಾದೇಶಿಕ ಜಂಟಿ ನಿರ್ದೇಶಕ ಎಂ.ಎನ್.ನಟರಾಜು ಮಾತನಾಡಿ, ಚಾಮರಾಜನಗರ ಜಿಲ್ಲೆ ಯುವ ಪ್ರತಿಭೆಗಳ ಕಣಜವಾಗಿದೆ. ಯುವಜನ ಮೇಳದಿಂದ ಸಾಕಷ್ಟು ಕಲಾವಿದರು ಉದ್ಭವಿಸಲಿದ್ದಾರೆ. ಯುವಕರು ದೇಶದ ಶಕ್ತಿ ಆಗಿರುವುದರಿಂದ ಪ್ರತಿವರ್ಷ ಯುವಜನೋತ್ಸವ ನಡೆಸಲಾಗುತ್ತಿದೆ. ಇದು ದೇಶ ಕಟ್ಟಲು ಉತ್ತಮ ಬೆಳವಣಿಗೆಯಾಗಿದೆ. ಆಧುನೀಕತೆಯ ಸೊಗಡಿನಲ್ಲಿ ನಶಿಸುತ್ತಿರುವ ಗ್ರಾಮೀಣ ಜಾನಪದ ಸ್ಪರ್ಧೆಗಳನ್ನು ಪುನಶ್ಚೇತನಗೊಳಿಸಲು ಯುವಜನೋತ್ಸವ ನೆರವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಶಿವಸ್ವಾಮಿ, ಜಿಲ್ಲಾ ಯುವ ಪ್ರಶಸ್ತಿ ಪುರಸ್ಕೃತ ಕಾಳಿಂಗಸ್ವಾಮಿ, ಚಾಮರಾಜನಗರ ವಿಶ್ವವಿದ್ಯಾಲಯ ಜಾನಪದ ಉಪನ್ಯಾಸಕ ಶಿವರಾಜು, ಜೆಎಸ್‌ಎಸ್ ಬಿ.ಇಡಿ ಕಾಲೇಜಿನ ಉಪನ್ಯಾಸಕ ನಟೇಶ್, ಜನಪದ ಗಾಯಕರಾದ ಸಿ.ಎಂ.ನರಸಿಂಹಮೂರ್ತಿ, ಸುರೇಶ್‌ನಾಗ್, ಸೋಮಹಳ್ಳಿ ನಾಗರಾಜು, ಚಿತ್ರಕಲಾವಿದ ಮಧು, ಕಥೆಗಾರರಾದ ಶೀಲಾ ಸತ್ಯೇಂದ್ರ ಸ್ವಾಮಿ, ಇತರರು ಉಪಸ್ಥಿತರಿದ್ದರು.

ಡಿ.16, 17ರಂದು ಮರಿಯಾಲದಲ್ಲಿ ಶರಣ ಸಂಸ್ಕೃತಿ ವೈಭವ

ಚಾಮರಾಜನಗರ, ಡಿ.13–ತಾಲೂಕಿನ ಮರಿಯಾಲ ಗ್ರಾಮದ ಶ್ರೀ ಮುರುಘರಾಜೇಂದ್ರ ಮಠದ ಆವರಣದಲ್ಲಿ ಡಿ.16 ಮತ್ತು 17ರಂದು ಶರಣ ಸಂಸ್ಕೃತಿ ವೈಭವ, ಮುರುಘರಾಜೇಂದ್ರ ಸ್ವಾಮೀಜಿ ಆರಾಧನಾ ಮಹೋತ್ಸವ, ಲಿಂಗೈಕ್ಯ ಪೂಜ್ಯರ ಸ್ಮರಣೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ಹೇಳಿದರು.



ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಮರಿಯಾಲ ಮುರುಘ ಮಠ, ಭಕ್ತರು, ಗ್ರಾಮಸ್ಥರ ವತಿಯಿಂದ ಎರಡು ದಿನ ಕಾರ್ಯಕ್ರಮ ಆಯೋಜಿಸಲಾಗಿದೆ. ಡಿ.16ರ ರಾತ್ರಿ ಬಸವೇಶ್ವರ, ಮಠದ ಗುರುಪರಂಪರೆಯ ಪೂಜ್ಯರ ಭಾವಚಿತ್ರದ ಮೆರವಣಿಗೆ, ವಚನ ಸಂಪುಟ, ಜಂಗಮ ಪುಷ್ಪಾಂದೋಳಿಕ ಮಹೋತ್ಸವ ನಂದಿಧ್ವಜ, ವೀರಗಾಸೆ, ಇನ್ನಿತರ ಕಲಾತಂಡಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಜರುಗಲಿದೆ ಎಂದು ತಿಳಿಸಿದರು.

ಡಿ.17ರಂದು ಮುಂಜಾನೆ 4 ಗಂಟೆಗೆ ಕರ್ತೃ ಗದ್ದುಗೆಗೆ ಪೂಜೆ, ಬೆಳಗ್ಗೆ 7 ಗಂಟೆಗೆ ದೇವನೂರು ಮಠದ ಮಹಾಂತಸ್ವಾಮೀಜಿ ಷಟ್ ಸ್ಥಲಧ್ವಜಾರೋಹಣ ನೆರವೇರಿಸಲಿದ್ದು, 10.30ಕ್ಕೆ ಧಾರವಾಡ ಮಹಾಮನೆ ಮನಗುಂಡಿ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ಬೆಳಗಾವಿ ಚರಂತೇಶ್ವರ ಮಠದ ಶ್ರೀ ಶರಣ ಬಸವದೇವರು ಸ್ವಾಮೀಜಿ ಧಾರ್ಮಿಕ ಪ್ರವಚನ ನೀಡಲಿದ್ದಾರೆ. ವಿವಿಧ ಮಠಾಧೀಶರು ಭಾಗವಹಿಸಲಿದ್ದಾರೆ. ರಾತ್ರಿ 10 ಗಂಟೆಗೆ ಮೇಲಾಜಿಪುರ ಗುರುಮಲ್ಲೇಶ್ವರ ನಾಟಕ ಮಂಡಳಿಯಿಂದ 'ಬಸವರಾಜ ವಿಜಯ' ನಾಟಕ ಪ್ರದರ್ಶನ ನಡೆಯಲಿದೆ ಎಂದರು.

ಡಿ.16ರಂದು ಬೆಳಗಾವಿ ಸುವರ್ಣಸೌಧ ಮುತ್ತಿಗೆ



ಸುದ್ದಿಗೋಷ್ಠಿಯಲ್ಲಿ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿದರು.

ಚಾಮರಾಜನಗರ, ಡಿ.13– ಪ್ರತಿ ಟನ್ ಕಬ್ಬಿಗೆ 5500 ರೂ. ನಿಗದಿ ಮಾಡಬೇಕು, ಬಾಕಿ 950 ಕೋಟಿ ರೂ. ತಕ್ಷಣ ಪಾವತಿಸಬೇಕು, ರೈತರ ಸಂಪೂರ್ಣ ಸಾಲಮನ್ನಾ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಡಿ.16ರಂದು ಬೆಳಗಾವಿಯ 'ಸುವರ್ಣಸೌಧ' ಮುತ್ತಿಗೆ ಹಾಕಲಾಗುವುದು ಎಂದು ಕಬ್ಬು ಬೆಳೆಗಾರರ ಸಂಘ ಹಾಗೂ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ರೈತ ಸಂಘಟನೆಗಳ ಏಕೀಕರಣ ಹೋರಾಟ ಮತ್ತು ರಾಜ್ಯ ಕಬ್ಬು ಬೆಳೆಗಾರ ಸಂಘದ ನೇತೃತ್ವದಲ್ಲಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 10ಕ್ಕೆ ಬೆಳಗಾವಿ ನಗರದ ರೈತ ಸರ್ಕಲ್‌ನಿಂದ ಪಾದಯಾತ್ರೆಗೆ ಚಾಲನೆ ನೀಡಲಾಗುವುದು. ನಂತರ ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕಲಾಗುವುದು. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಂದ ರೈತ ಸಂಘಟನೆ 250 ಪದಾಧಿಕಾರಿಗಳು ಸೇರಿ ರಾಜ್ಯದ ವಿವಿಧೆಡೆಯಿಂದ 1 ಲಕ್ಷಕ್ಕೂ ಹೆಚ್ಚು ರೈತರು ಭಾಗವಹಿಸುವ ನಿರೀಕ್ಷೆಯಿದೆ. ಬೆಳಗಾವಿಗೆ ಉಚಿತ ರೈಲು ಪ್ರಯಾಣ ವ್ಯವಸ್ಥೆ ಮಾಡಲಾಗಿದೆ. ಜಿಲ್ಲೆಯ ರೈತರು ಸ್ವಯಂ ಪ್ರೇರಿತವಾಗಿ ಆಗಮಿಸಬೇಕೆಂದು ಮನವಿ ಮಾಡಿದರು.

ಬಗರ್‌ಹುಕುಂ ಸಾಗುವಳಿ ಚೀಟಿಯನ್ನು ತಕ್ಷಣ ನೀಡಬೇಕು, ರೈತರಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಗೊಳಿಸುವ ಎಂ.ಎಸ್.ಸ್ವಾಮಿನಾಥನ್ ವರದಿ ಜಾರಿಗೊಳಿಸಬೇಕು, ಇಂಧನ ಇಲಾಖೆಯ ಖಾಸಗೀಕರಣ ತಕ್ಷಣ ಕೈ ಬಿಟ್ಟು ಅಕ್ರಮ ಸಕ್ರಮ ಯೋಜನೆ ಮರುಜಾರಿ ಮಾಡಬೇಕು ಎಂದು ಪಾದಯಾತ್ರೆ ಮೂಲಕ ಒತ್ತಾಯಿಸಲಾಗುವುದು ಎಂದರು.

ಕೃಷಿ ಸಾಲಕ್ಕೆ ಸಿಬಿಲ್ ಸ್ಕೋರ್ ಪರಿಗಣಿಸಬಾರದು, ಆರ್‌ಟಿಸಿಗಳಲ್ಲಿ ವಕ್ಫ್ ಮಂಡಳಿ ಹೆಸರು ಬಂದಿರುವುದನ್ನು ತಿದ್ದುಪಡಿ ಮಾಡಿ, ಆದೇಶವನ್ನು ಗೆಜೆಟ್ ನೋಟಿಫಿಕೇಶನ್‌ನಲ್ಲಿ ಪ್ರಕಟಿಸಬೇಕು. ಕಾಡುಪ್ರಾಣಿಗಳ ಹಾವಳಿಯಿಂದ ನಷ್ಟ ಹೊಂದಿರುವ ರೈತರಿಗೆ ವೈಜ್ಞಾನಿಕ ಬೆಳೆ ನಷ್ಟ ನೀಡಬೇಕು. ಕೇಂದ್ರ ಸರ್ಕಾರ ನಬಾರ್ಡ್ ಕೃಷಿ ಸಾಲಕ್ಕೆ ಕೊಡುವ ಯೋಜನೆಗಳನ್ನು ಕಡಿತಗೊಳಿಸಿರುವುದನ್ನು ಮರುಪರಿಶೀಲಿಸಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಚಾಮರಾಜನಗರ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ಉಡಿಗಾಲ ಗ್ರಾಮ ಘಟಕದ ಅಧ್ಯಕ್ಷ ಮಂಜುನಾಥ್, ಜಿಲ್ಲಾ ಕಾರ್ಯದರ್ಶಿ ಮಲೆಯೂರು ಮಹೇಂದ್ರ ಮುಖಂಡರಾದ ಪ್ರಕಾಶ್ ಗಾಂಧಿ ಗುರುವಿನಪುರ ಗ್ರಾಮ ಘಟಕದ ಅಧ್ಯಕ್ಷ ಮೋಹನ್, ತಮ್ಮಡಹಳ್ಳಿ ದಿನೇಶ್, ಗುರುವಿನಪುರ ವಿನಯ್ ಹಾಜರಿದ್ದರು.

ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದಿಂದ ಪ್ರತಿಭಟನೆ

ಚಾಮರಾಜನಗರ: ಕಾಂಗ್ರೆಸ್ ಸರ್ಕಾರ ರಾಜ್ಯದ ಹಿಂದುಳಿದ ವರ್ಗಗಳ 22 ನಿಗಮಗಳಿಗೆ ಅನುದಾನ ನೀಡುತ್ತಿಲ್ಲ ಎಂದು ಆರೋಪಿಸಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಕಾರ್ಯಕರ್ತರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ನಗರದ ಚಾಮರಾಜೇಶ್ವರ ದೇವಸ್ಥಾನ ಎದುರು ರಾಜ್ಯ ಬಿಜೆಪಿ ಉಪಾಧ್ಯಕ್ಷ ಎನ್.ಮಹೇಶ್ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ, ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿ ವಿರುದ್ಧ ಘೋಷಣೆ ಕೂಗಿದರು. ನಂತರ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತಕ್ಕೆ ತೆರಳಿ ಅಲ್ಲಿನ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಅಪರ ಜಿಲ್ಲಾಧಿಕಾರಿ ಗೀತಾಹುಡೇದ ಅವರಿಗೆ ಮನವಿ ಸಲ್ಲಿಸಿದರು.



ಚಾಮರಾಜನಗರದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಹೇಶ್ ಮಾತನಾಡಿ, ಸಿದ್ದರಾಮಯ್ಯ ಅಹಿಂದ ವರ್ಗಗಳ ಮತಗಳನ್ನು ಪಡೆದು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ. ಆ ವರ್ಗಗಳಿಗೆ ನ್ಯಾಯ ಕಲ್ಪಿಸಲು ಸಂಪೂರ್ಣ ವಿಫಲರಾಗಿದ್ದಾರೆ. ಒಂದು ಸಮುದಾಯವನ್ನು ತೃಪ್ತಿಕರಿಸುವ ಭರದಲ್ಲಿ ಹಿಂದುಳಿದ ವರ್ಗಗಳಿಗೆ ದ್ರೋಹ ಎಸಗಿದ್ದಾರೆ ಎಂದು ಆರೋಪಿಸಿದರು.

ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳು ಸೇರಿದ 22 ನಿಗಮಗಳಿಗೆ ಆರ್ಥಿಕವಾಗಿ ಸಬಲೀಕರಣಗೊಳಿಸಲು ಅನುದಾನ ನೀಡುವ ಬದಲು ಒಂದು ಸಮುದಾಯವನ್ನು ಗುರಿಯಾಗಿಟ್ಟುಕೊಂಡು 350 ಕೋಟಿ ರೂ. ಅನ್ನು ಅಲ್ಪಸಂಖ್ಯಾತ ನಿಗಮಕ್ಕೆ ನೀಡಿದ್ದಾರೆ. ಇದರಲ್ಲಿ ಕ್ರೈಸ್ತರು ಮತ್ತು ಜೈನರಿಗೆ ನಯಾಪೈಸೆ ಅನುದಾನ ನೀಡಿಲ್ಲ. 22 ನಿಗಮಗಳಲ್ಲಿ ಒಳಪಡುವ ನೂರಾರು ಹಿಂದುಳಿದ ವರ್ಗಗಳ ಸಮುದಾಯಗಳಿಗೆ ಕೇವಲ 150 ಕೋಟಿ ರೂ. ನೀಡುವ ಮೂಲಕ ಅನ್ಯಾಯ ಎಸಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮೂಡ್ನಾಕೂಡು ಪ್ರಕಾಶ್, ಹೊನ್ನೂರು ಮಹದೇವಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಶಿವುವಿರಾಟ್, ಅರಕಲವಾಡಿ ನಾಗೇಂದ್ರ, ಓಬಿಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಗೋಪಾಲಕೃಷ್ಣ, ಸೋಮಣ್ಣ ಉಪ್ಪಾರ್, ಲೋಕೇಶ್ ಜತ್ತಿ, ಮಾಜಿ ಅಧ್ಯಕ್ಷ ನಟರಾಜೇಗೌಡ, ಬಂಗಾರ ನಾಯಕ, ತಾಪಂ ಮಾಜಿ ಸದಸ್ಯ ಕಬ್ಬಹಳ್ಳಿ ರೇವಣ್ಣ, ಯುವ ಮೋರ್ಚಾ ಅಧ್ಯಕ್ಷ ಸೂರ್ಯ, ಆನಂದ ಭಗೀರಥ, ಅಗರರಾಜು, ಸೋಮಣ್ಣ, ದೊಡ್ಡರಾಜು, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮೂಡಹಳ್ಳಿ ಮೂರ್ತಿ, ನಗರ ಮಂಡಲಾಧ್ಯಕ್ಷ ಪುನೀತ್, ಚುಂಗಡಿಪುರ ಮಹೇಶ್, ನಗರಸಭಾ ಮಾಜಿ ಸದಸ್ಯ ಶಿವಣ್ಣ, ಹನೂರು ಶ್ರೀನಿವಾಸಮೂರ್ತಿ, ರಾಜಶೆಟ್ಟಿ ಭಾಗವಹಿಸಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಸೆಸ್ಕ್ ಸಂತೇಮರಹಳ್ಳಿ ಉಪವಿಭಾಗದ ವ್ಯಾಪ್ತಿಯಲ್ಲಿ ಮೂರನೇ ತ್ರೈಮಾಸಿಕ ನಿರ್ವಹಣೆ ಹಮ್ಮಿಕೊಂಡಿರುವುದರಿಂದ ಡಿ.14ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆ ವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಉಮ್ಮತ್ತೂರು, ಬಾಗಳಿ, ಲಿಂಗಣಾಪುರ, ಜನ್ನೂರು, ಜನ್ನೂರು ಹೊಸೂರು, ಹಳ್ಳಿಕೆರೆಹುಂಡಿ, ಗಣಗನೂರು, ಗಣಗನೂರುಪುರ, ನವಿಲೂರು, ಆಲ್ದೂರು, ಬಿಎಂಕೆ ಹುಂಡಿ, ಗೊದ್ದಲಹುಂಡಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

SITE FOR SALE
N/E Corner 60x70
Suvarna Nagara, Bogadi Road.
Mob: 8050821108

ಮನೆ ಬಾಡಿಗೆಗೆ ಇದೆ
ಮೈಸೂರು ನಗರದ ಖಿಲ್ಲೆ ಮೊಹಲ್ಲಾ ವಿದ್ಯಾರಣ್ಯಪುರಂ, 4ನೇ ಮೇನ್, 15ನೇ ಕ್ರಾಸ್‌ನಲ್ಲಿ 1ನೇ ಅಂತಸ್ತಿನ 2 ಬೆಡ್‌ರೂಂ ಹಾಗೂ ಸೋಲಾರ್ ವ್ಯವಸ್ಥೆಯುಳ್ಳ ಮನೆ ಬಾಡಿಗೆಗೆ ದೊರೆಯುತ್ತದೆ. (ಸಸ್ಯಾಹಾರಿಗಳಿಗೆ ಮಾತ್ರ) ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9036859947
0821-2485648

ಸೈಟು ಮಾರಾಟಕ್ಕಿದೆ
30x40 ಪೂರ್ವದಿಕ್ಕು ಕುವೆಂಪುನಗರ
40x45 ಕಾರ್ನರ್ ಆದಿತ್ಯ ಸರ್ಕಲ್, ದಟ್ಟಗಳ್ಳಿ
9901676619
9741076619

WANTED SITES
@ MYS-NANJANGUD ROAD, KADAKOLA, MANDAKALLI, VIJAYANAGAR, YELWALA & MYSORE SURROUNDINGS
QUICK REGN.
93421-25252

ಸಿಪಾಯಿ ಪ್ರಾಪರ್ಟೀಸ್
1) ಕುಬೇರಾನಂದ ಸಾಗರ ಲೇಔಟ್‌ನಲ್ಲಿ ಈಸ್ಟ್ ಫೇಸ್ 30x40 ಅಳತೆಯ ಸೈಟ್ ಮಾರಾಟಕ್ಕಿದೆ. ಬೆಲೆ 25 ಲಕ್ಷ, ನೆಗೋಷಿಯೆಬಲ್
2) ಇಲವಾಲ ಬಸ್ ನಿಲ್ದಾಣ ಹಿಂಭಾಗದಲ್ಲಿರುವ ಬಸವಸಾಗರ ಫೇಸ್ 2ನೇ ಹಂತದಲ್ಲಿ 60 ಅಡಿ ರಸ್ತೆಯಲ್ಲಿ 40x60 ಅಳತೆಯ ಸೈಟ್‌ಗಳು ಮಾರಾಟಕ್ಕಿವೆ. ಬೆಲೆ 55 ಲಕ್ಷ ನೆಗೋಷಿಬಲ್
ನಂಜುಂಡಸ್ವಾಮಿ ಹೆಚ್.ಎಸ್. ಮಾಜಿ ಸೈನಿಕರು
9483862050
7829779070

FOR SALE
40x60 North Facing MUDA Approved Commercial Site, 80 ft Road, Near Christ Public School, Bogadi, Mysore.
Rs. 8335/- per Sft.
Contact: 9740328018

ಸೈಟುಗಳು ಮಾರಾಟಕ್ಕಿದೆ
30x40 S/F
30x50 E/F
ಸುವರ್ಣಾ ನಗರ
ಬೋಗಾದಿ, ಗದ್ದಿಗೆ ರಸ್ತೆ
9742421313
9945779947

STAFF REQUIRED
Tandoori Chef
Indian Chef
Chinese Chef
Pantry Assistant Boy/Girl
Steward
Contact between 10 am to 9am
8867918180
8050997555

ಖಾಲಿ ಜಾಗ
5000 ಅಡಿ
ಬಾಡಿಗೆಗೆ ದೊರೆಯುತ್ತದೆ
1ನೇ ಹಂತ, ವಿಜಯನಗರ ವಾಟರ್ ಟ್ಯಾಂಕ್ ಪಕ್ಕ
9448978383

SITES FOR SALE
20x30, 30x40
(Bank Loan Available)
Sri Rampura Ring Road Mysuru
8050345574

ಮನೆ ಮಾರಾಟಕ್ಕಿದೆ
30x40 ಅಳತೆಯ 3 ಮಹಡಿಯ ಮನೆ ಶಾರದಾದೇವಿನಗರದಲ್ಲಿ ಮಾರಾಟಕ್ಕೆ ಇದೆ.
9845607898

MUDA Approved Sites for Sale
Bogadi Road
Suvarna Layout, attached Sanvi Layout (G9 Project)
30x40 & 30x43
Per Sq. Ft. 1900/-
9483862050, 8951144240

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ
ಹೆಲ್ಪರ್ ಮತ್ತು ಕ್ಯಾಷಿಯರ್
ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ
ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ.
Mob: 6364748485



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

30x40 Site For Sale
In Koppallur Near JP Nagar Ring Road 40x55 Corner Old House For Sale in Allanhalli Cont:
9880344263

ಬೇಕಾಗಿದ್ದಾರೆ
ಶ್ರೀ ಛಾಯಾದೇವಿ ಅನಾಥಾಶ್ರಮ ಮೈಸೂರು ಇಲ್ಲಿ ಚಿಕ್ಕ-ಚಿಕ್ಕ ಮಕ್ಕಳನ್ನು ಸಂಸ್ಥೆಯಲ್ಲೇ ಉಳಿದುಕೊಂಡು ನೋಡಿಕೊಳ್ಳುವವರು ಕೆಲಸಕ್ಕೆ ಬೇಕಾಗಿದ್ದಾರೆ. ಉಚಿತ ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ.
8431750240
9482163177

ಬೇಕಾಗಿದ್ದಾರೆ
ಕಾರ್ ಡ್ರೈವರ್ ಬೇಕಾಗಿದ್ದಾರೆ.
7026515156

BECOME A TEACHER
Nursery Teachers Training
SSLC ಪಾಸ್ PUC, Degree ಪಾಸ್ / ಫೇಲ್!
ಟ್ರೈನಿಂಗ್ ನಂತರ ತಕ್ಷಣ ಕೆಲಸ
ಬನ್ನಿ, ಸೇರಿ, ಪಾಸಾಗಿ, ಸಂಪಾದಿಸಿ.
ವಿವರಗಳಿಗೆ
Watsapp/Call 9113980741

HOUSE FOR SALE
80% completed duplex house, constructed in 30x50 MUDA approved site near Mysore Public School, H.D. Kote Road for immediate sale.
Price: Rs. 1.1 Cr. Nego.
9071031112, 8910310217

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಮಾರುತಿ

ಟ್ಯೂಬ್ ವೆಲ್ಸ್ (ರಿ)
ಬೋರ್‌ವೆಲ್ ಡ್ರಿಲ್ಲಿಂಗ್ @
ಸಿಟಿ - ₹80/- ಸೈಟ್ ಬೋರ್‌ವೆಲ್
ಗ್ರಾಮೀಣ - ₹85/- ಕೃಷಿ ಬೋರ್‌ವೆಲ್
ಮೈಸೂರು ತಾಲೂಕಿನಲ್ಲಿ ಮಾತ್ರ · ಸೀಮಿತ ಅವಧಿ ಆಫರ್
8184000444

K.K. Multi Talented Group
ಬೇಕಾಗಿದ್ದಾರೆ, ಸ್ವಯಂ ಉದ್ಯೋಗ
7760810381

SITE FOR SALE
50x80
3 sites for sale North face, 40 feet road Roopanagara attached to SBM layout
Price 4000/ per sqft
8792235466
8884616461

SITE FOR SALE
30x40 Dattagalli Near to New RT Nagar, Mysore and Old House or New House or Site For Sale. Contact Banashankari Enterprises
9945042875

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ ಕೆ.ಎನ್.ಪಣಿಕ್ಕರ್ (ಕೇರಳ)
ಮೋಡಿಮಾಂತ್ರಿಕರು ಪಂಡಿತ್ ಕೆ.ಎಸ್.ಕುಮಾರ್ (ಕೊಳ್ಳೇಗಾಲ)
90369 84793
ಇವರು ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಸ್ತ್ರೀ ಪುರುಷ, ಪ್ರೇಮ, ವಿವಾಹ, ಸಂತಾನ, ಅತ್ತೆಸೊಸೆ ಜಗಳ, ಕೌಟುಂಬಿಕ ಕಲಹಗಳು, ಕೋರ್ಟು ಕಛೇರಿ, ರಾಜಕೀಯ, ಹಣಕಾಸಿನ ಸಮಸ್ಯೆ, ವ್ಯಾಪಾರ, ವಿದೇಶ ಪ್ರಯಾಣ, ಗಂಡ-ಹೆಂಡತಿ ಜಗಳ, ರಾಜಕೀಯ ತನ್ನವರೆ ತನಗೆ ಶತ್ರು, ಶತ್ರು ನಾಶ ಇನ್ನೂ ಯಾವುದೇ ಗುಪ್ತ ನಿಗೂಢ ಸಮಸ್ಯೆಗಳಿಗೆ ಕೇರಳ ಮತ್ತು ಕೊಳ್ಳೇಗಾಲದ ಮಂತ್ರ ಶಕ್ತಿಗಳಿಂದ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ. ಇಂದೇ ಭೇಟಿ ಮಾಡಿ ಅಥವಾ ಕರೆ ಮಾಡಿ.
ಖಾಯಂ ವಿಳಾಸ #31, ಹುಣಸೂರು ಮೇನ್ ರೋಡ್, ಮಧೂಸ್ ಟೈರ್ ಹತ್ತಿರ, ಭೂದೇವಿ ಛಾರು ಎದುರು, ಮೈಸೂರು

ಬೇಕಾಗಿದ್ದಾರೆ
* ಹೌಸ್‌ಕೀಪಿಂಗ್ ಹುಡುಗರು
* ಹೌಸ್‌ಕೀಪಿಂಗ್ ಮಹಿಳೆಯರು
* ಸೆಕ್ಯೂರಿಟಿ ಗಾರ್ಡ್
ಹೋಟೆಲ್ ಉದ್ಯಮದಲ್ಲಿ ಅನುಭವ ಅಗತ್ಯ. 30 ರೂಮುಗಳುಳ್ಳ ಪ್ರತಿಷ್ಠಿತ ಹೋಟೆಲ್(ಲಾಡ್ಜ್)ಗೆ ಬೇಕಾಗಿದ್ದಾರೆ. ಸಂತ ಫಿಲೋಮಿನಾ ಚರ್ಚ್ ಹತ್ತಿರ, ಅಶೋಕ ರಸ್ತೆ, ಮೈಸೂರು.
6363477213, 9538651845

BUNGALOW for SALE at NIVEDITANAGAR
4 Bedroom Duplex, 50x60, MUDA, 12 years Old, East Facing, Max Cheque Payment Prefered
PRICE - 2.98 CR
Behind Bharath Petrol Pump
Contact Owner. Brokers Excuse
8296493739

ಹೊಸ ಮನೆ ಮಾರಾಟಕ್ಕಿದೆ
3BHK 30x40
Built up Area 1500 SF
ಮುಡಾ ಅಪ್ರೂವ್
ಸೆಂಟ್ ಜೋಸೆಫ್ ಶಾಲೆಯ ಹತ್ತಿರ ಹುಯಿಲಾಳು, ಮೈಸೂರು
8217851695

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕಡಿಮೆ ಬಂಡವಾಳದ ಸೈಟುಗಳು ಮಾರಾಟಕ್ಕಿದೆ
30x40, 30x50
ಐಶ್ವರ್ಯ ಗಾರ್ಡನ್ ಹುಣಸೂರು ಮುಖ್ಯ ರಸ್ತೆ
7338445413

ನಿವೇಶನಗಳು ಮಾರಾಟಕ್ಕಿದೆ
20x30 ವಿದ್ಯಾವಿಕಾಸ್ ಕಾಲೇಜ್ ಹತ್ತಿರ ಬನ್ನೂರು ರಸ್ತೆ
8050821108

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7996497954

ಕೊಳ್ಳೇಗಾಲದ ಜ್ಯೋತಿಷ್ಯರು
ASTROLOGER
ಪಂಡಿತ್.ಕೆ, ಪ್ರಶಾಂತ್ ಆಚಾರ್ಯ
9740947045
ಇವರು ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಸ್ತ್ರೀ ಪುರುಷ ಪ್ರೇಮ, ಪ್ರಮೋಷನ್, ಪ್ರೇತ ಬಾಧೆ, ವಿವಾಹ, ಸಂತಾನ, ಅತ್ತೆ ಸೊಸೆ ಜಗಳ, ಕೌಟುಂಬಿಕ ಕಲಹಗಳು, ಕೋರ್ಟು ಕಚೇರಿ, ಹಣಕಾಸಿನ ಸಮಸ್ಯೆ, ವ್ಯಾಪಾರ, ವಿದೇಶ ಪ್ರಯಾಣ, ರಾಜಕೀಯ, ತನ್ನವರೇ ತನಗೆ ಶತ್ರು, ಶತ್ರು ನಾಶ ಇನ್ನೂ ನಿಮ್ಮ ಯಾವುದೇ ಗುಪ್ತ ನಿಗೂಢ ಸಮಸ್ಯೆಗಳಿಗೆ ಕೊಳ್ಳೇಗಾಲದ ಭದ್ರಕಾಳಿ ಮತ್ತು ಚೌಡಿ ಮಂತ್ರ ಶಕ್ತಿಗಳಿಂದ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ. ಇಂದೇ ಬೇಟಿ ಮಾಡಿ ಅಥವಾ ಕರೆ ಮಾಡಿ.
ಖಾಯಂ ವಿಳಾಸ:- ಹೋಟೆಲ್ ಗೋವರ್ಧನ, ಶ್ರೀ ಹರ್ಷ ರೋಡ್, ಡಾಕ್ಟರ್ ರಾಜಕುಮಾರ್ ಪಾರ್ಕ್ ಸಮೀಪ, ಹೊಸ ಸುಮಂಗಲಿ ಸಿಲ್ಕ್ಸ್ ಹತ್ತಿರ, ಮೈಸೂರು.

WANTED
For Donne Biryani Restaurant In Mysore
Chef - Indian (Nati style), Tandoori.
Caption with 2 year + experience (Language - Kannada and English)
Cleaning + washing (only boys)
Contact
7204284585

MAHENDRA DEVELOPERS
is looking for a Dynamic and dedicated persons for
MARKETING EXECUTIVES - 2
SITE ENGINEERS - 2
COOK - 1. Contact:
8884001233, 9620546347

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

COMMERCIAL SITE FOR SALE
In KBL gardania, 40X60 south face, 60 feet road Attached to vijaynagar 4th stage
Price- 4500/pr sqft
8884616461
8792235466

ಸೈಟು ಬೇಕಾಗಿದೆ
ವರುಣ, ವಾಜಮಂಗಲ ATME ಕಾಲೇಜು, ಬ್ಯಾಂಕರ್ಸ್ ಲೇಔಟ್, ಮಹಾಲಕ್ಷ್ಮೀ ಲೇಔಟ್ ಹಾಗೂ ಇತರೆ ಅಕ್ಕಪಕ್ಕದ ಬಡಾವಣೆಗಳಲ್ಲಿ ಟಿ.ನರಸೀಪುರ ರಸ್ತೆ, ಬನ್ನೂರು ರಸ್ತೆ.
9686071750

SITE FOR SALE
Temple Bells Phase 2
30/40, 20/30 Sites For Sale In Vivekanada Circle Near Bhramaramba Choultry Mysore
PH: 9900464111

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರನ್ನು, ರೋಗಿಗಳನ್ನು ಅವರ ಮನೆಯಲ್ಲೇ ನೋಡಿಕೊಳ್ಳಲು ಗಂಡಸರು / ಹೆಂಗಸರು ಮೈಸೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ ನೀಡಲಾಗುವುದು.
Mob: 9880102700

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

SITES FOR SALE
* 33x60 South East corner commercial site for sale in KBL Silicon City, KRS road rate 95 Lakh.
* 50x80 80 ft road site for sale in KBL Enclave, attached to Vijayanagar 4th Stage near Teju corner. Rate 2.65 Cr.
9964474120 & 8722993477

ಸೈಟುಗಳು ಮಾರಾಟಕ್ಕಿವೆ
20x30, 30x40
30x50, 40x60
ಹುಣಸೂರು ಮುಖ್ಯ ರಸ್ತೆ ಮೈಸೂರು-ಮಡಿಕೇರಿ ನ್ಯಾಷನಲ್ ಹೈವೆ
Investment Purpose
7338445412

ಜಮೀನು ಮಾರಾಟಕ್ಕಿದೆ
ಮೈಸೂರಿನ ಕುವೆಂಪು ನಗರದಿಂದ ಕೇವಲ 6 ಕಿಲೋಮೀಟರ್ ದೂರದಲ್ಲಿರುವ ಪೆರಿಫೆರಲ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ ಲೇಔಟ್‌ಗೆ ಸೂಕ್ತವಾದ 8.5 ಎಕರೆ ಜಮೀನು ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
ಸಂಪರ್ಕಿಸಿ: ಡಾ.ಗುರುಪ್ರಸಾದ್
9036284426

ಮನೆ ಭೋಗ್ಯಕ್ಕಿದೆ
ಶಾರದಾದೇವಿ ನಗರ, ಸ್ವಾಮಿ ವಿವೇಕಾನಂದ ರಸ್ತೆ, ಗ್ರೌಂಡ್‌ಫ್ಲೋರ್, ಒಂದು ಬಿಹೆಚ್‌ಕೆ ಮನೆ 4 ಲಕ್ಷಕ್ಕೆ ಇದೆ.
ಸಂಪರ್ಕಿಸಿ:
Mob: 8105409529

HOUSE FOR RENT
First floor, two bedroom, East facing nearly built up house @ Krishnamurthypuram, Mysore. Brahmin's only. Rent Rs. 15,000 per month. Contact:
Mob: 9141915294

WANTED
North - West Corner Site in Mysore City.
Contact:
8884001233, 9620546347

SITE FOR SALE
30x50, West face (Alliance Cerene) Mysore-Bannur Road, Vajamangala. Price is 3500 per sq.ft.
7975298494, 9844545718

SITE FOR SALE
East facing corner site, 8.7 Mtrs x 12 Mtrs (1124 Sq.ft.), MUDA khata (e-Khata) Rs. 3500 per sq.ft., slightly negotiable.
Direct Owner
Mob: 9342123373

WANTED TEACHERS
JNANAJYOTHI VIDYALAYA (English medium) Highschool. Beerihundi. Wanted teachers for Science and Mathematics, Kannada. Social science, Hindi teachers wanted immediately. Contact-
9845390377
8197057626

WANTED
Computer Billing Operator
APMC, Bandipalya
Male Candidates with Exp. In Billing, Stock Inventories Using tally
Age: 35 to 50
7019363613

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಬೇಕಾಗಿದ್ದಾರೆ
MARUTHI SUZUKI ARENA AND TATA MOTORS CAR SHOWROOM ಗಳಿಗೆ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಷಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (*ಸಂಬಳ: 18000 Rs ಇಂದ 30000 Rs + ಇನ್ಸೆಂಟಿವ್ಸ್*) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ.
9535849148, 7411273440

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

HOUSE FOR SALE
20x40 MUDA auction North East corner 4 BHK triplex new furnished house with 2 car parking and one commercial shop house for sale in Vijayanagar 4th Stage, 2nd Phase.
Rate 1.30 Cr. Negotiable
9964474120, 8722993477

28x40 S/W ಕಾರ್ನರ್ ಸೈಟು ಮಾರಾಟಕ್ಕಿದೆ 15 ಲಕ್ಷಗಳು.
30x46 N/F ಸೈಟು ಮಾರಾಟಕ್ಕಿದೆ. 18 ಲಕ್ಷದ 50 ಸಾವಿರಗಳು.
GSS ಲೇಔಟ್ ತಳೂರು ಟಿವಿಎಸ್ ಫ್ಯಾಕ್ಟರಿ ಹತ್ತಿರ, ಮೈಸೂರು.
Mob: 9742198093

ನೂತನವಾಗಿ ಆರಂಭವಾಗಿರುವ ಮೈಸೂರು ಸ್ಟೀಲ್ ಕಾರ್ಪೋರೇಷನ್ ಉತ್ಪಾದಕರು ಹೋಲ್‌ಸೇಲ್ ದರದಲ್ಲಿ ಸೆಂಟ್ರಿಂಗ್ ಶೀಟ್ಸ್, ಜ್ಯಾಕ್‌ಪೈಪ್ ಟ್ರಸ್‌ಗಳು (ಸ್ಪ್ಯಾನ್) ಮಾರಾಟ ಮಾಡಲಾಗುವುದು.
8667801765, 6363022455
3208/1, C.V.Road, 1st Cross, B.B.Mill Bannimantap, Mysuru

PG ಯಲ್ಲಿ ಉಳಿದುಕೊಂಡು ಅಡುಗೆ ಮಾಡಲು ಮಹಿಳೆಯರು ಮತ್ತು Helpers ಬೇಕಾಗಿದ್ದಾರೆ.
8970132554

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

CHANGE OF NAME
I, ASMA FARHA, aged about 38 years, wife of Mr. Mohammed Jaffer Ali Khaan L.N., residing at Door No. 203, Sudarshana Apartment, Vishweshwara Nagara, 2nd Stage, Mysuru-570008, have changed my name from "ASMA FARHA GHULAM GHOUSE KHAN" to "ASMA FARHA", vide Notarized Affidavit dated 06-11-2024 before Notary Smt. Geetha R., Reg. No. 5579, Mysuru.
Date: 14-12-2024 Sd/- ASMA FARHA

AFFIDAVIT
I, Akbar, residing at #1317, Renukadevi Block, 3rd Cross, Ghousia Nagar, Mysore-570 019, declare that my father correct name is Late Abdul Rahaman. In Aadhar card and some other documents it is mentioned correctly as Late Abdul Rahaman. But in Driving License (DL No. KA 55 20100002073) my father name was wrongly mentioned as Ahmed Shariff. Hence I declare that both Ahmed Shariff and Late Abdul Rahaman, both names belong to my father name and same one person. I declare this in front of Notary Rajeshwari on 13-12-2024.
Sd/- Akbar

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SHOP FOR RENT
(Metal Sheet Shop)
8x10
Nivedithanagar
Call: 9980985550

SITE FOR SALE
Muda approved 30x40 In bairava enclave just 50 Meter from main road Just 500 meter from vijaynagar 4th stage, Bogadi gadige main road
Price- Rs 4100/pr sqft
8792235466
8884616461

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಮತ್ತು ಸರಸ್ವತಿಪುರಂ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ಸಂಬಳ: ರೂ.10,500/-
ESI & PF ಸೌಲಭ್ಯವಿರುತ್ತದೆ.
9620667819
9880727819

SITE FOR SALE @ ROOPANAGAR
40x50
Good Location
Attached to SBM Bogadi Near Double Road
7676830832

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ಉನ್ನತ ಕಂಪನಿ ಕಾರ್ಖಾನೆಗಳಿಗೆ ಹೋಟೆಲ್‌ಗಳು ಕೂರ್ಗಳ್ಳಿ, ಹೂಟಗಳ್ಳಿ, ಮೇಟಗಳ್ಳಿ, ಹೆಬ್ಬಾಳು, ಹಿನಕಲ್ ಬೋಗಾದಿ ಇಲ್ಲಿ ಕೆಲಸ ಮಾಡಲು Helperಗಳು ಸೆಕ್ಯೂರಿಟಿಗಳು, ಹೌಸ್‌ಕೀಪಿಂಗ್‌ಗಳು, ಕೆಲಸಕ್ಕೆ ಬೇಕಾಗಿದ್ದಾರೆ.
ವಿದ್ಯಾಭ್ಯಾಸ: 7th, 10th, PUC, Any Degree & ITI, Diploma,
ESI & PF ಸೌಲಭ್ಯ ಹಾಗೂ ಉನ್ನತ ಸಂಬಳ ಊಟ ವಸತಿ ಸೌಲಭ್ಯ ವಿರುತ್ತದೆ.
Field Officer ತಕ್ಷಣ ಬೇಕಾಗಿದ್ದಾರೆ.
9036461347, 9611208553

ತಕ್ಷಣ ಬೇಕಾಗಿದ್ದಾರೆ
TVS ಟಿಯೋಟಾ, ಬ್ರಿಟಾನಿಯಾ MNC ಕಂಪನಿಗಳಿಗೆ, ಆಫೀಸ್‌ಗಳಿಗೆ ಶೋರೂಂಗಳಿಗೆ, 5th, 7th, 10th, PUC, Degree, DIploma, ITI, All-rounder ಯುವಕ-ಯುವತಿಯರು ಸಂಬಳ: 18000/- 60000/- ವಸತಿಯೂಟವಿದೆ.
9036791033

ವಾಣಿಜ್ಯ ನಿವೇಶನ ಮಾರಾಟಕ್ಕಿದೆ
1) 45x60 ಉತ್ತರ ಮುಖ ಆದಿಚುಂಚನಗಿರಿ 80ft ಮುಖ್ಯ ರಸ್ತೆ, ಎನ್.ಬ್ಲಾಕ್, ಕುವೆಂಪುನಗರ, ಮೈಸೂರು
2) 50x80 ಪಶ್ಚಿಮ ಮುಖ ಆದಿಚುಂಚನಗಿರಿ ಮುಖ್ಯ 80 ಅಡಿ ರಸ್ತೆ, KHB Vನೇ ಫೇಸ್ ಕುವೆಂಪುನಗರ, ಮೈಸೂರು
9448166798

SK CONSTRUCTION
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ... ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elivation ಸಹಿತ ನಾವೆ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿ ಕೊಡುತ್ತೇವೆ.
9620528490

ಲೋಡರ್ಸ್ ಬೇಕಾಗಿದ್ದಾರೆ
ಮೈಸೂರು, ಮೇಟಗಳ್ಳಿ ಇಂಡಸ್ಟ್ರೀಯಲ್ ಏರಿಯಾದಲ್ಲಿರುವ ಕೋಳಿ ಫೀಡ್ ಕಂಪನಿಗೆ ಲೋಡಿಂಗ್, ಪ್ಯಾಕಿಂಗ್, ಪೌಡರಿಂಗ್ ಇತ್ಯಾದಿ ಕೆಲಸ ಮಾಡಲು 45 ವರ್ಷದ ಒಳಗಿನ ಪುರುಷರು ಬೇಕಾಗಿದ್ದಾರೆ. ಕೆಲಸ ಮಾಡುವ ವೇಳೆ ಮೆಡಿಸನ್ ವಾಸನೆ ಧೂಳು ಇರುತ್ತದೆ. ವಿದ್ಯಾರ್ಹತೆ ಅವಶ್ಯಕತೆ ಇಲ್ಲ. ವಿದ್ಯಾರ್ಹತೆ ಇರುವವರಿಗೆ ಕೆಲಸ ಇರುವುದಿಲ್ಲ. ಸಿಫೆಟ್ ಕಾಲೇಜು ಹತ್ತಿರ, ಮೇಟಗಳ್ಳಿ ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ ಸಂಬಳ: 19000 ರಿಂದ 23000
ಸಾಯಿಕೃಪ ಎಂಟರ್‌ಪ್ರೈಸಸ್
ರತ್ನಯ್ಯ: 9900889325
ಪ್ರಕಾಶ: 8971460235

ಮ್ಯಾಂಗೋ ಟ್ರೀ ಬಡಾವಣೆ
Fully Developed ಸೈಟ್‌ಗಳೂ ಮಾರಾಟಕ್ಕಿವೆ
30x40 ಅಳತೆ
ಇಲವಾಲ ನಂತರ.
9880774395

ಸುಲಭ ಕಂತುಗಳಲ್ಲಿ ನಿವೇಶನ
ನಿಮ್ಮ ಕನಸಿನ ನಿವೇಶನವನ್ನು ಕಡಿಮೆ ದರದಲ್ಲಿ ಹಾಗೂ ಸುಲಭ ಕಂತುಗಳಲ್ಲಿ ಪಡೆಯಬೇಕೇ ಹಾಗಾದರೇ ಇಂದೇ ಸಂಪರ್ಕಿಸಿ: ಹೆಚ್ಚಿನ ಮಾಹಿತಿಗಾಗಿ
8050051444
8050052444

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್-(ಹೂಟಗಳ್ಳಿ, ವಿದ್ಯಾರಣ್ಯಪುರಂ, ಬೆಳವಾಡಿ, ವಿಜಯನಗರ)
2) ಹೌಸ್ ಕೀಪಿಂಗ್ ಸೂಪರ್‌ವೈಸರ್-5 ವರ್ಷ ಅನುಭವವಿರಬೇಕು.
ESI, PF ಸೌಲಭ್ಯವಿರುತ್ತದೆ.
9739166772

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ವಯೋಮಿತಿ: 50 ವರ್ಷ ಒಳಗೆ
ಸಂಬಳ: 17500/- (26 Days) 8 hours
ESI & PF ಊಟ, ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819
9620667819

ವಧು-ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/SC & ಎಲ್ಲಾ ಜಾತಿಯ ವಧು-ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ತಿ.ನರಸೀಪುರ ಪುರಸಭೆ ವಿಶೇಷ ಸಭೆಯಲ್ಲಿ ಬಂಗಾರಪ್ಪ ಬಡಾವಣೆಯ

ನಿವೇಶನ ಹಂಚಿಕೆ, ಮಾಂಸ ಮಾರುಕಟ್ಟೆ ಸ್ಥಳಾಂತರಕ್ಕೆ ಸದಸ್ಯರ ಒಪ್ಪಿಗೆ

ತಿ.ನರಸೀಪುರ, ಡಿ.13– ಪಟ್ಟಣದ ಬಂಗಾರಪ್ಪ ಬಡಾವಣೆಯಲ್ಲಿ ನಿವೇಶನ ಹಂಚಿಕೆ ಹಾಗೂ ಮಾಂಸ ಮಾರುಕಟ್ಟೆ ಸ್ಥಳಾಂತರಿಸಲು ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಶುಕ್ರವಾರ ನಡೆದ ವಿಶೇಷ ಸಭೆಯಲ್ಲಿ ಸದಸ್ಯರು ಸರ್ವಾನುಮತದ ಒಪ್ಪಿಗೆ ಸೂಚಿಸಿದರು.

ಅಧ್ಯಕ್ಷೆ ವಸಂತ ಶ್ರೀಕಂಠ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಭೆ ಆರಂಭಕ್ಕೂ ಮುನ್ನ ಇತ್ತೀಚೆಗಷ್ಟೇ ಅಸ್ತಂಗತರಾದ ಮಾಜಿ ಸಿಎಂ ಎಸ್.ಎಂ.ಕೃಷ್ಣರಿಗೆ ಸಂತಾಪ ಸೂಚಿಸಲಾಯಿತು. ನಂತರ ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆಯಿಂದ ಮಹಾಯೋಜನೆ ಅಂತಿಮ ನಕ್ಷೆಗೆ ಅನುಮೋದನೆ ಬಗ್ಗೆ ಚರ್ಚೆ ನಡೆದು ಯಾವುದೇ ವಿರೋಧವಿಲ್ಲದೇ ಸದಸ್ಯರು ಅನುಮೋದನೆಗೆ ಒಪ್ಪಿಗೆ ಸೂಚಿಸಿದರು.

ನಂತರ ಬಂಗಾರಪ್ಪ ಬಡಾವಣೆ ನಿವೇಶನಗಳ ವಿಚಾರ ಚರ್ಚೆಗೆ ಬರುತ್ತಿದ್ದಂತೆ ಕೆರಳಿದ ಸದಸ್ಯ ಎಸ್.ಕೆ.ಕಿರಣ್ ಬಡಾವಣೆಯಲ್ಲಿ ಎಷ್ಟು ನಿವೇಶನಗಳಿವೆ. ಅವುಗಳ ಅಳತೆಯಾಗಿದೆಯೇ ಎಂದು ಆರ್‌ಐ ಅಶೋಕ್ ಅವರನ್ನು ಪ್ರಶ್ನಿಸಿದ ವೇಳೆ ಅವರು ಸಮರ್ಪಕ ಉತ್ತರ ನೀಡದ ಹಿನ್ನೆಲೆಯಲ್ಲಿ ಸರಿಯಾದ ಮಾಹಿತಿ ಪಡೆಯದೇ ಸಭೆಗೆ ಏಕೆ ಬಂದಿದ್ದೀರಾ ಎಂದು ಅಧಿಕಾರಿ ಮೇಲೆ ಗರಂ ಆದರು.

ಪಟ್ಟಣದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳಾಗಿಲ್ಲ. ಹದಗೆಟ್ಟ ರಸ್ತೆಗಳ ದುರಸ್ತಿ ಆಗಿಲ್ಲ. ನಯಾ ಪೈಸೆ ಅಭಿವೃದ್ಧಿ ಕೆಲಸ ಆಗಿಲ್ಲ. ಹೀಗಿರುವಾಗ ಬಂಗಾರಪ್ಪ ಬಡಾವಣೆ ವಿಷಯವನ್ನು ಸಭೆಯ ಚರ್ಚೆಗೆ ತಂದಿರುವುದು ಸರಿಯಲ್ಲ ಎಂದು ದೂರಿದರು. ಎಸ್.ಕೆ.ಕಿರಣ್ ಮಾತಿಗೆ ಸದಸ್ಯೆ ರೂಪಾ ಪರಮೇಶ್ ದನಿಗೂಡಿಸಿ ಸಹಮತ ವ್ಯಕ್ತಪಡಿಸಿದರು. ಪಟ್ಟಣದ ರಸ್ತೆಗಳು ಯಾವುದೇ ಅಭಿವೃದ್ಧಿ ಕಂಡಿಲ್ಲ. ಹಾಗಾಗಿ ಮೊದಲು ಅಭಿವೃದ್ಧಿ ಕಾರ್ಯಕ್ಕೆ ಮನ್ನಣೆ ನೀಡಬೇಕೆಂದರು.

ಬಂಗಾರಪ್ಪ ಬಡಾವಣೆಯಲ್ಲಿ ಬಡವರಿಗೆ ನಿವೇಶನ ಕೊಡಲು ನಮ್ಮ ಅಭ್ಯಂತರ ಇಲ್ಲ. ಅಲ್ಲಿ ಮೊದಲು ನಿವೇಶನ ಅಳತೆ ಮಾಡುವ ಕಾರ್ಯ ನಡೆಯಲಿ. ಅರ್ಹರಿಗೆ ಮಾತ್ರ ನಿವೇಶನ ದೊರಕುವಂತಾಗಲಿ ಎಂದು ಕಿರಣ್ ಹೇಳಿದರು.

ಇದಕ್ಕೆ ವಿರೋಧ ವ್ಯಕ್ತಪಡಿಸಿದ ಸದಸ್ಯ ಪ್ರಕಾಶ್ ಹಾಗೂ ಮಂಜುನಾಥ್ ಬಡವರಿಗೆ ಸೈಟ್ ಕೊಡುವ ವಿಷಯದಲ್ಲಿ ರಾಜಕೀಯ ಬೇಡ. ಹಾಗಾಗಿ ಸಭೆ ಮೊದಲು ಅನುಮೋದನೆ ನೀಡಲಿ. ಆನಂತರ ಸೈಟ್ ಅಳತೆ ಮಾಡಿದರಾಯಿತು ಎಂದರು.

ನಿಕಟಪೂರ್ವ ಅಧ್ಯಕ್ಷ ನಂಜುಂಡಸ್ವಾಮಿ, ಬಂಗಾರಪ್ಪ ಬಡಾವಣೆಯಲ್ಲಿ ದಾಖಲಾತಿ ಸಿಗದ ಹಿನ್ನೆಲೆಯಲ್ಲಿ ಖಾತೆ ಮಾಡಲಾಗುತ್ತಿಲ್ಲ. ಪುರಸಭೆ ವ್ಯಾಪ್ತಿಗೆ ಬಡಾವಣೆ ಸೇರಿದ ನಂತರ 2015ರಿಂದ ಕಂದಾಯ ಪಡೆಯುತ್ತಿಲ್ಲ ಹಾಗೂ ಖಾತೆಯನ್ನು ಮಾಡಿಕೊಟ್ಟಿಲ್ಲ ಎಂದು ತಿಳಿಸಿದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಪರ ವಿರೋಧ ಚರ್ಚೆ ನಡೆಯಿತು. ಈ ವೇಳೆ ಮಧ್ಯ ಪ್ರವೇಶಿಸಿದ ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ, ಇತ್ತೀಚೆಗೆ ಮೈಸೂರಿನಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕೆಎಸ್ ಆರ್‌ಟಿಸಿ ಡಿಪೋ ಮಾಡಲು ಬಂಗಾರಪ್ಪ ಬಡಾವಣೆ ಸ್ಥಳ ಬೇಕೆಂದು ಪಟ್ಟು ಹಿಡಿದಿದ್ದಾರೆ. ಹಾಗಾಗಿ ನಾವು ಆ ಜಾಗ ಉಳಿಸಿಕೊಳ್ಳಲು ಮುಂದಾಗಬೇಕು. ಆ ಜಾಗವನ್ನು ಬಡವರಿಗೆ ಹಂಚಿಕೆ ಮಾಡಬೇಕು. ಹಾಗಾಗಿ ಅದನ್ನು ಉಳಿಸಿ ಕೊಡಿ ಎಂದು ಅವರ ಮೇಲೆ ಒತ್ತಡ ತರಬೇಕು. ಮೊದಲು ಉದ್ದೇಶಿತ ಜಾಗ ನಮ್ಮದು ಮಾಡಿಕೊಳ್ಳಬೇಕಿದೆ. ಹಾಗಾಗಿ ಸದಸ್ಯರು ಇದಕ್ಕೆ ಅನುಮೋದನೆ ನೀಡಿ ಎಂದು ಕೇಳಿದ ಹಿನ್ನೆಲೆಯಲ್ಲಿ ಸದಸ್ಯರು ಸಮ್ಮತಿ ಸೂಚಿಸಿದರು.



ಅಧ್ಯಕ್ಷೆ ವಸಂತ ಬಿ.ಶ್ರೀಕಂಠ ಅಧ್ಯಕ್ಷತೆಯಲ್ಲಿ ವಿಶೇಷ ಸಭೆ ನಡೆಯಿತು.

ತರಕಾರಿ ಮಾರುಕಟ್ಟೆಗಳನ್ನು ಸ್ಥಳಾಂತರಿಸುವ ಕುರಿತು ನಡೆದ ಚರ್ಚೆಯಲ್ಲಿ ನಿಕಟಪೂರ್ವ ಅಧ್ಯಕ್ಷ ಮದನ್ ರಾಜ್ ಬೀದಿಬದಿ ವ್ಯಾಪಾರಿಗಳಿಗೆ ತೊಂದರೆ ಕೊಡಬೇಡಿ. ಯಾವುದೇ ಸದಸ್ಯರ ಗಮನಕ್ಕೆ ತರದೆ ಈಗಾಗಲೇ ಪೊಲೀಸರೊಡಗೂಡಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸಿದ್ದೀರಿ. ಇದನ್ನು ನಿಮಗೆ ಮಾಡಿ ಎಂದು ಯಾರು ಹೇಳಿದರು ಎಂದು ಬೀದಿಬದಿ ವ್ಯಾಪಾರಿಗಳನ್ನು ತೆರವು ಮಾಡಿಸಿದ ಅಧಿಕಾರಿಗಳ ನಡೆಯನ್ನು ಖಂಡಿಸಿದರು.

ಬೀದಿಬದಿ ವ್ಯಾಪಾರ ನಮ್ಮ ಪಟ್ಟಣದಲ್ಲಿ ಮಾತ್ರವಲ್ಲ ಜಿಲ್ಲಾ, ರಾಜ್ಯ ಮಟ್ಟದಲ್ಲೇ ಇದೆ. ಇದನ್ನು ಒಕ್ಕಲೆಬ್ಬಿಸಲು ಸಾಧ್ಯವಾಗದು. ಪ್ರಧಾನಿ ಮೋದಿ ಅವರೇ ಬೀದಿಬದಿ ವ್ಯಾಪಾರಿಗಳಿಗೆ ಲೋನ್ ಕೊಡುತ್ತಿಲ್ಲವೇ, ನೀವು ಸ್ಥಳಾಂತರ ಮಾಡಿಸಬೇಕಾದರೆ ಸೂಕ್ತ ಸ್ಥಳ ಗುರ್ತಿಸಿ ನಂತರ ಶಿಫ್ಟ್ ಮಾಡಿಸಿ ಎಂದರು. ಮದನ್ ಮಾತಿಗೆ ಹಲವು ಸದಸ್ಯರು ಸಹಮತ ವ್ಯಕ್ತಪಡಿಸಿ ಸದ್ಯಕ್ಕೆ ತರಕಾರಿ ಮಾರುಕಟ್ಟೆ ಸ್ಥಳಾಂತರ ಮಾಡುವ ಪ್ರಕ್ರಿಯೆ ಕೈ ಬಿಟ್ಟರು.

ಮಟನ್ ಮಾರ್ಕೆಟ್ ಸ್ಥಳಾಂತರಿಸುವ ಕುರಿತು ನಡೆದ ಚರ್ಚೆಯಲ್ಲಿ ಮಾತನಾಡಿದ ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಮಟನ್ ಮಾರ್ಕೆಟ್ ಸ್ಥಳಾಂತರ ಮಾಡಬೇಕೆಂದು ಉಪಾಧ್ಯಕ್ಷರು ಪತ್ರಿಕಾ ಹೇಳಿಕೆ ನೀಡಿದ್ದಾರೆ. ಅವರ ಮಾತಿಗೆ ಗೌರವ ಕೊಟ್ಟು ಮಾಂಸ ಮಾರುಕಟ್ಟೆ ಸ್ಥಳಾಂತರಿಸುವ ಕೆಲಸ ಮಾಡುವಂತೆ ಸಲಹೆ ನೀಡಿದರು. ಪುರಸಭೆ ನಿರ್ಮಿಸಿ ನಿರುಪಯುಕ್ತ ವಾಗಿರುವ ತರಕಾರಿ ಮಾರುಕಟ್ಟೆ ಮಳಿಗೆಯನ್ನು ನವೀಕರಣ ಮಾಡುವ ಜೊತೆಗೆ ಬೇಕಾದ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ ಮಾಂಸ ಮಾರುಕಟ್ಟೆ ಸ್ಥಳಾಂತರ ಮಾಡಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಮಾಜಿ ಅಧ್ಯಕ್ಷ ಎನ್.ಸೋಮು ಟೌನ್ ಪ್ಲಾನಿಂಗ್ ಇಲ್ಲದ ಹೊಸ ಬಡಾವಣೆಗಳಿಗೆ ಅನುಮೋದನೆ ನೀಡದಂತೆ ಒತ್ತಾಯಿಸಿದರು. ಸದಸ್ಯ ಅರ್ಜುನ್ ಮಾತನಾಡಿ, ಪುರಸಭೆ ನಿರ್ಮಿಸಿರುವ 101 ಮಳಿಗೆಗಳು ಯಾರ ಯಾರ ಹೆಸರಿನಲ್ಲಿವೆ ಎಂಬ ಬಗ್ಗೆ ಗೊಂದಲ ಇದ್ದು ಮುಂದಿನ ಸಾಮಾನ್ಯ ಸಭೆಯಲ್ಲಿ ಈ ಬಗ್ಗೆ ಮಾಹಿತಿ ನೀಡುವಂತೆ ಅಧಿಕಾರಿಗೆ ತಿಳಿಸಿದರು.

ಸಭೆಯಲ್ಲಿ ಉಪಾಧ್ಯಕ್ಷೆ ರಾಜೇಶ್ವರಿ ರಾಘವೇಂದ್ರ, ಸದಸ್ಯರಾದ ಸಿ.ಪ್ರಕಾಶ್, ಅರ್ಜುನ್, ಎಲ್.ಮಂಜುನಾಥ್, ಅಹಮ್ಮದ್ ಸಯೀದ್, ಮೆಡಿಕಲ್ ನಾಗರಾಜು, ಎಸ್.ಕೆ.ಕಿರಣ್, ವಿ.ಮೋಹನ್, ಸಿಸ್ಟಮ್ ಸಿದ್ದು, ಪ್ರೇಮಾ ಮರಯ್ಯ, ನಾಗರತ್ನ ಮಾದೇಶ್, ಬಿ.ಬೇಬಿ ಹೇಮಂತ್, ಜಿ.ರೂಪಶ್ರೀ ಪರಮೇಶ, ಮಹಾದೇವಿ, ಮಹದೇವಮ್ಮ, ಪಿ.ಶೋಭ ರಾಣಿ, ಆರ್. ತೇಜಸ್ವಿನಿ, ರೂಪ, ವ್ಯವಸ್ಥಾಪಕ ಮಹೇಂದ್ರ, ಲೆಕ್ಕಾಧಿಕಾರಿ ವಿನಯ್ ಮತ್ತಿತರರಿದ್ದರು.

> ಪಟ್ಟಣದ ನಂಜನಗೂಡು ಮುಖ್ಯರಸ್ತೆ(ಆಯಿಲ್ ಮಿಲ್ ರಸ್ತೆ) ಸಂಪೂರ್ಣ ಹದಗೆಟ್ಟಿದೆ. ರಸ್ತೆ ತುಂಬಾ ದೊಡ್ಡ ದೊಡ್ಡ ಹಳ್ಳಗಳು ಬಾಯ್ತೆರೆದು ನಿಂತಿವೆ. ಎಷ್ಟೋ ವಾಹನ ಸವಾರರು ಬಿದ್ದು ಗಾಯಗೊಂಡಿದ್ದಾರೆ. ಅಲ್ಲದೇ ಈ ರಸ್ತೆ ಪಟ್ಟಣದ ವಾರ್ಡ್ ನಂ 21, 22, 23ಕ್ಕೆ ಸೇರಿರುವುದರಿಂದ ಮತ್ತು ತಿ.ನರಸೀಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಕ್ಷೇತ್ರವಾಗಿರುವುದರಿಂದ ರಸ್ತೆ ದುರಸ್ತಿ ಪಡಿಸುವಂತೆ ಪ್ರತಿ ಸಭೆಯಲ್ಲೂ ಒತ್ತಾಯಿಸುತ್ತಾ ಬಂದಿದ್ದೇನೆ. ಆದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ರಸ್ತೆ ಪಡಿಸದಿದ್ದರೆ ಆಗಬಹುದಾದ ಅನಾಹುತಕ್ಕೆ ಪುರಸಭೆ ಅಧಿಕಾರಿಗಳೇ ಜವಾಬ್ದಾರಿ. ಅಲ್ಲದೇ ರಸ್ತೆ ಬಂದ್ ಮಾಡುತ್ತೇವೆ.
>
> - ಬಾದಾಮಿ ಮಂಜು, ಪುರಸಭಾ ಸದಸ್ಯ 22ನೇ ವಾರ್ಡ್.

ಧರ್ಮಾಪುರ ಗ್ರಾಮ ಪಂಚಾಯಿತಿಗೆ ಮಹದೇವ ಅಧ್ಯಕ್ಷ

ಹನಗೋಡು, ಡಿ.13– ಇಲ್ಲಿನ ಧರ್ಮಾಪುರ ಗ್ರಾಪಂ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ವಿ.ಮಹದೇವ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಮಲ್ಲೇಶ್ ಅವರಿಂದ ತೆರವಾಗಿದ್ದ ಸ್ಥಾನಕ್ಕೆ ಶುಕ್ರವಾರ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ವಿ.ಮಹದೇವ ಹಾಗೂ ಜೆಡಿಎಸ್ ಬೆಂಬಲಿತ ಮಾದಪ್ಪ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ವಿ.ಮಹದೇವ 11 ಮತ ಪಡೆದು ಜಯಗಳಿಸಿ ಅಧ್ಯಕ್ಷರಾಗಿ ಆಯ್ಕೆಯಾದರೇ, ಪ್ರತಿಸ್ಪರ್ಧಿ ಮಾದಪ್ಪ 6 ಮತ ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಅಶೋಕ್ ನೂತನ ಅಧ್ಯಕ್ಷರ ಆಯ್ಕೆಯನ್ನು ಪ್ರಕಟಿಸಿದರು. ಪಿಡಿಓ ರೂಪಾ, ಕಾರ್ಯದರ್ಶಿ ಇದ್ದರು.



ನೂತನ ಅಧ್ಯಕ್ಷ, ಸದಸ್ಯರನ್ನು ಸನ್ಮಾನಿಸಲಾಯಿತು.

ನೂತನ ಅಧ್ಯಕ್ಷ ವಿ.ಮಹದೇವ್ ಮಾತನಾಡಿ, ಗ್ರಾಪಂ ಅಧ್ಯಕ್ಷನಾಗಲು ಸಹಕರಿಸಿದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಹಾಗೂ ಎಲ್ಲಾ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು.

ಚುನಾವಣೆಯಲ್ಲಿ ಉಪಾಧ್ಯಕ್ಷೆ ಜ್ಯೋತಿ, ಸದಸ್ಯರಾದ ಶಂಕರ್, ಶ್ವೇತ, ಡಿ.ಎಸ್.ಮಹದೇವಸ್ವಾಮಿ, ಮಂಜುನಾಥ್, ಕುಮಾರ್, ಗೌರಮ್ಮ, ಲಕ್ಷ್ಮಿ, ಮಹದೇವ್, ತೋಳಸಮ್ಮ, ಮಲ್ಲೇಶ, ನಾಗರಾಜ್, ನಾಗಮಣಿ, ಪುನೀತಾ, ಲತಾ ಸೇರಿದಂತೆ ಎಲ್ಲಾ 17 ಸದಸ್ಯರು ಭಾಗವಹಿಸಿದ್ದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಹುಡಾ ಅಧ್ಯಕ್ಷ ಹೆಚ್.ಪಿ.ಅಮರ್‌ನಾಥ್, ಕಳೆದ ಬಾರಿ ಒಂದೇ ಒಂದು ಮತದಿಂದ ಅಧಿಕಾರ ಕಳೆದುಕೊಂಡಿದ್ದೇವು. ಈ ಬಾರಿ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದ್ದೇವೆ. ಗ್ರಾಪಂ ಅಧಿಕಾರ 15 ತಿಂಗಳು ಬಾಕಿ ಇದ್ದು, ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರು ಒಗ್ಗಟ್ಟಿನಿಂದ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಿ ಎಂದು ಸಲಹೆ ನೀಡಿದರು.

ಜಿಪಂ ಮಾಜಿ ಸದಸ್ಯ ಡಿ.ಕೆ.ಕುನ್ನೇಗೌಡ, ತಾಪಂ ಮಾಜಿ ಸದಸ್ಯರಾದ ದೇವರಾಜ್, ಅಜ್ಗರ್ ಪಾಷ, ಉದ್ಯಮಿ ಕೃಷ್ಣರಾಜು, ಗ್ರಾಪಂ ಮಾಜಿ ಅಧ್ಯಕ್ಷ ರಾಜು, ಮುಖಂಡರಾದ ಚಂದ್ರನಾಯಕ್, ಲಕ್ಷ್ಮಣನಾಯಕ, ಗೋವಿಂದಶೆಟ್ಟಿ, ವೀರಭದ್ರಶೆಟ್ಟಿ, ರುದ್ರಶೆಟ್ಟಿ, ಸುರೇಶ್ ಸೇರಿದಂತೆ ಇತರರಿದ್ದರು.

ಹುಣಸೂರಿನ ಹನುಮಂತೋತ್ಸವ ಇಡೀ ರಾಜ್ಯಕ್ಕೆ ಹೆಸರುವಾಸಿ

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್

ಹುಣಸೂರು, ಡಿ.13– ಕಳೆದ 30 ವರ್ಷದಿಂದ ನಗರದಲ್ಲಿ ನಡೆಯುತ್ತಿರುವ ಹನುಮಂತೋತ್ಸವ ಇಡೀ ರಾಜ್ಯದಲ್ಲೇ ಹೆಸರು ಮಾಡಿರುವುದು ನಮ್ಮೆಲ್ಲರ ಪುಣ್ಯವಾಗಿದೆ ಎಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ಶುಕ್ರವಾರ ಬೆಳಗ್ಗೆ ಆಂಜನೇಯಸ್ವಾಮಿ ದೇವಾಲಯದಲ್ಲಿದ್ದ 6 ಅಡಿ ಎತ್ತರದ ಪಂಚಲೋಹದ ಹನುಮ ದೇವರ ವಿಗ್ರಹವನ್ನು ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ ಪ್ರತಿಷ್ಠಾಪಿಸಲು ಕೊಂಡೊಯ್ಯುವ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಅವರು, ಇದು ನನ್ನ ಊರು. ನನ್ನ ಕ್ಷೇತ್ರ, ನನ್ನ ಊರಿನ ಆಚರಣೆ. ಹೀಗಾಗಿ ನಾನು ಅಧಿಕಾರದಲ್ಲಿರಲಿ ಅಥವಾ ಇಲ್ಲದಿರಲೀ ಯಾವುದೇ ಕಾರಣಕ್ಕೂ ಮಿಸ್ ಮಾಡದೇ ಬಂದು ಪೂಜೆ ಸಲ್ಲಿಸುತ್ತೇನೆ. ಈ ಬಾರಿಯೂ ಆಂಜನೇಯಸ್ವಾಮಿ ಮೂರ್ತಿಗೆ ಪುಷ್ಪಾರ್ಚನೆ ಮಾಡಿ ಮೆರವಣಿಗೆಗೆ ಚಾಲನೆ ನೀಡಿದ್ದೇನೆ ಮೂರು ದಿನಗಳ ಆಚರಣೆಗೂ ಇರುತ್ತೇನೆ. ಎಲ್ಲಾ ಧರ್ಮದವರು, ಸಮುದಾಯದವರು ಸೇರಿ ಸೌಹಾರ್ದತೆಯಿಂದ ಅದ್ದೂರಿಯಾಗಿ ಆಚರಿಸೋಣ ಎಂದರು.



ಮೆರವಣಿಗೆಗೆ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಚಾಲನೆ ನೀಡಿದರು.


ಗಾವಡಗೆರೆ ಗುರುಲಿಂಗ ಜಂಗಮದೇವರ ಮಠದ ನಟರಾಜ ಸ್ವಾಮೀಜಿ, ಮಾದಳ್ಳಿ ಮಠದ ಸಾಂಬಸದಾಶಿವ ಸ್ವಾಮೀಜಿ ಮಾತನಾಡಿದರು. ಇದೇ ವೇಳೆ ಉತ್ಸವ ಮೂರ್ತಿಯನ್ನು ಮೆರವಣಿಗೆಯಲ್ಲಿ ನಗರದ ಕಲ್ಪತರು ಸರ್ಕಲ್ ಮೂಲಕ ಸರಸ್ವತಿಪುರಂ, ವಿವಿ ಸರ್ಕಲ್, ಗಣೇಶನ ಗುಡಿ ಬೀದಿ, ಬ್ರಾಹ್ಮಣರ ಬೀದಿ, ಸೇಠ್ ರಸ್ತೆ ಮೂಲಕ ಮುನೇಶ್ವರ ಕಾವಲ್ ಮೈದಾನಕ್ಕೆ ಕೊಂಡೊಯ್ದು ಪ್ರತಿಷ್ಠಾಪಿಸಲಾಯಿತು.

ಮೆರವಣಿಗೆಯಲ್ಲಿ ಹನುಮಂತೋತ್ಸವ ಆಚರಣಾ ಸಮಿತಿ ಅಧ್ಯಕ್ಷ ವೆಂಕಟನಾರಾಯಣದಾಸ್, ಗೌರವಾಧ್ಯಕ್ಷ ಯೋಗಾನಂದ ಕುಮಾರ್, ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್, ಉಪಾಧ್ಯಕ್ಷ ಗಿರೀಶ್, ಮಾಜಿ ಪುರಸಭಾಧ್ಯಕ್ಷ ಹೆಚ್.ಎನ್.ಚಂದ್ರಶೇಖರ್, ಮಾಜಿ ನಗರಸಭಾ ಅಧ್ಯಕ್ಷ ಹೆಚ್.ವೈ.ಮಹದೇವು, ಜಿಪಂ ಮಾಜಿ ಸದಸ್ಯ ಡಿ.ಕೆ.ಕುನ್ನೇಗೌಡ, ಸಚಿನ್ ಬಾಗಲ್, ಬಿರೇಶ್, ಕಿರಣ್ ಕುಮಾರ್, ವಕೀಲರ ಸಂಘದ ಕಾರ್ಯದರ್ಶಿ ಹರೀಶ್ ಕುಮಾರ್, ಲಕ್ಷ್ಮಿಕಾಂತ್, ಹೆಚ್.ಪಿ.ಸುಬ್ಬರಾವ್, ನಗರಸಭಾ ಸದಸ್ಯ ವಿವೇಕಾನಂದ, ಉಚಿತ ಯೋಜನೆಗಳ ನಿರ್ವಹಣಾ ಸಮಿತಿ ತಾಲೂಕು ಅಧ್ಯಕ್ಷ ರಾಘು, ಅಪ್ಪಣ್ಣ ಇತರರಿದ್ದರು.

ದೇವನೂರು ಗ್ರಾಪಂಗೆ ಅವಿನಾಶ್ ನೂತನ ಅಧ್ಯಕ್ಷ

ನಂಜನಗೂಡು, ಡಿ.13– ತಾಲೂಕಿನ ದೇವನೂರು ಗ್ರಾಪಂ ನೂತನ ಅಧ್ಯಕ್ಷರಾಗಿ ಕೆ.ಎಸ್.ಅವಿನಾಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಒಟ್ಟು 19 ಸದಸ್ಯ ಬಲದ ಗ್ರಾಪಂನಲ್ಲಿ 14 ಸ್ಥಾನ ಬಿಜೆಪಿ ಬೆಂಬಲಿತರು, 5 ಸ್ಥಾನಗಳಲ್ಲಿ ಕಾಂಗ್ರೆಸ್ ಬೆಂಬಲಿತ ಸದಸ್ಯರು ಆಯ್ಕೆಯಾಗಿದ್ದು, ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗ, ಉಪಾಧ್ಯಕ್ಷ ಸ್ಥಾನ ಎಸ್‌ಸಿ ಮಹಿಳೆಗೆ ಮೀಸಲಾಗಿತ್ತು ಈ ಹಿಂದಿನ ಅಧ್ಯಕ್ಷ ಮಂಜು ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ನಡೆದ ಚುನಾವಣೆಯಲ್ಲಿ ಕೆ.ಎಸ್.ಅವಿನಾಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಿಡಿಪಿಓ ಮಂಜುಳಾ ಘೋಷಿಸಿದರು. ಚುನಾವಣಾ ಪ್ರಕ್ರಿಯೆಯಲ್ಲಿ ಬಿಜೆಪಿಯ 14 ಸದಸ್ಯರು ಹಾಜರಾಗಿದ್ದರೆ, ಕಾಂಗ್ರೆಸ್ ಬೆಂಬಲಿತ ಐವರು ಸದಸ್ಯರು ಗೈರಾಗಿದ್ದರು.



ದೇವನೂರು ಗ್ರಾಪಂ ಅಧ್ಯಕ್ಷರಾಗಿ ಅವಿನಾಶ್ ಆಯ್ಕೆಯಾಗಿದ್ದಾರೆ.

ನೂತನ ಅಧ್ಯಕ್ಷ ಕೆ.ಎಸ್.ಅವಿನಾಶ್ ಮಾತನಾಡಿ, ಮಾಜಿ ಶಾಸಕ ಬಿ.ಹರ್ಷವರ್ಧನ್ ಹಾಗೂ ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ ಅವರ ಸಹಕಾರದಿಂದ ನಾನು ಗ್ರಾಪಂ ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. ಎಲ್ಲಾ ಸದಸ್ಯರ ಸಹಕಾರ ಪಡೆದು ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಮೂಲಸೌಕರ್ಯ ಸೇರಿದಂತೆ ಸರ್ವಾಂಗೀಣವಾಗಿ ಅಭಿವೃದ್ಧಿಪಡಿಸಲು ಶ್ರಮಿಸುತ್ತೇನೆ ಎಂದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಸಿ.ಚಿಕ್ಕರಂಗನಾಯಕ ಮಾತನಾಡಿದರು. ಇದೇ ವೇಳೆ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಎಸ್.ಮಹದೇವಯ್ಯ, ಬಿಜೆಪಿ ಜಿಲ್ಲಾ ಎಸ್.ಸಿ.ಮೋರ್ಚಾ ಅಧ್ಯಕ್ಷ ಸಿ.ಎಂ.ಮಹದೇವಯ್ಯ ನೂತನ ಅಧ್ಯಕ್ಷರನ್ನು ಸನ್ಮಾನಿಸಿದರು. ಉಪಾಧ್ಯಕ್ಷೆ ಶಶಿಕಲಾ, ಸದಸ್ಯರಾದ ಮಹದೇವಯ್ಯ, ರವಿ, ಮಂಜು, ಪದ್ಮ, ಮಾದೇಶ, ಸ್ವಾಮಿ, ಸುರೇಶ, ನಾಗೇಂದ್ರ, ಚನ್ನಬಸಪ್ಪ, ಚಂದ್ರು, ಶಾಂತಮೂರ್ತಿ ಸೇರಿದಂತೆ ಇತರರಿದ್ದರು.

ಬೆಂಗಳೂರಲ್ಲಿ ಸಿದ್ಧಗಂಗಾಶ್ರೀಗಳ ಪುತ್ಥಳಿ ವಿರೂಪಗೊಳಿಸಿದ

ದುಷ್ಕರ್ಮಿ ಗಡಿಪಾರಿಗೆ ಆಗ್ರಹಿಸಿ ಪ್ರತಿಭಟನೆ

ಹೆಚ್.ಡಿ.ಕೋಟೆ, ಡಿ.13– ಬೆಂಗಳೂರಿನ ಗಿರಿನಗರದಲ್ಲಿ ತ್ರಿವಿಧ ದಾಸೋಹಿ ಸಿದ್ಧಗಂಗಾಶ್ರೀಗಳ ಪುತ್ಥಳಿ ವಿರೂಪಗೊಳಿಸಿದ ವ್ಯಕ್ತಿಯನ್ನು ಗಡಿಪಾರು ಮಾಡುವಂತೆ ಆಗ್ರಹಿಸಿ ಪಟ್ಟಣದ ತಾಲೂಕು ಕಚೇರಿ ಎದುರು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದಿಂದ ಪ್ರತಿಭಟನೆ ನಡೆಸಲಾಯಿತು.

ಮಹಾಸಭಾ ತಾಲೂಕು ಅಧ್ಯಕ್ಷ ರುದ್ರಪ್ಪ ಮಾತನಾಡಿ, ಶಿವಕುಮಾರ ಸ್ವಾಮೀಜಿ ಅವರು ಲಕ್ಷಾಂತರ ಮಂದಿಗೆ ಅನ್ನ, ಅಕ್ಷರ, ಜ್ಞಾನ ನೀಡುವ ಮೂಲಕ ನಡೆದಾಡುವ ದೇವರಾಗಿದ್ದರು. ಅಂತಹ ಮಹಾನ್ ವ್ಯಕ್ತಿಯ ಪ್ರತಿಮೆಗೆ ಅಪಮಾನ ಮಾಡಿರುವುದು ಖಂಡನೀಯ ಎಂದರು.

ಮಹಾಸಭಾ ಜಿಲ್ಲಾ ನಿರ್ದೇಶಕ ಬಿ.ವಿ.ಬಸವರಾಜ್ ಮಾತನಾಡಿ, ಮಹನೀಯರ ಪ್ರತಿಮೆಗಳನ್ನು ವಿರೂಪಗೊಳಿಸುವ ಕಿಡಿಗೇಡಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ಜೊತೆಗೆ ಗಡಿಪಾರು ಮಾಡಬೇಕು. ಅಲ್ಲದೇ ವಾಲ್ಮೀಕಿ, ಬಸವಣ್ಣ, ಗಾಂಧೀಜಿ, ಅಂಬೇಡ್ಕರ್ ಸೇರಿದಂತೆ ಮಹನೀಯರ ಪ್ರತಿಮೆಗಳಿಗೆ ಸೂಕ್ತ ರಕ್ಷಣೆ ಒದಗಿಸುವ ಕೆಲಸವನ್ನು ಸರ್ಕಾರ ಮಾಡಬೇಕು ಎಂದು ಮನವಿ ಮಾಡಿದರು. ಈ ವೇಳೆ ಗ್ರೇಡ್–2 ತಹಸೀಲ್ದಾರ್ ಶ್ರೀಧರ್ ಅವರಿಗೆ ಮನವಿ ಸಲ್ಲಿಸಲಾಯಿತು.



ಶಿವಕುಮಾರಶ್ರೀಗಳ ಪ್ರತಿಮೆ ವಿರೂಪಗೊಳಿಸಿದ ವ್ಯಕ್ತಿ ಗಡಿಪಾರಿಗೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ಮಹಾಸಭಾ ರಾಜ್ಯ ನಿರ್ದೇಶಕ ಬಸವರಾಜಪ್ಪ, ಕಾರ್ಯದರ್ಶಿ ಮಹದೇವಪ್ಪ, ನಿರ್ದೇಶಕರಾದ ಸುರೇಶ್, ನಟರಾಜು, ಶಿವಕುಮಾರ್, ನೀಲಪ್ಪ, ಗುರುಸ್ವಾಮಿ, ಮಾದಪ್ಪ, ನಳಿನಿ, ಸತೀಶ್, ಸುನೀತ, ಮುಖಂಡರಾದ ಜೆ.ಪಿ.ಚಂದ್ರಶೇಖರ್, ಸಿ.ಎನ್.ನಾಗಣ್ಣ, ವೀರಪ್ಪ, ಗುರುಸ್ವಾಮಿ, ಯೋಗೇಶ್, ಶಿವರಾಜಪ್ಪ, ಸ್ವಾಮಿ, ಕುಮಾರಸ್ವಾಮಿ, ರಾಜು, ಶಿವಯ್ಯ, ಲೋಕೇಶ್, ನಂದೀಶ, ಗಿರೀಶ್, ಮಹೇಂದ್ರ ಸತೀಶ, ಸಂತೋಷ ಸೇರಿದಂತೆ ಇನ್ನಿತರರಿದ್ದರು.

ಔದಾರ್ಯ, ಅಂತಃಕರಣ ಸಾಕ್ಷಿ ಪ್ರಜ್ಞೆಯಂತಿದ್ದ ರಾಜೇಂದ್ರ ಶ್ರೀಗಳು

ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಭಕ್ತ ಬಳಗವನ್ನು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ಸರಗೂರು, ಡಿ.13– ಡಾ.ಶಿವರಾತ್ರಿ ರಾಜೇಂದ್ರ ಶ್ರೀಗಳು ಔದಾರ್ಯ ಹಾಗೂ ಅಂತಃಕರಣಕ್ಕೆ ಸಾಕ್ಷಿ ಪ್ರಜ್ಞೆಯಂತಿದ್ದರು ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಶಿವರಾತ್ರೀಶ್ವರ ಶಿವಾನುಭವ ಮಂಟಪದಲ್ಲಿ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಭಕ್ತ ಬಳಗವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜೇಂದ್ರ ಶ್ರೀಗಳ ಜಯಂತಿ ಆಚರಿಸಲು ಪರಸ್ಪರ ಸಹಕಾರ ಮತ್ತು ಸೇವಾ ಮನೋಭಾವ ಅಗತ್ಯ. ಸರಗೂರು ಮತ್ತು ಹೆಚ್.ಡಿ.ಕೋಟೆ ಜನತೆ ಮಠದ ಮೇಲೆ ಅಪಾರ ಭಕ್ತಿಭಾವ ಇರಿಸಿಕೊಂಡಿದ್ದಾರೆ. ಮಠಗಳಿಗೆ ಭಕ್ತರ ಸಹಕಾರ ಅಪಾರವಾಗಿದೆ. ಡಾ.ರಾಜೇಂದ್ರ ಮಹಾಸ್ವಾಮಿಗಳು ಅಂದಿನ ದಿನಗಳಲ್ಲೇ ವಿದ್ಯಾರ್ಥಿಗಳ ಹಸಿವು ನೀಗಿಸಿದವರು. ಜಗದ್ಗುರುಗಳ ಹೆಸರಿನಲ್ಲಿ ಸ್ಥಾಪಿತವಾದ ಭಕ್ತ ಬಳಗ ಬಳಗದ ಏಳಿಗೆಗೆ ಒಗ್ಗಟ್ಟಿನಿಂದ ಶ್ರಮಿಸಬೇಕು. ಕೋಟೆ ಮತ್ತು ಸರಗೂರು ತಾಲೂಕಿನವರು ಭಾವನಾತ್ಮಕವಾಗಿ ನಾವೆಲ್ಲಾ ಒಂದೇ ಎಂದು ಸಾರಲು ಒಟ್ಟಾಗಿ ಆಚರಿಸುತ್ತಿರುವ ಈ ಕಾರ್ಯಕ್ರಮ ಸಾಕ್ಷಿ ಎಂದರು.

ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಪ್ರದೀಪ್ ಕುಮಾರ್ ಮಾತನಾಡಿ, ಸರ್ಕಾರಗಳು ಮಾಡದಿರುವ ಕೆಲಸವನ್ನು ಮಠ ಮಾನ್ಯಗಳು ಮಾಡುತ್ತಿವೆ. ವಿದ್ಯಾರ್ಥಿಗಳ ಹಸಿವು ನಿವಾರಣೆಗೆ ದಾಸೋಹ, ಜ್ಞಾನ ಹಂಚಲು ವಿದ್ಯಾಸಂಸ್ಥೆಗಳನ್ನು ತೆರೆದಿವೆ. ಹೀಗೆ ಮಠಗಳು ಎಲ್ಲರಿಗೂ ಪ್ರೇರಣೆಯಾಗುವ ಕೆಲಸ ಮಾಡುತ್ತಿವೆ ಎಂದರು.

ಉದ್ಯಮಿ ಯು.ಎಸ್.ಶೇಖರ್ ಮಾತನಾಡಿ, ಮಠಗಳು ಸಂಸ್ಕಾರ, ವಿದ್ಯೆ ಕಲಿಸಿಕೊಟ್ಟಿವೆ. ತಾಲೂಕಿನ ಪ್ರತಿ ಮನೆಗಳಲ್ಲೂ ಬಳಗದ ಸದಸ್ಯರಾಗಬೇಕು. ಸ್ವಾಮೀಜಿ ಹೆಸರಿನಲ್ಲಿ ಸಹಕಾರ ಸಂಘ ಶುರು ಮಾಡಿರುವುದು ಸಂತಸದ ವಿಚಾರ. ಭಕ್ತ ಬಳಗಕ್ಕೆ 5 ಲಕ್ಷ ಸಹಾಯ ಧನ ನೀಡಲಾಗುವುದು ಎಂದು ಭರವಸೆ ನೀಡಿದರು.

ಭಕ್ತ ಬಳಗದ ಗೌರವಾಧ್ಯಕ್ಷ ಡಿ.ಜಿ.ಶಿವರಾಜು, ಹಂಚೀಪುರ ಮಠದ ಚನ್ನಬಸವ ಸ್ವಾಮೀಜಿ, ದಡದಹಳ್ಳಿ ಮಠದ ಷಡಕ್ಷರ ಸ್ವಾಮೀಜಿ, ಸರಗೂರು ತಾಲೂಕು ಅಧ್ಯಕ್ಷ ಮಹೇಶ್, ಅಖಿಲ ಭಾರತ ವೀರಶೈವ ಲಿಂಗಾಯುತ ಮಹಾಸಭಾ ನಿಕಟಪೂರ್ವ ಅಧ್ಯಕ್ಷ ಶಿವಮೂರ್ತಿ, ಸುಧಾ, ಮಹಾಸಭಾ ತಾಲೂಕು ಅಧ್ಯಕ್ಷ ವೀರಭದ್ರಪ್ಪ, ರುದ್ರಪ್ಪ ಮಾತನಾಡಿದರು.

ಬೀಚನಹಳ್ಳಿ ಮಠದ ನಾಗೇಂದ್ರ ಸ್ವಾಮೀಜಿ, ಪುರ ಮಠದ ಚಂದ್ರಶೇಖರ್ ಸ್ವಾಮೀಜಿ, ಹಂಚೀಪುರ ಮಠದ ಕಿರಿಯ ತೋಂಟದಾರ್ಯ ಸ್ವಾಮೀಜಿ, ಮಾದಾಪುರ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಜಕ್ಕಹಳ್ಳಿ ಮಠದ ಶಿವಕುಮಾರ ಸ್ವಾಮೀಜಿ, ಪ್ರಸಾದ್, ಮಹಾಸಭಾ ಸರಗೂರು ಅಧ್ಯಕ್ಷ ವೀರಭದ್ರಪ್ಪ, ಕೋಟೆ ಅಧ್ಯಕ್ಷ ರುದ್ರಪ್ಪ, ಸರಗೂರು ಟೌನ್ ಅಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್, ಬಸವ ಬಳಗದ ಅಧ್ಯಕ್ಷ ಗಣಪತಿ, ನಿರ್ದೇಶಕರಾದ ಸಿ.ಕೆ.ಗಿರೀಶ್, ಸುನಂದರಾಜ್, ಮುಖಂಡರಾದ ಮಾಜಿ ಅಧ್ಯಕ್ಷ ಬಸವರಾಜಪ್ಪ, ಪಾಪಣ್ಣ, ಗುರುಸ್ವಾಮಿ, ಗಿರೀಶ್, ಪಪಂ ಸದಸ್ಯ ಶಿವಕುಮಾರ್, ಪ್ರಕಾಶ್, ಶಿವಣ್ಣ, ಪಿ.ನಂದೀಶ್, ಶಿವರಾಜಪ್ಪ, ವೀರಶೈವ ಲಿಂಗಾಯತ ಸಮಾಜದ ಎಲ್ಲಾ ಬಂಧುಗಳು ಉಪಸ್ಥಿತರಿದ್ದರು.

ವೀರಶೈವ ವಿದ್ಯಾರ್ಥಿನಿಲಯ ನವೀಕರಣ ಕಾಮಗಾರಿಗೆ ಭೂಮಿಪೂಜೆ



ವೀರಶೈವ ವಿದ್ಯಾರ್ಥಿನಿಲಯದ ನವೀಕರಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

> ಕಟ್ಟಡ ನವೀಕರಣದ ವೇಳೆ 250 ಮಂದಿ ಕುಳಿತು ಸಭೆ ನಡೆಸಲು ಅನುಕೂಲವಾಗುವ ರೀತಿ ಸಭಾಂಗಣ ನಿರ್ಮಿಸಲಾಗುತ್ತದೆ. ವಿಶಾಲವಾಗಿ ಕಟ್ಟಡ ನವೀಕರಣ ಮಾಡಲಾಗುತ್ತಿದ್ದು, ಸಮಾಜದ ಮುಖಂಡರು ಸಹಕಾರ ನೀಡಬೇಕಿದೆ. ಕಟ್ಟಡ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಮುಗಿಸಿ ಮುಂದಿನ ಬಸವ ಜಯಂತಿ ವೇಳೆಗೆ ಲೋಕಾರ್ಪಣೆ ಮಾಡುವ ಉದ್ದೇಶ ಹೊಂದಲಾಗಿದೆ.
>
> - ಎಸ್‌ಎಂಆರ್ ಪ್ರಕಾಶ್, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ.

ತಿ.ನರಸೀಪುರ, ಡಿ.13– ಪಟ್ಟಣದ ವಿವೇಕಾನಂದ ನಗರದಲ್ಲಿ ವೀರಶೈವ ವಿದ್ಯಾರ್ಥಿನಿಲಯ ನವೀಕರಣ ಕಾಮಗಾರಿಗೆ ಶುಕ್ರವಾರ ವಾಟಾಳು ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗೂ ಎಂ.ಎಲ್.ಹುಂಡಿ ಗೌರಿಶಂಕರ ಸ್ವಾಮೀಜಿ ಭೂಮಿಪೂಜೆ ನೆರವೇರಿಸಿದರು.

ಇತ್ತೀಚೆಗೆ ಪಟ್ಟಣದ ಜೆಎಸ್‌ಎಸ್ ಸಭಾ ಭವನದಲ್ಲಿ ನಡೆದ ವೀರಶೈವ ಲಿಂಗಾಯತ ಸದಸ್ಯರ ಸಭೆಯಲ್ಲಿ ವಿದ್ಯಾರ್ಥಿನಿಲಯ ನವೀಕರಣಕ್ಕೆ ಸಮಾಜದ ಮುಖಂಡರು ಒಪ್ಪಿಗೆ ಸೂಚಿಸಿದ್ದ ಹಿನ್ನೆಲೆಯಲ್ಲಿ 30 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಚಾಲನೆ ನೀಡಲಾಗಿದೆ.

ವಾಟಾಳು ಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ವೀರಶೈವ ವಿದ್ಯಾರ್ಥಿನಿಲಯದ ಕಟ್ಟಡ ಶಿಥಿಲವಾಗಿದ್ದರಿಂದ ಅದನ್ನು ನವೀಕರಿಸಿ ವಿಶಾಲ ಕಟ್ಟಡ ನಿರ್ಮಿಸಬೇಕೆಂಬ ಗುರಿಯೊಂದಿಗೆ ವೀರಶೈವ ಭಾಂದವರು ಭೂಮಿಪೂಜೆ ಮಾಡಿದ್ದಾರೆ. ಆದಷ್ಟು ಬೇಗ ನವೀಕರಣ ಕಾರ್ಯ ಮುಗಿಸಿ ಕಟ್ಟಡ ಉದ್ಘಾಟನೆ ಮಾಡಲು ಸಮಾಜ ಮುಂದಾಗಬೇಕು. ಈ ಕಾರ್ಯಕ್ಕೆ ಸಮಾಜದ ಭಾಂದವರು ತಮ್ಮ ಕೈಲಾದ ಆರ್ಥಿಕ ಸಹಾಯ ನೀಡಬೇಕಿದೆ. ನಮ್ಮ ತಾಲೂಕನ್ನು ಹೊರತುಪಡಿಸಿ ಬೇರೆ ಯಾವುದೇ ತಾಲೂಕಿನಲ್ಲೂ ವೀರಶೈವ ಮಹಾಸಭಾ ಕಟ್ಟಡಗಳಿಲ್ಲ. ಹಾಗಾಗಿ ಉತ್ತಮ ಬಿಲ್ಡಿಂಗ್ ನಿರ್ಮಾಣ ಮಾಡೋಣ. ಸಾಧ್ಯವಾದರೇ ಇಂದೇ ದೇಣಿಗೆ ನೀಡುವ ಕೆಲಸ ಆರಂಭವಾಗಲಿ ಎಂದರು.

ಇದೇ ವೇಲೆ ತುರುಗನೂರಿನ ವೀರಶೈವ ಮುಖಂಡ ರಾಜಣ್ಣ 10 ಸಾವಿರ ಹಾಗೂ ಬಸಪ್ಪ 5 ಸಾವಿರ ದೇಣಿಗೆ ನೀಡಿದರೆ ಕೆಇಬಿ ಸಿದ್ದಲಿಂಗಸ್ವಾಮಿ 25 ಸಾವಿರ ನೀಡುವುದಾಗಿ ಘೋಷಿಸಿದರು.

ಉಪಾಧ್ಯಕ್ಷರಾದ ಎಸ್.ಕೆ.ಕಿರಣ್, ಪ್ರಧಾನ ಕಾರ್ಯದರ್ಶಿ ಕುರುಬೂರು ಶಿವು, ಕಾರ್ಯದರ್ಶಿ ಹಲವಾರ ಪರಮೇಶ್ ಪಟೇಲ್, ಕೋಶಾಧ್ಯಕ್ಷ ನಂಜುಂಡಸ್ವಾಮಿ, ನಿರ್ದೇಶಕರಾದ ಹಿರಿಯೂರು ಗುರುಸ್ವಾಮಿ, ನವೀನ್, ತೋಂಟೇಶ್, ಸುಗಂಧರಾಜು, ಪೂಜಿತ್ ಕುಮಾರ್, ಮಾಯಪ್ಪ, ಜ್ಞಾನೇಶ್ವರಿ, ಮಹಿಳಾ ಘಟಕದ ಅಧ್ಯಕ್ಷೆ ರೂಪಶ್ರೀ ಪರಮೇಶ್, ಯುವ ಘಟಕದ ಅಧ್ಯಕ್ಷ ಕೈಯಂಬಳ್ಳಿ ಅಶೋಕ್, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರಪ್ಪ, ಮುಖಂಡ ಚಂದ್ರಣ್ಣ, ಪುರಸಭೆ ಮಾಜಿ ಸದಸ್ಯ ಲೋಕೇಶ್, ಕೆಇಬಿ ಸಿದ್ದಲಿಂಗ ಸ್ವಾಮಿ, ನಿಲಸೋಗೆ ಶೇಖರಪ್ಪ, ನಂಜುಂಡಸ್ವಾಮಿ, ಅಂಗಡಿ ನಾಗೇಶ್, ಶಂಭುದೇವಪುರ ಕುಮಾರ್, ಆಡಿಟರ್ ಮಂಜುನಾಥ್, ಜೆಎಸ್‌ಎಸ್ ಯೋಗೇಶ್, ಜ್ಞಾನೇಂದ್ರ ಮೂರ್ತಿ, ಪರಶಿವಮೂರ್ತಿ, ಪ್ರಕಾಶ್, ರವಿ, ರಾಜು, ಪ್ರಭು, ನಾಗೇಶ್, ಪ್ರಸಾದ್, ಚೇತನ್ ಮತ್ತಿತರರಿದ್ದರು.

ಡಿಜಿಟಲ್ ಅರೆಸ್ಟ್ ವಂಚನೆ ಪ್ರಕರಣ

ರಾಜ್ಯದಲ್ಲಿ ಮೈಸೂರಿಗೆ 2ನೇ ಸ್ಥಾನ

ಮೈಸೂರು ನಗರದಲ್ಲಿ 500 ಸೈಬರ್ ಪ್ರಕರಣಗಳಲ್ಲಿ 50 ಕೋಟಿ ವಂಚನೆ; 5 ಕೋಟಿ ವಸೂಲಿ

ಮೈಸೂರು, ಡಿ. 13(ಆರ್‌ಕೆ)– ಡಿಜಿಟಲ್ ಅರೆಸ್ಟ್ ವಂಚನೆ ಪ್ರಕರಣದಲ್ಲಿ ಮೈಸೂರು ರಾಜ್ಯದ 2ನೇ ಸ್ಥಾನದಲ್ಲಿದೆ.

ಈ ಸಂಬಂಧ ಮಾಹಿತಿ ನೀಡಿದ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಈ ವರ್ಷ ಮೈಸೂರಲ್ಲಿ 500ಕ್ಕೂ ಹೆಚ್ಚು ಸೈಬರ್ ಪ್ರಕರಣ ದಾಖಲಾಗಿದ್ದು, ಸುಮಾರು 50 ಕೋಟಿ ರೂ. ವಂಚನೆಯಾಗಿದೆ ಎಂದರು.

ಆ ಪೈಕಿ 275 ಪ್ರಕರಣಗಳು ಷೇರು ಮಾರುಕಟ್ಟೆ, ಕೆಲಸ ಕೊಡಿಸುವುದಾಗಿ ವಂಚನೆ ಮತ್ತು ಡಿಜಿಟಲ್ ಅರೆಸ್ಟ್ ಮಾದರಿಯ ವಂಚನೆ ಪ್ರಕರಣ ಗಳಾಗಿದ್ದು, 23 ಷೇರು ಮಾರ್ಕೆಟ್, 15 ಜಾಬ್ ಅಂಡ್ ಪಾರ್ಟ್ ಟೈಂ ಜಾಬ್ ಹೆಸರಿನ ಮೋಸ ಹಾಗೂ 80 ಡಿಜಿಟಲ್ ಅರೆಸ್ಟ್ ವಂಚನೆ ಕೇಸ್‌ಗಳಾಗಿವೆ ಎಂದು ಆಯುಕ್ತರು ತಿಳಿಸಿದ್ದಾರೆ.

ಮೈಸೂರು ನಗರದಲ್ಲಿ ಇತ್ತೀಚೆಗೆ ಡಿಜಿಟಲ್ ಅರೆಸ್ಟ್ ಪ್ರಕರಣಗಳು ಹೆಚ್ಚಾಗುತ್ತಿವೆ. ನಕಲಿ ಅರೆಸ್ಟ್ ಹೆಸರಲ್ಲಿ ವಂಚಕರು ಅಮಾಯಕರನ್ನು ಬೆದರಿಸಿ ಹಣ ಪೀಕುತ್ತಿದ್ದಾರೆ. ಹಾಗಾಗಿ ಪೊಲೀಸರು ನಿರಂತರವಾಗಿ ಜಾಗೃತಿ ಮೂಡಿಸುತ್ತಿದ್ದರೂ ವಿದ್ಯಾವಂತರೇ ಈ ಮೋಸದ ಜಾಲಕ್ಕೆ ಬಲಿಯಾಗುತ್ತಿದ್ದಾರೆ ಎಂದು ಅವರು ತಿಳಿಸಿದರು.

ಜನರು ಕಳೆದುಕೊಂಡಿರುವ 50 ಕೋಟಿ ರೂ. ಪೈಕಿ ಸೆನ್ ಠಾಣೆ ಪೊಲೀಸರು ಈವರೆಗೆ 5 ಕೋಟಿ ರೂ. ವಸೂಲಿ ಮಾಡಿದ್ದು, ಹಲವು ಪ್ರಕರಣಗಳಲ್ಲಿ ತಂತ್ರಜ್ಞಾನ ಬಳಸಿ ವಿದೇಶಿ ಬ್ಯಾಂಕ್ ಖಾತೆಗಳಿಂದ ಹಣ ವಶಪಡಿಸಿಕೊಳ್ಳಬೇಕಾಗಿರುವುದರಿಂದ ಪ್ರಕರಣ ಪತ್ತೆ ಮಾಡಿ ಹಣ ವಶಪಡಿಸಿಕೊಳ್ಳುವುದು ವಿಳಂಬವಾಗುತ್ತದೆ ಎಂದು ಸೀಮಾ ಲಾಟ್ಕರ್ ತಿಳಿಸಿದರು.

ಮೋಸದಿಂದ ಅಮಾಯಕರ ಖಾತೆಯಿಂದ ತಮ್ಮ ಖಾತೆಗಳಿಗೆ ವರ್ಗಾವಣೆ ಮಾಡಿಸಿಕೊಂಡ ತಕ್ಷಣವೇ ಆನ್‌ಲೈನ್ ವಂಚಕರು ಬೇರೆ ಬೇರೆ ಅಕೌಂಟ್‌ಗಳಿಗೆ ಮನಿ ಟ್ರಾನ್ಸ್‌ಫರ್ ಮಾಡಿ ಡ್ರಾ ಮಾಡಿಕೊಳ್ಳುತ್ತಿರುವ ಕಾರಣ, ಇಂತಹ ಸೈಬರ್ ವಂಚನೆ ಪ್ರಕರಣಗಳಲ್ಲಿ ಹಣ ವಶಕ್ಕೆ ಪಡೆಯುವುದು ಕಷ್ಟದ ಕೆಲಸ ಎಂದು ಅವರು ತಿಳಿಸಿದರು.

ಕರ್ನಾಟಕ ರಾಜ್ಯದಲ್ಲಿ ಡಿಜಿಟಲ್ ಅರೆಸ್ಟ್ ಹಗರಣದಿಂದ ಜನರು 2024ರಲ್ಲಿ 109.01 ಕೋಟಿ ರೂ. ಕಳೆದು ಕೊಂಡಿದ್ದು, ಒಟ್ಟು 641 ಪ್ರಕರಣಗಳು ದಾಖಲಾಗಿವೆ ಎಂದು ಬೆಳಗಾವಿಯಲ್ಲಿ ಗುರುವಾರ ವಿಧಾನಪರಿಷತ್‌ನಲ್ಲಿ ಗೃಹ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದ್ದಾರೆ.

ಬೆಂಗಳೂರು ಒಂದರಲ್ಲೇ 480 ಪ್ರಕರಣ ನಡೆದಿದ್ದು, ಮಂಗಳೂರಲ್ಲಿ 21 ಪ್ರಕರಣಗಳು ವರದಿಯಾಗಿವೆ. ರಾಜ್ಯದ ಪೊಲೀಸರು, 9.45 ಕೋಟಿ ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಬಿಜೆಪಿ ಎಂಎಲ್‌ಸಿ ಸಿ.ಕೆ. ಪ್ರತಾಪ್ ಸಿಂಹ ನಾಯಕ ಪ್ರಶ್ನೆಗೆ ಗೃಹ ಸಚಿವರು ಉತ್ತರಿಸಿದರು.

ಈ ಪ್ರಕರಣಗಳಲ್ಲಿ 27 ಮಂದಿಯನ್ನು ಬಂಧಿಸಲಾಗಿದ್ದು, 700 ಸೋಷಿಯಲ್ ಮೀಡಿಯಾ ಗ್ರೂಪ್‌ಗಳನ್ನು ಸೀಜ್ ಮಾಡಲಾಗಿದೆ. 268 ಫೇಸ್‌ಬುಕ್ ಗ್ರೂಪ್ಸ್, 465 ಟೆಲಿಗ್ರಾಮ್, 15 ಇನ್‌ಸ್ಟಾಗ್ರಾಮ್ ಅಕೌಂಟ್‌ಗಳು ಹಾಗೂ 61 ವಾಟ್ಸಾಪ್ ಗ್ರೂಪ್‌ಗಳನ್ನು ಪತ್ತೆ ಮಾಡಲಾಗಿದೆ ಎಂದು ಡಾ. ಪರಮೇಶ್ವರ್ ವಿಧಾನಪರಿಷತ್‌ನಲ್ಲಿ ಮಾಹಿತಿ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.



ಮೈಸೂರಿನ ಸೆನ್ ವಿಭಾಗದ ಎಸಿಪಿ ಸ್ನೇಹರಾಜ್ ನೇತೃತ್ವದ ತನಿಖಾ ತಂಡ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮುತ್ತು (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪಾ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಿಸ್ ಯು (ತ)	4 ಪ್ರದರ್ಶನಗಳು
ಸಂಗಂ	
ಪುಷ್ಪಾ–2 (ತೆ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜೀಬ್ರಾ (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಪುಷ್ಪಾ 2 (ಕ): ಬೆ.10ಕ್ಕೆ, ಮ.1.55ಕ್ಕೆ, ಪುಷ್ಪಾ 2 (ಹಿಂ): ಸಂ.5.50ಕ್ಕೆ, ರುಧೀರಂ (ಮ): ರಾ.9.50ಕ್ಕೆ.
ಸ್ಕ್ರೀನ್ 2	ಸೌಧುಕವ್ವುಂ (ತ): ಬೆ.11.05ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಮೋನಾ 2 (3ಡಿ)(ಇಂ): ಸಂ.4.40ಕ್ಕೆ, ಮಿಸ್ ಯು (ತ): ರಾ.7ಕ್ಕೆ, ಪುಷ್ಪಾ 2 (ಕ): ರಾ.9.40ಕ್ಕೆ.
ಸ್ಕ್ರೀನ್ 3	ದಿ ಲಾರ್ಡ್ ಆಫ್ ದಿ ರಿಂಗ್ಸ್ (ಇಂ): ಬೆ.11.10ಕ್ಕೆ, ರಾ.9.55ಕ್ಕೆ, ಮೋನಾ 2 (3ಡಿ) (ಇಂ): ಮ.1.55ಕ್ಕೆ, ಹರಿದಾಸರ ದಿನಚರಿ (ಕ): ಸಂ.4ಕ್ಕೆ, ಪುಷ್ಪಾ 2 (ಕ): ಸಂ.6.05ಕ್ಕೆ,
ಸ್ಕ್ರೀನ್ 4	ಮೋನಾ 2(3ಡಿ)(ಇಂ): ಬೆ.11.55ಕ್ಕೆ, ಪುಷ್ಪಾ 2 (ತೆ): ಮ.2.10ಕ್ಕೆ, ಸಂ.6.ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸ್ಮಾರಕ ನಿರ್ಮಾಣ ಕಾರ್ಯಕ್ಕೆ ಚಾಲನೆ


ಮಾಜಿ ಕೇಂದ್ರ ಸಚಿವ ವಿ. ಶ್ರೀನಿವಾಸ ಪ್ರಸಾದ್ ಅವರ ಅಂತ್ಯಸಂಸ್ಕಾರವಾದ ಸ್ಥಳದಲ್ಲಿ ಸ್ಮಾರಕ ನಿರ್ಮಾಣ ಕಾರ್ಯಕ್ಕೆ ಬೌದ್ಧಧರ್ಮದ ವಿಧಿವಿಧಾನದ ಪ್ರಕಾರ ಬೌದ್ಧಬಿಕ್ಕು ಡಾ. ಕಲ್ಯಾಣಸಿರಿ ಭಂತೇಜಿ ಅವರ ನೇತೃತ್ವದಲ್ಲಿ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಶ್ರೀನಿವಾಸ ಪ್ರಸಾದ್ ಅವರ ಧರ್ಮಪತ್ನಿ ಡಿ. ಭಾಗ್ಯಲಕ್ಷ್ಮಿ, ಪುತ್ರಿಯರಾದ ಪ್ರತಿಮಾ ಪ್ರಸಾದ್, ಪೂರ್ಣಿಮಾ ಪ್ರಸಾದ್, ಪೂನಂ ಪ್ರಸಾದ್, ಮೊಮ್ಮಗಳಾದ ಸಾಂಚಿ ದೇವರಾಜ್, ಸಹೋದರ ವಿ. ರಾಮಸ್ವಾಮಿ, ಅಳಿಯ ಹರ್ಷವರ್ಧನ್, ಸಹೋದರನ ಮಗ ಭರತ್ ರಾಮಸ್ವಾಮಿ, ಆಪ್ತ ಸಹಾಯಕ ಹೆಚ್.ಜಿ. ರಮೇಶ್, ಉಮೇಶ್ ಪೂಜಾರಿ, ಹೆಚ್.ಕೆ.ಅನಂತ ಹಾಗೂ ಅಭಿಮಾನಿ ಬಳಗದ ಪದಾಧಿಕಾರಿಗಳು ಹಾಜರಿದ್ದರು.



ಪಿ.ವಿ.ಸುಶ್ಮಿತಗೆ ಪಿಹೆಚ್.ಡಿ ಪದವಿ

ಮೈಸೂರು, ಡಿ.13– ಡಾ.ಎಸ್.ಡಿ.ಶಶಿಕಲಾ ಅವರ ಮಾರ್ಗದರ್ಶನದಲ್ಲಿ ಪಿ.ವಿ. ಸುಶ್ಮಿತ ಅವರು ಕನ್ನಡ ವಿಷಯ ದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಶೇ. 50:50 ನಿವೇಶನ ಹಂಚಿಕೆ ಹಗರಣ ಹಿನ್ನೆಲೆ

ಸಭಾ ನಡಾವಳಿಗೆ ಸರ್ಕಾರದ ಅನುಮೋದನೆ ಕಡ್ಡಾಯ

ತಪ್ಪಿದಲ್ಲಿ ಆಯುಕ್ತರನ್ನೇ ನೇರ ಹೊಣೆ ಮಾಡಿ ಶಿಸ್ತು ಕ್ರಮ; ಮುಡಾ ಆಯುಕ್ತರಿಗೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಎಚ್ಚರಿಕೆ

ಮೈಸೂರು, ಡಿ. 13(ಆರ್‌ಕೆ)– ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ನಡಾವಳಿಗೆ ಸರ್ಕಾರದಿಂದ ಅನುಮೋದನೆ ಪಡೆದ ಬಳಿಕವಷ್ಟೇ ಅನುಷ್ಠಾನ ಕ್ರಮ ವಹಿಸಬೇಕೆಂದು ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿಗಳು ಮುಡಾ ಆಯುಕ್ತರಿಗೆ ನಿರ್ದೇಶನ ನೀಡಿದ್ದಾರೆ.

ಈ ಕುರಿತು ಡಿಸೆಂಬರ್ 10ರಂದು ಮುಡಾ ಆಯುಕ್ತರಿಗೆ ಪತ್ರ ಬರೆದಿರುವ ಅಧೀನ ಕಾರ್ಯದರ್ಶಿ ಕೆ. ಲತಾ, ಸರ್ಕಾರವು ಸುತ್ತೋಲೆ, ಮಾರ್ಗಸೂಚಿ, ನಿಯಮ–ಕಾಯ್ದೆಗಳನ್ವಯ ಕ್ರಮ ವಹಿಸುವಂತೆ ಸೂಚನೆ ನೀಡುತ್ತಿದ್ದರೂ, ನಿಯಮ ಉಲ್ಲಂಘಿಸುತ್ತಿರುವುದು, ನ್ಯಾಯಾಲಯದ ಪ್ರಕರಣಗಳಲ್ಲಿ ಸರ್ಕಾರದ ಗಮನಕ್ಕೇ ತರದೇ



ಪ್ರಾಧಿಕಾರದ ಹಂತದಲ್ಲೇ ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸುತ್ತಿರುವುದು ಕಂಡುಬಂದಿದೆ ಎಂದು ತಿಳಿಸಿದ್ದಾರೆ.

ಇನ್ನು ಮುಂದೆ ನ್ಯಾಯಾಲಯಕ್ಕೆ ಸಲ್ಲಿಸಲಾಗುವ ಕಂಡಿಕೆವಾರು ಷರಾ, ಆಕ್ಷೇಪಣಾ ಹೇಳಿಕೆ ಮತ್ತು ಅಫಿಡವಿಟ್‌ಗಳನ್ನು ಸರ್ಕಾರದ ಪೂರ್ವಾನುಮತಿ ಪಡೆದು ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದಿರುವ ಅವರು, ಮುಡಾ ಸಭೆಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರನ್ವಯ ನಿಯಮಾನುಸಾರ ನಡೆಸಿ ಕೈಗೊಂಡ ನಿರ್ಣಯದ ನಡಾವಳಿಗೆ ಸರ್ಕಾರದಿಂದ ಅನುಮೋದನೆ ಪಡೆದ ನಂತರವೇ ಕ್ರಮ ಜರುಗಿಸಬೇಕೆಂದು ಸೂಚನೆ ನೀಡಿದ್ದಾರೆ.

ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ ಮುಡಾ ಆಯುಕ್ತರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಲತಾ ಎಚ್ಚರಿಕೆ ನೀಡಿದ್ದಾರೆ. 2023ರ ಮಾರ್ಚ್ 21ರ ಮುಡಾ ಸಭೆಯ ವಿಷಯ ಸಂಖ್ಯೆ 13(4)ರಲ್ಲಿ ಕೈಗೊಂಡ ನಿರ್ಣಯವನ್ನು 2024ರ ನವೆಂಬರ್ 30ರಂದು ರದ್ದುಪಡಿಸಿದ ಹಿನ್ನೆಲೆಯಲ್ಲಿ ಸರ್ಕಾರ ಮುಡಾ ಆಯುಕ್ತರಿಗೆ ಈ ಸೂಚನೆ ನೀಡಿದೆ.

ಮಹಾ ಸಮ್ಮೇಳನಕ್ಕೆ ಆಹ್ವಾನ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಜನವರಿ 18 ಮತ್ತು 19 ರಂದು ನಡೆಯುವ 2025ನೇ ಸುವರ್ಣ ಸಂಭ್ರಮ ಮಹಾ ಸಮ್ಮೇಳನಕ್ಕೆ ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ದತ್ತಪೀಠಾಧೀಕ್ಷಾದ ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳನ್ನು ಮಹಾ ಸಮ್ಮೇಳನಕ್ಕೆ ಆಹ್ವಾನಿಸಲಾಯಿತು. ಈ ವೇಳೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷ ಡಿ.ಟಿ.ಪ್ರಕಾಶ್, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ ಆರ್ ಸತ್ಯನಾರಾಯಣ್, ಜಯಸಿಂಹ ಹಾಗೂ ಮೈಸೂರು ಜಿಲ್ಲಾ ಮತ್ತು ನಗರ ಬ್ರಾಹ್ಮಣ ಸಂಘದ ಪದಾಧಿಕಾರಿಗಳಾದ ಎಸ್ ರಂಗನಾಥ, ವಿ ಹರೀಶ್, ಎಂಆರ್ ಬಾಲಕೃಷ್ಣ ವಿಜಯಕುಮಾರ್, ಕಡಕೋಳ ಜಗದೀಶ್, ಪ್ರಶಾಂತ್ ಭರದ್ವಾಜ್, ಜ್ಯೋತಿ, ಲತಾ ಬಾಲಕೃಷ್ಣ, ಮೀನಾಕ್ಷಿ, ಸುಚೇಂದ್ರ, ನಿಶಾಂತ್ ಚಕ್ರಪಾಣಿ ಪುಟ್ಟಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ಮೂರು ದಿನ ರಾಷ್ಟ್ರೀಯ ಸಮ್ಮೇಳನ

ಮೈಸೂರು,ಡಿ.13– ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾ ಡೆಮಿಯ ವತಿಯಿಂದ Exploring Nature's Pharmacy: Potential of Medicinal and Aromatic Plants and Their Conservation ವಿಷಯದ ಮೇಲೆ ಜ.7, 2025 ರಿಂದ ಜ.9 ರವರೆಗೆ ಅಕಾಡೆಮಿಯ ಕಚೇರಿಯಲ್ಲಿ ಮೂರು ದಿನ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಲಾಗಿದೆ.

ಸಮ್ಮೇಳನದಲ್ಲಿ ಔಷಧೀಯ ಮತ್ತು ಸುಗಂಧ ಸಸ್ಯಗಳ ಕುರಿತ ಪ್ರದರ್ಶನದ ಮಳಿಗೆಯನ್ನು (10 X10 ಅಡಿ ವಿಸ್ತೀರ್ಣ) ಹಾಕಲು ಅವಕಾಶ ಕಲ್ಪಿಸಲಾಗಿದ್ದು, ಸಮ್ಮೇಳನದಲ್ಲಿ ರಾಜ್ಯ ಹಾಗೂ ಹೊರ ರಾಜ್ಯದ ಪ್ರತಿನಿಧಿಗಳು ಭಾಗವಹಿಸಬಹುದು.

ಪ್ರದರ್ಶನದ ಮಳಿಗೆಯನ್ನು ಹಾಕಲು ಇಚ್ಛಿಸುವ ಆಸಕ್ತ ಕಂಪನಿಗಳು ಮತ್ತು ಉದ್ಯಮದಾರು ಡಿಸೆಂಬರ್ 31 ರೊಳಗಾಗಿ ಅಕಾಡೆಮಿಯ ಅಧಿಕಾರಿಗಳ ಮೊ.ಸಂ: 9880405181, 9743084194 ಮತ್ತು 9845258894 ನ್ನು ಸಂಪರ್ಕಿಸಬಹುದು ಅಥವಾ ಅಕಾಡೆಮಿಯ ವೆಬ್‌ಸೈಟ್ http://kstacademy.in ನ್ನು ವೀಕ್ಷಿಸಬಹುದು ಎಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎ.ಎಂ. ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಶಾಲಾರಂಗ ಮಕ್ಕಳ ಹಬ್ಬ; ರಂಗಹಬ್ಬ

ಮೈಸೂರು, ಡಿ.13(ಎಂಕೆ)– ನಿರ್ದಿಗಂತ ವತಿಯಿಂದ ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಡಿ.14 ಮತ್ತು 15 ರಂದು 'ಶಾಲಾರಂಗ ಮಕ್ಕಳ ಹಬ್ಬ' ಹಾಗೂ ಡಿ.15 ರಿಂದ 17ರವರೆಗೆ 'ರಂಗಹಬ್ಬ' ವನ್ನು ಆಯೋಜಿಸಲಾಗಿದೆ ಎಂದು ನಿರ್ದಿಗಂತ ಸಂಸ್ಥಾಪಕರೂ ಆದ ಪಂಚ ಭಾಷಾ ನಟ ಪ್ರಕಾಶ್ ರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿದ ಅವರು, ಡಿ.14ರ ಬೆಳಗ್ಗೆ 10.30ಕ್ಕೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ರಂಗ ಹಬ್ಬಕ್ಕೆ ಚಾಲನೆ ನೀಡಲಿದ್ದಾರೆ. ಶಾಲಾರಂಗ ವಿಕಾಸ ಯೋಜನೆಯಲ್ಲಿ ತರಬೇತಿ ಹೊಂದಿದ ಮಕ್ಕಳು ನಾಟಕ ಪ್ರದರ್ಶನದ ಜೊತೆಗೆ ಹಾಡು, ನೃತ್ಯ ಪ್ರದರ್ಶನ ನೀಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಶಾಲಾರಂಗ ಮಕ್ಕಳ ಹಬ್ಬದಲ್ಲಿ ಆರೂರಿನ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆ ಮಕ್ಕಳಿಂದ 'ರಿಂಗಿನಾಟ' ನಾಟಕ, ಗಿರಗೂರಿನ ಮಿಲಿಂದಾ ಶಾಲೆ ಮಕ್ಕಳಿಂದ 'ಚೋರ ಚರಣದಾಸ', ಹೊನ್ನಾವರ ಅಳ್ಳಂಕಿಯ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ಮಕ್ಕಳಿಂದ 'ಧರಣಿ ಮಂಡಲ', ಮೈಸೂರಿನ ಕಲಿಯುವ ಮನೆ ಮಕ್ಕಳಿಂದ 'ಬೆಳಕಿನ ಕಡೆಗೆ', ಹಾವೇರಿ ಜಕ್ಕನಕಟ್ಟೆಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮಕ್ಕಳಿಂದ 'ಪ್ರೀತಿಯ ಕಾಳು' ನಾಟಕ ಪ್ರದರ್ಶನಗೊಳ್ಳಲಿದೆ. ಇದರ ಜೊತೆ ಜೊತೆ ಹಾಡು, ನೃತ್ಯ ಇನ್ನಿತರೆ ಕಾರ್ಯಕ್ರಮಗಳು ನಡೆಯಲಿವೆ ಎಂದರು.

ಡಿ.15 ರಿಂದ 17ರವರೆಗಿನ 'ರಂಗಹಬ್ಬ' ದಲ್ಲಿ ಡಾ.ಸವಿತಾ ರಾಣಿ ನಿರ್ದೇಶನದಲ್ಲಿ 'ರಸೀದಿ ಟಿಕೆಟ್', ಶಕೀಲ್ ಅಹ್ಮದ್ ನಿರ್ದೇಶನದಲ್ಲಿ 'ಅನಾಮಿಕನ ಸಾವು' ಹಾಗೂ ಡಾ.ಶ್ರೀಪಾದ ಭಟ್ ನಿರ್ದೇಶನದಲ್ಲಿ 'ಮಂಟೇಸ್ವಾಮಿ ಕಾವ್ಯ ಪ್ರಯೋಗವಿರಲಿದೆ. ಸಮಕಾಲೀನ ಸಾಂಸ್ಕೃತಿಕ ಜಗತ್ತಿನಲ್ಲಿ ಸೃಜನಾತ್ಮಕವಾಗಿ ತೊಡಗಿಸಿಕೊಳ್ಳುವ ಹಂಬಲದಿಂದ ಹುಟ್ಟಿಕೊಂಡಿರುವ ನಿರ್ದಿಗಂತ, ರಂಗಭೂಮಿ ಕಲಾವಿದರಿಗೆ ಕಾವುಗೂಡಾಗಿ ಮೈದಳೆಯುತ್ತ ಹಲವು ಪ್ರಯೋಗಗಳನ್ನು ನಡೆಸುತ್ತಾ ಸಾಗುತ್ತಿದೆ. ಸಾರ್ವಜನಿಕರಿಗಾಗಿ ರಂಗ ಪ್ರದರ್ಶನಗಳು, ಯುವ ಸಮುದಾಯವನ್ನು ತಲುಪುವ ಉದ್ದೇಶದಿಂದ ಕಾಲೇಜು ರಂಗ, ಶಿಕ್ಷಣ ಮತ್ತು ರಂಗಭೂಮಿ ಸಮಾಸ ಸೃಷ್ಟಿಸುವತ್ತ ಶಾಲಾರಂಗ, ಶಾಲಾ ರಂಗ ವಿಕಾಸ ಸೇರಿದಂತೆ ಹಲವು ಪ್ರಯೋಗಗಳನ್ನು ನಡೆಸುತ್ತಿದ್ದೇವೆ ಎಂದು ವಿವರಿಸಿದರು.

ಇದುವರೆಗೆ 110 ಶಾಲೆಗಳಲ್ಲಿ 30 ನಿಮಿಷದ 3 ಕಿರುನಾಟಕಗಳು, ಗೊಂಬೆಯಾಟ, ಅಭಿನಯಗೀತೆಗಳು, ಕಥಾಭಿನಯ, ಮಕ್ಕಳ ಹಾಡುಗಳು, ಮಕ್ಕಳಿಗೆ ನೆರವಾಗಬಲ್ಲ ರಂಗಾಟಿಕೆಗಳು, ರಂಗ ಪ್ರದರ್ಶನ, ಬಣ್ಣದ ಹೆಜ್ಜೆ ಶಿಬಿರ, ಕಾವ್ಯರಂಗ ಮುಂತಾದ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ. 5 ಜನ ರಂಗ ಶಿಕ್ಷಕರನ್ನು ರಾಜ್ಯದ 5 ಶಾಲೆಗಳಿಗೆ ಕಳುಹಿಸಿ, 6 ತಿಂಗಳ ಕಾಲ ಮಕ್ಕಳಿಗೆ ಅಭಿನಯದ ತರಬೇತಿ ಕೊಡಿಸಿ ಶಾಲಾರಂಗ ಮಕ್ಕಳ ಹಬ್ಬ ಆಯೋಜಿಸಲಾಗಿದೆ ಎಂದರು.

ಮಕ್ಕಳಿಗೆ ಮೊಬೈಲ್ ಕೊಟ್ಟು ತಪ್ಪು ಮಾಡಿದವರು ನಾವೇ: ಮಕ್ಕಳಲ್ಲಿ ಮೊಬೈಲ್ ಬಳಕೆ ಹೆಚ್ಚುತ್ತಿರುವ ಕುರಿತು ಆತಂಕ ವ್ಯಕ್ತಪಡಿಸಿದ ಪ್ರಕಾಶ್ ರಾಜ್, ಮಕ್ಕಳಿಗೆ ಮೊಬೈಲ್ ಬೇಕಾಗಿಲ್ಲ. ನಮಗೆ ಮಕ್ಕಳನ್ನು ನೋಡಿಕೊಳ್ಳಲು ಟೈಂ ಇಲ್ಲ ಅಂತ ಮೊಬೈಲ್ ಕೊಟ್ಟು ನಾವೇ ತಪ್ಪು ಮಾಡುತ್ತಿದ್ದೇವೆ. ಇವತ್ತು ಕಲಿತದ್ದೆ ನಾಳೆ ಬರೋದು. ಸರ್ಕಾರ ಲಲಿತ ಕಲೆಗಳನ್ನು ವಿಷಯವೆಂದು ಪರಿಗಣಿಸಬೇಕು. ಸಮಾಜದ ಸ್ವಾಸ್ಥ್ಯಕ್ಕೆ ನಾಟಕ, ಸಿನಿಮಾ ದಂತಹ ಲಲಿತ ಕಲೆಗಳು ಬಹಳ ಮುಖ್ಯ ಎಂದು ಪ್ರತಿಪಾದಿಸಿದರು. ಇದೇ ವೇಳೆ ಶಾಲಾರಂಗ ಮಕ್ಕಳ ಹಬ್ಬ ಹಾಗೂ ರಂಗಹಬ್ಬದ ಪೋಸ್ಟರ್ ಪ್ರದರ್ಶಿಸಲಾಯಿತು. ನಿರ್ದಿಗಂತ ಸಂಘಟನೆಯ ಶಕೀಲ್, ಅನುಷ್ ಶೆಟ್ಟಿ, ಅಮಿತ್‌ರೆಡ್ಡಿ ಉಪಸ್ಥಿತರಿದ್ದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ 'ಶಾಲಾರಂಗ ಮಕ್ಕಳ ಹಬ್ಬ', 'ರಂಗಹಬ್ಬ' ಪೋಸ್ಟರ್‌ಅನ್ನು ನಟ ಪ್ರಕಾಶ್ ರಾಜ್ ಪ್ರದರ್ಶಿಸಿದರು.

ಕಳ್ಳನನ್ನ ಮಕ್ಕಳ ಬಗ್ಗೆಯಲ್ಲ...!

ಮೈಸೂರಿಗೆ ಮಕ್ಕಳ ಬಗ್ಗೆ ಮಾತಾಡಲು ಬಂದಿದ್ದೇನೆ... ಕಳ್ಳನನ್ನ ಮಕ್ಕಳ ಬಗ್ಗೆಯಲ್ಲ ಎಂದು ಪಂಚಭಾಷಾ ನಟ ಪ್ರಕಾಶ್ ರಾಜ್ ತಮ್ಮನ್ನು ವಿರೋಧಿಸುವವರಿಗೆ ಪರೋಕ್ಷವಾಗಿ ಟಾಂಗ್ ನೀಡಿದರು. ಸುದ್ದಿಗೋಷ್ಠಿ ವೇಳೆ ಶಾಲಾರಂಗ ಮಕ್ಕಳ ಹಬ್ಬ ಹಾಗೂ ರಂಗಹಬ್ಬ ಹೊರತು ಇತರೆ ವಿಚಾರ ಕೇಳಬಹುದೇ ಎಂಬ ಪತ್ರಕರ್ತರ ಪ್ರಶ್ನೆಗೆ ನಗುತ್ತಲೇ ಪ್ರತಿಕ್ರಿಯಿಸಿದ ಅವರು, ನಾನು ಇಲ್ಲಿಗೆ ಮಕ್ಕಳ ಬಗ್ಗೆ ಮಾತಾಡಲು ಬಂದಿದ್ದೇನೆ... ಕಳ್ಳನನ್ನ ಮಕ್ಕಳ ಬಗ್ಗೆಯಲ್ಲ... ಬೇರೆ ವಿಚಾರಗಳ ಬಗ್ಗೆ ಇನ್ನೊಂದು ದಿನ ಮಾತನಾಡೋಣ. ಇಷ್ಟು ಪ್ರೀತಿ ಮತ್ತು ಕಾಳಜಿಯಿಂದ ರಂಗಹಬ್ಬ ಆಯೋಜಿಸಿದ್ದೇವೆ. ನಾನು ಏನೋ ಮಾತಾಡಿ, ಅದಕ್ಕೆ ಮಕ್ಕಳ ಭವಿಷ್ಯ, ಕನಸು ಹಾಳಾಗುವುದು ಬೇಡ. ಮಕ್ಕಳ ಮನೋವಿಕಾಸದ ಬಗ್ಗೆ ನಿರ್ದಿಗಂತ ಕೆಲಸ ಮಾಡುತ್ತಿದೆ ಎಂದರು.

ಹಿಂದುಳಿದ ವರ್ಗಗಳ ನಿಗಮಗಳಿಗೆ ಅನುದಾನ ಕಡಿತ ಖಂಡಿಸಿ ಮೈಸೂರಲ್ಲಿ ಬಿಜೆಪಿ ಹಿಂದುಳಿದ ಮೋರ್ಚಾ ಪ್ರತಿಭಟನೆ



ಹಿಂದುಳಿದ ವರ್ಗಗಳ ನಿಗಮಗಳಿಗೆ ಅಧಿಕ ಅನುದಾನ ಬಿಡುಗಡೆ ಮಾಡುವಂತೆ ಆಗ್ರಹಿಸಿ ಮೈಸೂರಿನ ಗಾಂಧಿ ವೃತ್ತದ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಬಿಜೆಪಿ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಡಿ.13(ಬಿಎಲ್‌ಯು)– ಹಿಂದುಳಿದ ವರ್ಗಗಳ ನಿಗಮಗಳಿಗೆ ಅನುದಾನ ಕಡಿತ ಮಾಡಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಧೋರಣೆ ವಿರೋಧಿಸಿ ಬಿಜೆಪಿ ಹಿಂದುಳಿದ ಮೋರ್ಚಾ ಕಾರ್ಯ ಕರ್ತರು ಮೈಸೂರಿನ ಗಾಂಧಿ ವೃತ್ತದಲ್ಲಿ ಇಂದು ಪ್ರತಿಭಟನೆ ನಡೆಸಿದರು.

ನಗರದ ಗಾಂಧಿ ವೃತ್ತದ ಮಹಾತ್ಮ ಗಾಂಧೀಜಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದ ಕಾರ್ಯ ಕರ್ತರು, ಸರ್ಕಾರದ ಹಿಂದುಳಿದ ವರ್ಗಗಳ ವಿರೋಧಿ ಧೋರಣೆಗೆ ಆಕ್ರೋಶ ವ್ಯಕ್ತಪಡಿಸಿದರು.

ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹಿಂದುಳಿದ ವರ್ಗಗಳ ನಿಗಮಗಳಿಗೆ 546 ಕೋಟಿ ಅನುದಾನ ಬಿಡುಗಡೆ ಮಾಡಲಾಗಿತ್ತು. ಆದರೆ ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಇಲ್ಲಿ ತನಕ ಬರೀ 170 ಕೋಟಿ ಬಿಡುಗಡೆ ಮಾಡಿದೆ ಎಂದು ದೂರಿದರು.

ಅಹಿಂದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ತಾವು ಹೋದ ಬಂದ ಕಡೆ ಹಿಂದುಳಿದ ವರ್ಗಗಳ ಬಗ್ಗೆ ಗಂಟೆ ಗಟ್ಟಲೆ ಭಾಷಣ ಬಿಗಿಯುತ್ತಾರೆ. ಆದರೆ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ರಚನೆಯಾಗಿರುವ ನಿಗಮಗಳಿಗೆ ಅನುದಾನ ಕಡಿತ ಮಾಡಿದ್ದಾರೆ. ಇದು ಹಿಂದುಳಿದ ವರ್ಗಗಳ ಬಗ್ಗೆ ಕಾಂಗ್ರೆಸ್ ಸರ್ಕಾರಕ್ಕೆ ಇರುವ ಬದ್ಧತೆಯನ್ನು ತೋರಿಸುತ್ತದೆ ಎಂದು ಕಿಡಿಕಾರಿದರು.

ಶೋಷಿತ ವರ್ಗಗಳ ಅನುದಾನ ನುಂಗಿದ ಸಿದ್ದರಾಮಯ್ಯಗೆ ಧಿಕ್ಕಾರ, ಅಹಿಂದ ಹೆಸರಿನಲ್ಲಿ ಅಧಿಕಾರಕ್ಕೆ ಬಂದು ಹಿಂದುಳಿದ ವರ್ಗಗಳಿಗೆ ದ್ರೋಹ ಬಗೆದ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ ಘೋಷಣಾ ಫಲಕಗಳನ್ನು ಹಿಡಿದು ಕಾಂಗ್ರೆಸ್ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ಕೂಡಲೇ ಹಿಂದುಳಿದ ವರ್ಗಗಳ ನಿಗಮಗಳಿಗೆ ಅನುದಾನ ಬಿಡುಗಡೆ ಮಾಡದಿದ್ದರೆ ತೀವ್ರ ರೀತಿಯ ಹೋರಾಟ ಮಾಡಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.


ಬಿಜೆಪಿ ಅಲ್ಪ ಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಡಾ.ಅನಿಲ್ ಥಾಮಸ್, ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ನಗರಾಧ್ಯಕ್ಷ ಜೋಗಿ ಮಂಜು, ನಗರ ಬಿಜೆಪಿ ವಕ್ತಾರ ಮಹೇಶ್ ರಾಜ್ ಅರಸ್, ಮುಖಂಡರಾದ ಭಾಸ್ಕರ್, ರಘು ಸೇರಿದಂತೆ ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

3ನೇ ವರ್ಷದ ಸವಿನೆನಪು



ಶ್ರೀಮತಿ ಲಕ್ಷ್ಮೀ

ದುಃಖತಪ್ತರು: ಚಂದ್ರು, ನಿತಿನ್, ಸುನೀಲ್, ರಂಜಿತ, ರಾಹುಲ್, ವರುಣ್



ಜಮೀನು ಮಾರಾಟಕ್ಕಿದೆ

ಮೈಸೂರು ತಾ. ಜಯಪುರ ಹೋ.ಯಲ್ಲಿ ಹತ್ತವಾಳು ಮುಖ್ಯ ರಸ್ತೆಯಲ್ಲಿ 1 ಎಕರೆ 28 ಗುಂಟೆ, ಕೋಳದ ಹುಂಡಿ ಮುಖ್ಯ ರಸ್ತೆಯಲ್ಲಿ 1 ಎಕರೆ 31 ಗುಂಟೆ, ಮಾದೂರಹುಂಡಿ ಗ್ರಾಮದಲ್ಲಿ 1 ಎಕರೆ 31 ಗುಂಟೆ, ಮಾದೂರಲ್ಲಿ 32 ಗುಂಟೆ ಮತ್ತು 25 ಗುಂಟೆ ಹಾಗೂ ಮಹಾಲಕ್ಷ್ಮಿ ಲೇಔಟ್ ಪಕ್ಕದಲ್ಲಿ 20 ಗುಂಟೆ ತಂತಿ ಬೇಲಿ ಕಾಂಪೌಂಡ್ ಗೇಟ್ ಹಾಕಲಾಗಿದೆ. ಕಡಿಮೆ ಬೆಲೆಯಲ್ಲಿ ಮಾರಾಟಕ್ಕೆ ಜಮೀನುಗಳೂ ಇವೆ. ಸಂಪರ್ಕಿಸಿ:

9945661696, 9663793666

RESIDENTIAL SITE FOR SALE

Measuring 30x60 at Herbal Coco Enclave (near Mysore airport, situated in industrial area) Madaragalli Village Varuna hobli, Mysore, MUDA approved no brokers entertained...

6360334312

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ





VILLA PLOTS FOR SALE

30x40 & 30x50

READY FOR CONSTRUCTION
Beside Narayan Guru Nagara, Bogadi - Gaddige Road, Mysore

Free Site Visit Call Now
88614 40528 / 97314 00249

MAHENDRA DEVELOPERS

Muda Approved
SITES & HOUSE FOR SALE

Vajamangala: 20x30, 20x40, 30x40
Nagawala : 20x40, 30x40, 30x50, 40x60
Hunsuru : 20x30, 20x40, 30x40
Devagalli: 30x40, 40x60
Uttanahalli : 5.04 Guntas, Farm Land.

8884001233, 9620546347



ಹಸಿರು ನಮ್ಮ ಉಸಿರು

Exchange your old sofa set to brand new sofa set also repair done. contact
9591012944

Central Sericultural Research & Training Institute

(Central Silk Board-Min of Textiles - Govt. Of India)
Manandavadi Road, Srirampura, Mysore-570008

CS&RTI/ES/BBL/PA/DEC/2024-25/ Dated: 13/12/2024

WALK-IN-INTERVIEW FOR THE POST OF PROJECT ASSISTANT

A Walk-in-Interview will be held on 30.12.2024 at Central Sericultural Research and Training Institute, Srirampura, Mysuru - 570 008 as shown below:

'A' 01 (One) Project Assistant (PA) purely on contract basis under Institutional Consultancy Project approved title "Development of Anti- diabetic formulations from mulberry leaf extract/powder" [2024-CSB-INC-31] purely on contract basis for a period Up to November 2025 or completion of project whichever is earlier under CSB Terms and Conditions.

Qualifications for Project Assistant (PA): B.Sc in Life Sciences Bachelor of Science in life sciences with minimum 55% marks (50% for SC/ST candidates). Walk-in-Interview will be held on 30.12.2024, time 10:30 AM (candidates should reach the venue by 9:30 AM for verification of documents, other recruitment procedures).

Interested can also visit our website www.cstrimys.res.in, https://csb.gov.in/ for details.

Sd/- Director, CSR&TI, Mysuru

ಬೇಕಾಗಿದ್ದಾರೆ

1. **ಕ್ಯಾಷಿಯರ್**
ವಿದ್ಯಾರ್ಹತೆ : ಕಂಪ್ಯೂಟರ್‌ನ ಜ್ಞಾನವಿರಬೇಕು ಹಾಗೂ ಯಾವುದೇ ಒಂದು ವಿಭಾಗವನ್ನು ಸ್ವತಂತ್ರವಾಗಿ ನಿರ್ವಹಿಸುವ ಅನುಭವವಿರಬೇಕು.
2. **ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್**
ಯಾವುದೇ ಒಂದು ವಿಭಾಗವನ್ನು ಸ್ವತಂತ್ರವಾಗಿ ನಿರ್ವಹಿಸಲು ಸಮರ್ಥರಿರುವ ಅನುಭವಿ / ಅನುಭವವಿಲ್ಲದಿರುವ ಅಭ್ಯರ್ಥಿಗಳು ಅರ್ಜಿಸಲ್ಲಿಸಬಹುದು.
ಅನುಭವದ ಆಧಾರದ ಮೇಲೆ ವೇತನ ನೀಡಲಾಗುವುದು.

ನೇರ ಸಂದರ್ಶನಕ್ಕೆ ನಿಮ್ಮ ಸ್ವವಿವರದೊಂದಿಗೆ ಈ ಕೆಳಗಿನ ವಿಳಾಸಕ್ಕೆ ಭೇಟಿಕೊಡಿ.

ಮೋಹನ್ ಭಂಡಾರ್ ಅನೆಕ್ಸ್
ಸೂಪರ್ ಮಾರ್ಕೆಟ್
ಬಲ್ಲಾಳ್ ಸರ್ಕಲ್ ಹತ್ತಿರ, ಮೈಸೂರು
ವಿಳಾಸ : ನಂ.1217, ಟೊಯೋಟ ಶೋರೂಂ ಪಕ್ಕ, ಕೃಷ್ಣಮೂರ್ತಿಪುರಂ.

ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ

ಮೈಸೂರು ಸೆಂಟರ್
ಅರ್ಪಿಸುವ
in aid of Mysore Builders' Charitable Trust (R)

ಮೈಬಿಲ್ಡ್ 24

- Building Materials
- Pavements
- Generators
- Plumbing Systems
- Bathroom Fittings
- Kitchen Cabinets
- Interiors
- Floor Tiles
- Roofing Materials
- Construction Chemicals
- Building Automation
- Solar Systems
- Paints & Hardware
- Building Electrical
- Financial Institutions
- Construction Equipments
- Builders & Developers
- Elevators
- Lighting Products
- Pre Engineering Buildings
- Landscaping Resources
- Rain Water Harvesting Systems

Timings: 10 AM to 9 PM — Where Visions Get Built ...

Entertainment — Food Court

A Grand Exhibition of Construction Materials, Equipments & State of the art Technologies, Interior decor and future generation lifestyle & Dream Homes, Apartments, Villas, Plots, Commercial properties...

Entry Fee ₹ 30/-

12 ರಿಂದ 16ನೇ ಡಿಸೆಂಬರ್ 2024 ರವರೆಗೆ ಸ್ಥಳ: ಮಹಾರಾಜ ಕಾಲೇಜು ಮೈದಾನ, ಮೈಸೂರು

PATRON SPONSORS — PLATINUM SPONSORS — GOLD SPONSORS — SILVER SPONSORS



5ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಪುಟ್ಟತಾಯಮ್ಮನವರು

(ಲೇ.ಎಂ.ಕರೀಗೌಡರ ಧರ್ಮಪತ್ನಿ)

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲೇ ಇರುವ

ದುಃಖತಪ್ತರು: ಶ್ರೀ ಕೆ. ವಜ್ರೇಗೌಡರು, ಪಿ.ಎಲ್.ಡಿ. ಬ್ಯಾಂಕ್ ಮಾಜಿ ಅಧ್ಯಕ್ಷರು ಮತ್ತು ಶ್ರೀ ಕೆ. ನಾಗೇಂದ್ರರವರು, ಹೆಣ್ಣುಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು. ಶ್ರೀ ಮಹದೇಶ್ವರ ಟೂರ್ಸ್ ಅಂಡ್ ಟ್ರಾವೆಲ್ಸ್ ಸಿಬ್ಬಂದಿ ವರ್ಗ ಹಾಗೂ ಕಗ್ಗಲೀಪುರ ಗ್ರಾಮಸ್ಥರು ತಿ.ನರಸೀಪುರ ತಾಲ್ಲೂಕು...

ದಿ ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ.,

ಚಾಮರಾಜ ಜೋಡಿ ರಸ್ತೆ, ಮೈಸೂರು.

ಚುನಾವಣಾ ವೇಳಾಪಟ್ಟಿ ಪ್ರಕಟಣೆ

ದಿ ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ., ಚಾಮರಾಜ ಜೋಡಿ ರಸ್ತೆ, ಮೈಸೂರು., ಈ ಸಂಘದ ಆಡಳಿತ ಮಂಡಳಿ ಚುನಾವಣೆಯನ್ನು ನಡೆಸುವ ಸಂಬಂಧ ಈ ಕೆಳಕಂಡಂತೆ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

1.	ನಾಮಪತ್ರವನ್ನು ಸ್ವೀಕರಿಸಲು ಪ್ರಾರಂಭದ ದಿನಾಂಕ	ದಿನಾಂಕ 15-12-2024ನೇ ಭಾನುವಾರ ಬೆಳಗ್ಗೆ 11-00 ಗಂಟೆಯಿಂದ ಅಪರಾಹ್ನ 3-00 ಗಂಟೆಯವರೆಗೆ
2.	ನಾಮಪತ್ರವನ್ನು ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ 21-12-2024ನೇ ಶನಿವಾರ ಅಪರಾಹ್ನ 3-00 ಗಂಟೆ ಒಳಗೆ
3.	ನಾಮಪತ್ರಗಳ ಪರಿಶೀಲನೆ	ದಿನಾಂಕ 22-12-2024ನೇ ಭಾನುವಾರ ಬೆಳಗ್ಗೆ 11-00 ಗಂಟೆಗೆ ಸಂಘದ ಕಛೇರಿಯಲ್ಲಿ
4.	ನಾಮಪತ್ರಗಳನ್ನು ವಾಪಸ್ಸು ಪಡೆಯಲು ಕೊನೆಯ ದಿನಾಂಕ	ದಿನಾಂಕ 23-12-2024ನೇ ಸೋಮವಾರ ಅಪರಾಹ್ನ 3-00 ಗಂಟೆಯ ಒಳಗೆ
5.	ಚುನಾವಣೆಯ ದಿನಾಂಕ, ಸಮಯ ಮತ್ತು ಸ್ಥಳ	ದಿನಾಂಕ 29-12-2024, ಭಾನುವಾರ ಬೆಳಗ್ಗೆ 9-00 ರಿಂದ ಸಂಜೆ 4-00 ಗಂಟೆಯವರೆಗೆ ಸಂಘದ ಸಮುದಾಯ ಭವನ, ನಾಲಾ ಬೀದಿ, ಕೆ.ಆರ್. ಮೊಹಲ್ಲಾ, ಮೈಸೂರು
6.	ಮತಗಳ ಎಣಿಕೆ ಮತ್ತು ಫಲಿತಾಂಶ ಪ್ರಕಟಣೆ	ದಿನಾಂಕ 29-12-2024ರಂದು ಭಾನುವಾರ ಮತದಾನ ಮುಕ್ತಾಯಗೊಂಡ ನಂತರ

ದಿನಾಂಕ :13-12-2024.

ಸಹಿ/- ರಿಟರ್ನಿಂಗ್ ಅಧಿಕಾರಿ, ದಿ ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ., ಮೈಸೂರು.

ವಿಶೇಷ ಸೂಚನೆ: ಚುನಾವಣೆಯಲ್ಲಿ ಮತದಾನ ಮಾಡಲು ಸಂಘದ ಮಾನ್ಯ ಸದಸ್ಯರುಗಳು ಸೊಸೈಟಿಯಿಂದ ನೀಡಿರುವ ಗುರುತಿನ ಕಾರ್ಡನ್ನು ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ. ತಹಲ್ವರೆವಿಗೂ ಸೊಸೈಟಿಯಿಂದ ಗುರುತಿನ ಕಾರ್ಡನ್ನು ಪಡೆಯದೇ ಇರುವ ಸದಸ್ಯರುಗಳು ತಮ್ಮ ಇತ್ತೀಚಿನ ಎರಡು ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಸೊಸೈಟಿಗೆ ಹಾಜರುಪಡಿಸಿ, ಗುರುತಿನ ಕಾರ್ಡನ್ನು ಪಡೆಯಲು ಕೋರಿದೆ.

ಸಹಿ/- ಕಾರ್ಯದರ್ಶಿ.
ದಿ ಮೈಸೂರು ಸಿಟಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ., ಮೈಸೂರು.